# ಯುಗಶಕ್ತಿ

- ಧಾರ್ಮಿಕ ಸಹಿಷ್ಣುತೆ
- ಪವಿತ್ರ ಖುರ್‌ಆನ್ ಸರ್ವ ಮಾನವರಿಗೋಸ್ಕರ
- ಇಮಾಂ ಮಹ್‌ದಿಯ ಕುರುಹುಗಳು
- ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ
- ಅಹ್ಮದಿಯಾ ಜಮಾಅತಿನ ಪ್ರಗತಿ
- ಧರ್ಮದ ನಾಮದಲ್ಲಿ ರಕ್ತಪಾತ

ಅಕ್ಟೋಬರ್ 2005

ತ್ರೈಮಾಸಿಕ
ಬೆಲೆ ರೂ.5/-

"ಎಲೈ ಜನರೇ, ನಿಮ್ಮ ಪ್ರಭುವಿಗೆ ನೀವು ಭಯಭಕ್ತಿ ತೋರಿಸಿರಿ. ತಂದೆಯು ಮಗನ ಪ್ರಯೋಜನಕ್ಕಾಗಲಿ, ಮಗನು ತಂದೆಯ ಪ್ರಯೋಜನಕ್ಕಾಗಲಿ ಬಾರದಂತಹ ಆ ದಿನದ ಬಗ್ಗೆ ಭಯಪಡಿರಿ. ಅಲ್ಲಾಹನ ವಾಗ್ದಾನ ಸತ್ಯವೇ ಆಗಿದೆ. ಆದ್ದರಿಂದ ಐಹಿಕ ಜೀವನ ನಿಮ್ಮನ್ನು ಮೋಸಗೊಳಿಸದಿರಲಿ. ಮಹಾ ವಂಚಕನು (ಶೈತಾನ) ಅಲ್ಲಾಹನ ಬಗ್ಗೆ ನಿಮ್ಮನ್ನು ವಂಚಿಸದಿರಲಿ."

- ಪವಿತ್ರ ಖುರ್‌ಆನ್ (31:34)

# ಯುಗರಶ್ಮಿ

## ತ್ರೈಮಾಸಿಕ

10-23-1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001

ಬಿಡಿ ಪ್ರತಿ : ರೂ.5/-     ವಾರ್ಷಿಕ ಚಂದಾ : ರೂ.20/-     ಅಂಚೆ ಮೂಲಕ : ರೂ.30/-

**ವಿಷಯ ಸೂಚಿಕೆ** **ಪುಟ**

★ ಪವಿತ್ರ ಖುರ್‌ಆನಿನ ಮಹಿಮೆ 1
★ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು 2
★ ಹಿತೋಪದೇಶಗಳು 3
★ ಧಾರ್ಮಿಕ ಸಹಿಷ್ಣುತೆ 4
★ ಮುಹಮ್ಮದ್ ಪೈಗಂಬರರ ದಾನಶೀಲತೆ 9
★ ಪವಿತ್ರ ಖುರ್‌ಆನ್ ಸರ್ವ ಮಾನವರಿಗೋಸ್ಕರ 10
★ ಇಮಾಂ ಮಹ್‌ದಿಯ ಕುರುಹುಗಳು 12
★ ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 9 15
★ ಅಹ್ಮದಿಯಾ ವಾರ್ತೆಗಳು 20
★ ಸವಿ ನೆನಪು 24
★ ಪುಸ್ತಕ ವಿಭಾಗ : ಧರ್ಮದ ನಾಮದಲ್ಲಿ ರಕ್ತಪಾತ 25

**Statement about ownership and other particulars about the Newspaper Yugarashmi Quarterly**

(Form IV See Rule 8)

1. Place of Publication : Mangalore
2. Period of its publication : Quarterly
3. Printer's Name : Muhammad Yusuf
   Whether citizen of India? : Yes
   Address : 10-23-1008/1, 1st Floor, Ansari Road, Bunder, Mangalore - 575 001
4. Publisher's Name : Muhammad Yusuf
   Whether citizen of India? : Yes
   Address : 10-23-1008/1, 1st Floor, Ansari Road, Bunder, Mangalore - 575 001
5. Editor's Name : Muhammad Yusuf
   Whether citizen of India? : Yes
   Address : 10-23-1008/1, 1st Floor, Ansari Road, Bunder, Mangalore - 575 001
6. Name and address of individuals who own the newspaper and partners or shareholders holding more than one percent of the capital : Jamath Ahmadiyya, 10-23-1008/1, 1st Floor, Ansari Road, Bunder, Mangalore - 575 001

I, Muhammad Yusuf hereby declare that the particulars given above are true to the best of my knowledge and belief.

Date : 1-10-2005

Sd/-
**Muhammad Yusuf**

بِسْمِ اللّٰهِ الرَّحْمٰنِ الرَّحِيْمِ

نَحْمَدُهُ وَنُصَلِّي عَلَىٰ رَسُوْلِهِ الْكَرِيْمِ

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

| ಆರಂಭ : 1975 | ಸಂಪುಟ : 22 | ಅಕ್ಟೋಬರ್ 2005 | ಇಖ಼ಾ 1384 | ಸಂಚಿಕೆ : 2 |
|---|---|---|---|---|


# ಪವಿತ್ರ ಖುರ್‌ಆನಿನ ಮಹಿಮೆ

ಪವಿತ್ರ ಖುರ್‌ಆನ್ ರತ್ನಗಳ ನಿಧಿಸಂಚಯವಾಗಿದೆ; ಲೋಕವು ಅದನ್ನು ತಿಳಿಯುವುದಿಲ್ಲ. *(ಮಲ್‌ಫೂಝಾತ್ - ಸಂಪುಟ 2, ಪುಟ 344)*

ಪವಿತ್ರ ಖುರ್‌ಆನಿನ ಮಹಿಮೆ ಅತ್ಯುನ್ನತವಾಗಿದೆ. ಮಹಾತ್ಮೆಯಲ್ಲಿ ಅದನ್ನು ಮೀರಿಸುವಂಥದ್ದೇನೂ ಇಲ್ಲ. ಅದು 'ಹಕಂ' ಆಗಿದೆ. ಅಂದರೆ, ಅದರ ವಿಧಿ ಅಂತಿಮವಾಗಿದೆ. ಅದು 'ಮುಹೈಮಿನ್' ಆಗಿದೆ. ಅಂದರೆ, ಅದು ಎಲ್ಲ ಮಾರ್ಗದರ್ಶನಗಳ ಸಾರಸಂಗ್ರಹವಾಗಿದೆ. ಅವಶ್ಯವಿರುವ ಎಲ್ಲ ವಾದಮುಖಗಳು ಅದರಲ್ಲಿ ಕ್ರೋಢೀಕರಿಸಲ್ಪಟ್ಟಿವೆ. ಶತ್ರುಗಳ ಸಂಘಟಿತ ಶಕ್ತಿಯನ್ನು ಅದು ಛಿನ್ನ ಭಿನ್ನ ಮಾಡಿಬಿಟ್ಟಿದೆ. ಎಲ್ಲ ವಿಚಾರಗಳ ವಿಶದಾಂಶಗಳು ಅದರಲ್ಲಿ ಅಡಕವಾಗಿವೆ. ಮುಂದೆ ಘಟಿಸುವಂಥ ಮತ್ತು ಹಿಂದೆ ಘಟಿಸಿದಂಥ ವೃತ್ತಾಂತಗಳು ಅದರಲ್ಲಿ ಒಳಗೊಂಡಿವೆ. ಅಸತ್ಯಕ್ಕೆ ಅದರ ಎಡ ಭಾಗದಿಂದಾಗಲಿ, ಬಲ ಭಾಗದಿಂದಾಗಲಿ, ಮುಂದಿನಿಂದಾಗಲಿ, ಹಿಂದಿನಿಂದಾಗಲಿ ಅದನ್ನು ಸಮೀಪಿಸಲಿಕ್ಕೆ ಸಾಧ್ಯವಾಗದು. ಅದು ಅತ್ಯುನ್ನತನಾದ ನಮ್ಮ ಪ್ರಭುವಿನ ಪ್ರಕಾಶವಾಗಿದೆ. *(ರೂಹಾನಿ ಖಝಾಯಿನ್ ಸಂಪುಟ 16, ಪುಟ 103; ಖುತ್ಬ ಇಲ್‌ಹಾಮಿಯ್ಯ)*

ಎಲ್ಲ ಪ್ರತಿಯೊಂದು ಜನತೆಯ ಮತ್ತು ಭಾಷೆಗಾರರ ಮುಂದೆ ಪ್ರಕಟಪಡಿಸಬಹುದಾದ ಪವಿತ್ರ ಖುರ್‌ಆನಿನ ಪ್ರತ್ಯಕ್ಷವಾದ ಈ ಅದ್ಭುತ ವೈಶಿಷ್ಟ್ಯವನ್ನು ಮುಂದಿಟ್ಟುಕೊಂಡು ಭಾರತೀಯನೋ ಫಾರ್ಸಿಯೋ ಯುರೋಪಿಯನ್ನನೋ ಅಮೇರಿಕನ್ನನೋ ಬೇರೆ ಯಾವುದೇ ರಾಜ್ಯದವನೋ ಆದ ಯಾವುದೇ ವ್ಯಕ್ತಿಯನ್ನು ನಿರಾಯುಧನೂ ನಿರುದ್ಧಕಂಠನೂ ನಿರುತ್ತರನೂ ಆಗಿ ಮಾರ್ಪಡಿಸಲು ನನ್ನಿಂದ ಸಾಧ್ಯವೆಂದು ತಿಳಿದುಕೊಳ್ಳಬೇಕಾಗಿದೆ. ಪ್ರತಿಯೊಂದು ಕಾಲದಲ್ಲಿ ಆಯಾಯ ಕಾಲದ ಆವಶ್ಯಾನುಸಾರವಾಗಿ, ಪ್ರತಿಯೊಂದು ಕಾಲದ ವೈಚಾರಿಕತೆಯನ್ನು ಎದುರಿಸಲಿಕ್ಕಾಗಿ ಸಾಯುಧರಾದ ಸೈನಿಕರಂತೆ ಸನ್ನದ್ಧವಾಗುವ ಅಂತ್ಯವಿಲ್ಲದ ಅಗಾಧಜ್ಞಾನಗಳೂ ಸತ್ಯತತ್ವಗಳೂ ಬುದ್ಧಿಜ್ಞಾನಗಳೂ ಖುರ್‌ಆನಿನ ವಚನಗಳಲ್ಲಿ ತುಂಬಿಕೊಂಡಿವೆ. ಪವಿತ್ರ ಖುರ್‌ಆನ್ ಅದರ ಸತ್ಯತತ್ವಗಳ ಮತ್ತು ಸೂಕ್ಷ್ಮಜ್ಞಾನಗಳ ವಿಚಾರದಲ್ಲಿ ಅಪರ್ಯಾಪ್ತವೆಂದಾದರೆ ಅದು

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

- ಕುಸ್ತಿಯಲ್ಲಿ ಗೆಲ್ಲುವವನು ಶಕ್ತಿವಂತನಲ್ಲ; ಕೋಪವನ್ನು ನಿಯಂತ್ರಿಸಲು ಸಾಮರ್ಥ್ಯವುಳ್ಳವನೇ ಶಕ್ತಿವಂತನು.
- ಸತ್ಯವಿಶ್ವಾಸಿಗೆ ತನ್ನ ಶರೀರದಿಂದಲೂ ಸಂತಾನಗಳಿಂದಲೂ ಸಂಪತ್ತಿನಿಂದಲೂ ಪರೀಕ್ಷೆಯುಂಟಾಗುವುದು. ಕೊನೆಗೆ ಅವನು ಪಾಪರಹಿತನಾಗಿ ಸ್ವರ್ಗವನ್ನು ಪ್ರವೇಶಿಸುವನು.
- ಸಂಶಯವಿರುವುದನ್ನು ತೊರೆದು ಖಚಿತವಾದುದನ್ನು ಸ್ವೀಕರಿಸು.
- ಖಂಡಿತವಾಗಿಯೂ ಸತ್ಯವು ಮನಃಶಾಂತಿಯನ್ನೂ ಸುಳ್ಳು ಪರಿಭ್ರಮೆಯನ್ನೂ ಉಂಟುಮಾಡುತ್ತದೆ.
- ನೀವು ಅಕ್ರಮ ಮಾಡಬಾರದು. ಅಕ್ರಮವು ಅಂತ್ಯದಿನದಂದು ಇರುಳಾಗುವುದು. ಜಿಪುಣತನ ತೋರಿಸಬಾರದು. ಜಿಪುಣತನ ನಿಮಗೆ ಮುಂಚೆಯಿದ್ದವರನ್ನು ನಾಶಪಡಿಸಿದೆ. ರಕ್ತಪಾತಕ್ಕೂ ನಿಷಿದ್ಧವನ್ನು ಧರ್ಮಬದ್ಧಗೊಳಿಸಲಿಕ್ಕೂ ಅದು ಅವರನ್ನು ಪ್ರೇರೇಪಿಸಿದೆ.
- ಯಾರ ಬಳಿಯಲ್ಲಾದರೂ ಹೆಚ್ಚು ವಾಹನವಿದ್ದರೆ ವಾಹನವಿಲ್ಲದವರಿಗೆ ನೀಡಲಿ. ಹಾಗೆಯೇ ಯಾರ ಬಳಿಯಲ್ಲಾದರೂ ಹೆಚ್ಚು ಆಹಾರವಿದ್ದರೆ ಇಲ್ಲದವರಿಗೆ ನೀಡಲಿ.
- ನೀವು ಪರಸ್ಪರ ವಿನಯ ತೋರಿಸುವವರಾಗಬೇಕು; ಯಾರೂ ಅಹಂಕಾರ ತೋರ್ಪಡಿಸಬಾರದು. ಹಾಗೆಯೇ ಯಾರೂ ಇತರರನ್ನು ಆಕ್ರಮಿಸಬಾರದು ಎಂದು ಅಲ್ಲಾಹನು ನನಗೆ ಅರುಹಿದ್ದಾನೆ.

---

ಸಮಗ್ರವಾದ ಒಂದು ದಿವ್ಯಜ್ಞಾನವಾಗಲಾರದು. *(ರೂಹಾನಿ ಖಝಾಯಿನ್ - ಸಂಪುಟ 3, ಪುಟ 255)*

ಪವಿತ್ರ ಖುರ್‌ಆನ್ ಒಂದು ದಿವ್ಯಾದ್ಭುತವಾಗಿದೆ. ಅದಕ್ಕೆ ತುಲ್ಯವಾದ ಮತ್ತೊಂದು ಅದ್ಭುತ ಇದಕ್ಕೆ ಮುಂಚೆ ಉಂಟಾಗಿಲ್ಲ. ಮುಂದೆಯೂ ಉಂಟಾಗಲಿಕ್ಕಿಲ್ಲ. ಅದರ ಅನುಗ್ರಹಗಳ ಮತ್ತು ಔದಾರ್ಯಗಳ ಸಂಪತ್ತು ಸದಾ ನೆಲೆನಿಲ್ಲುವುದು. ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ರವರ ಕಾಲದಲ್ಲಿ ಯಾವ ರೀತಿಯಲ್ಲಾಗಿತ್ತೋ ಅದೇ ರೀತಿಯಲ್ಲೇ ಅದು ಎಲ್ಲ ಕಾಲಗಳಲ್ಲಿ ಪ್ರಕಾಶ ಬೀರುವಂಥದ್ದಾಗಿದೆ. ಪ್ರತಿಯೊಬ್ಬನ ಮಾತು ಆತನ ಮನೋಭಾವಕ್ಕೆ ಅನುಗುಣವಾಗಿರುವುದೆಂದು ನೆನಪಿಡಬೇಕಾಗಿದೆ. ಒಬ್ಬ ವ್ಯಕ್ತಿಯ ಮನೋಭಾವವೂ ಮನೋದಾರ್ಢ್ಯವೂ ಲಕ್ಷ್ಯಗಳ ಶ್ರೇಷ್ಠತೆಯೂ ಎಷ್ಟರ ಮಟ್ಟಿಗಿದೆಯೋ ಅಷ್ಟರ ಮಟ್ಟಿಗೆ ಆತನ ಮಾತಿಗೆ ಶಕ್ತಿಯಿರುವುದು. ದೈವಿಕ ಪ್ರಕಟನೆಗಳ ಸ್ಥಿತಿ ಸಹ ಇದೇ ರೀತಿ ಆಗಿದೆ. ಯಾವ ವ್ಯಕ್ತಿಗೆ ದೇವ ಪ್ರಕಟಣೆ ಅವತೀರ್ಣವಾಗುತ್ತದೋ, ಆತನು ಯಾವ ರೀತಿಯ ವ್ಯಕ್ತಿಯೋ, ಅದೇ ತರದ ವಚನ ಆತನಿಗೆ ಲಭಿಸುವುದು. ಒಟ್ಟಾರೆ, ಆ ಪುಣ್ಯಪುರುಷರಿಗೆ ಲಭಿಸಿದ ವಚನ ಅತ್ಯುನ್ನತವಾದುದು. ಅಂಥ ಮನೋವೈಶಾಲ್ಯ, ಮನೋದಾರ್ಢ್ಯ ಮತ್ತು ಅಚಂಚಲ ಮನಸ್ಸಿನ ಇನ್ನೊಬ್ಬ ವ್ಯಕ್ತಿ ಇನ್ನು ಜನ್ಮತಾಳಲಿಕ್ಕಿಲ್ಲ. *(ಮಲ್‌ಫೂಝಾತ್ - ಸಂಪುಟ 3, ಪುಟ 57)*

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಹಿತೋಪದೇಶಗಳು

❖ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

"ಸಾಮಾನ್ಯ ಲೌಕಿಕ ಜನರು ಜೀವಿಸುವ ರೀತಿಯಲ್ಲಿ ಜೀವಿಸಲಿಕ್ಕೆ ಇರುವುದಲ್ಲ ನಮ್ಮ ಜಮಾಅತ್ ಎಂಬ ವಿಚಾರ ನೆನಪಿಡಿರಿ. ತಾವು ಈ ಜಮಾಅತಿನಲ್ಲಿರುವವರೆಂದು ಮಾತ್ರ ಹೇಳಿ, ಕ್ರಿಯಾಶೀಲರಾಗುವ ಅಗತ್ಯವಿಲ್ಲವೆಂದು ಭಾವಿಸುವುದು ಸರಿಯಲ್ಲ. ನಿರ್ಭಾಗ್ಯವಶಾತ್ ಮುಸ್ಲಿಮರ ಇಂದಿನ ಅವಸ್ಥೆ ಇದಾಗಿದೆ. 'ನೀನು ಮುಸ್ಲಿಮನೇ?' ಎಂದು ಕೇಳಿದರೆ ಉತ್ತರಿಸುವನು: 'ಶುಕ್‌ರ್ ಅಲ್‌ಹಮ್ದುಲಿಲ್ಲಾಹ್.' ಆದರೆ ಅವನು ನಮಾಝ್ ಮಾಡುವುದಿಲ್ಲ. ಅಲ್ಲಾಹನ ಚಿಹ್ನೆಗಳನ್ನು ಗೌರವಿಸುವುದಿಲ್ಲ. ಆದ್ದರಿಂದ ಮಾಡಿ ತೋರಿಸದ, ಬಾಯಿಯಿಂದ ಮಾತ್ರವಿರುವ ಸಮ್ಮತಿಯನ್ನು ನಿಮ್ಮಿಂದ ನಾನು ಬಯಸುವುದಿಲ್ಲ. ಅದು ಅತ್ಯಂತ ಕೀಳ್ಮಟ್ಟದ ಸ್ಥಿತಿಯಾಗಿದೆ. ಅಲ್ಲಾಹನು ಅದನ್ನು ಇಷ್ಟಪಡುವುದಿಲ್ಲ. ಲೋಕದಲ್ಲಿ ಈ ಸ್ಥಿತಿಯಿರುವುದರಿಂದಾಗಿ, ಅದನ್ನು ಬದಲಾಯಿಸಿ ಉತ್ತಮಗೊಳಿಸಲು ಅಲ್ಲಾಹನು ನನ್ನನ್ನು ನಿಯುಕ್ತಗೊಳಿಸಿದ್ದಾನೆ. ಆದ್ದರಿಂದ ನನ್ನೊಂದಿಗೆ ಸಂಬಂಧವನ್ನು ಸ್ಥಾಪಿಸಿದ ಬಳಿಕವೂ ತನ್ನನ್ನು ಸುಧಾರಣೆಗೊಳಪಡಿಸದೆ, ಕರ್ಮಪರವಾದ ಶಕ್ತಿಗಳನ್ನು ಅಭಿವೃದ್ಧಿಪಡಿಸದೆ, ನಾಲಿಗೆಯ ಒಪ್ಪಿಗೆ ಮಾತ್ರ ಸಾಕು ಎಂದು ಭಾವಿಸುವುದಾದರೆ, ಅವನು ತನ್ನ ವರ್ತನೆ ಮೂಲಕ ನಾನು ಆಗಮಿಸಬೇಕಾದ ಅವಶ್ಯವಿಲ್ಲ ಎಂಬ ಅಭಿಮತಕ್ಕೆ ಶಕ್ತಿನೀಡುತ್ತಾನೆ. ನೀವು ನಿಮ್ಮ ಕರ್ಮಗಳ ಮೂಲಕ ನನ್ನ ಬರುವಿಕೆ ನಿರರ್ಥಕವೆಂದು ಸಾಬೀತುಪಡಿಸಲು ಇಚ್ಛಿಸುತ್ತೀರೆಂದಾಯಿತು. ಹಾಗಿರುವಾಗ ನನ್ನೊಂದಿಗೆ ಸಂಬಂಧವಿದೆಯೆಂಬುದಕ್ಕೆ ಏನರ್ಥವಿದೆ? ನನ್ನೊಂದಿಗೆ ಸಂಬಂಧವಿದ್ದರೆ ನನ್ನ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಿರಿ. ಅದೇನೆಂದರೆ, ಅಲ್ಲಾಹನ ಪವಿತ್ರ ಸನ್ನಿಧಿಯಲ್ಲಿ ನಿಮ್ಮ ಪ್ರಾಮಾಣಿಕತೆ ಮತ್ತು ವಿಧೇಯತೆಯನ್ನು ತೋರಿಸುವುದು. ಮುಹಮ್ಮದ್ ಪೈಗಂಬರ್(ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ತೋರಿಸಿದಂತೆ, ಶಿಷ್ಯವೃಂದ (ಸಹಾಬತ್)ಮಾಡಿದಂತೆ ಪವಿತ್ರ ಖುರ್‌ಆನಿನ ಅಧ್ಯಾಪನಗಳಿಗೆ ಅನುಸಾರವಾಗಿ ವರ್ತಿಸಿರಿ. ಅದರ ಸರಿಯಾದ ಉದ್ದೇಶವನ್ನು ಮನವರಿಕೆ ಮಾಡಿರಿ. ಅಲ್ಲಾಹನ ಸನ್ನಿಧಿಯಲ್ಲಿ ನಾಲಗೆಯ ಒಪ್ಪಿಗೆ ಮಾತ್ರ ಸಾಕಾಗದು; ಕರ್ಮ ಸಹ ಅನಿವಾರ್ಯವಾಗಿದೆ. ಅಲ್ಲಾಹನು ನೆಲೆ ನಿಲ್ಲಿಸಲು ಇಚ್ಛಿಸುವ ಜಮಾಅತ್ ಕರ್ಮರಹಿತವಾಗಿ ಜೀವಂತವಾಗಿ ಬಾಳದು. ಹಝ್ರತ್ ಆದಮರ (ಅಲೈಹಿಸ್ಸಲಾಂ) ಕಾಲದಿಂದಲೇ ಸಿದ್ಧತೆ ಆರಂಭಿಸಿದ ಮಹತ್ತಾದ ಆ ಜಮಾಅತೇ ಇದಾಗಿದೆ. ಈ ಕಾಲಕ್ಕೆ ಸಂಬಂಧಿಸಿ ತಿಳಿಸದಿದ್ದ ಯಾವ ಪ್ರವಾದಿಯೂ ಲೋಕದಲ್ಲಿ ಬಂದಿಲ್ಲ. ಆದ್ದರಿಂದ ಇದನ್ನು ಗೌರವಿಸಿರಿ. ಸ್ವಂತ ಕರ್ಮದಿಂದ ಸತ್ಯಕ್ಕೆ ಅರ್ಹರಾದವರ ಸಂಘ ನೀವೇ ಆಗಿದ್ದೀರೆಂದು ಸಾಬೀತುಪಡಿಸಿ ತೋರಿಸುವುದೇ ಗೌರವಿಸುವುದು ಎಂಬುದರ ಅರ್ಥ.

"ನನ್ನ ಜಮಾಅತಿನಲ್ಲಿರುವವರೆಲ್ಲ ಈ ಉಪದೇಶವನ್ನು ಗಮನವಿಟ್ಟು ಕೇಳಿರಿ. ನೀವು ಈ ಜಮಾಅತಿನಲ್ಲಿ ಪ್ರವೇಶಿಸಿ ನನ್ನೊಂದಿಗೆ ಸಂಬಂಧವಿಟ್ಟುಕೊಂಡು ನನ್ನ ಶಿಷ್ಯತ್ವವನ್ನು ಸ್ವೀಕರಿಸಿರುವಿರಿ. ಇದರ ಉದ್ದೇಶ ಸಾದಾಚಾರ, ಸೌಶೀಲ್ಯ ಮತ್ತು ದೇವಭಯದ ಉನ್ನತ ಮಟ್ಟವನ್ನು ತಲಪುವುದಾಗಿದೆ. ಯಾವುದೇ ರೀತಿಯ ಕಲಹ, ದ್ರೋಹ, ದುರ್ನಡತೆ ಅವರ ಸಮೀಪಕ್ಕೆ ಬರಬಾರದು. ಅವರು ನಿಷ್ಠೆಯಿಂದ ಐದು ಹೊತ್ತಿನ ನಮಾಝ್ ಮಾಡುವವರಾಗಬೇಕು. ಸುಳ್ಳು ಹೇಳಬಾರದು. ನಾಲಗೆಯಿಂದ ಯಾರಿಗೂ ನೋವುಂಟುಮಾಡಬಾರದು. ಯಾವುದೇ ದುಷ್ಕೃತ್ಯ ಮಾಡಬಾರದು. ಯಾವುದೇ ತರದ ದುಷ್ಟವರ್ತನೆಯ ಕುರಿತಾಗಲಿ, ಅಕ್ರಮ ಮಾಡುವುದರ ಕುರಿತಾಗಲಿ, ಕಲಹ ಮಾಡುವುದರ ಕುರಿತಾಗಲಿ, ಕ್ಷೋಭೆ ಹಬ್ಬಿಸುವುದರ ಕುರಿತಾಗಲಿ ಯೋಚಿಸಲೇ ಬಾರದು. (ಮಾಡಬಾರದೆಂದಲ್ಲ; ಮಾಡುವುದರ ಯೋಚನೆಯೇ ಇರಬಾರದು.) ಸಂಕ್ಷಿಪ್ತದಲ್ಲಿ, ಎಲ್ಲ ವಿಧ ತಪ್ಪುಗಳಿಂದ, ಅಂದರೆ ಪಾಪಗಳಿಂದ, ದುಷ್ಕೃತ್ಯಗಳಿಂದ, ಮಾಡಬಾರದ ಹೇಳಬಾರದ ವಿಚಾರಗಳಿಂದ, ಎಲ್ಲ ವಿಧ ದೇಹೇಚ್ಛೆಗಳಿಂದ, ನಿರರ್ಥಕ ವರ್ತನೆಗಳಿಂದ ಅಗಲಿ ನಿಲ್ಲಬೇಕಾಗಿದೆ. ಅಲ್ಲಾಹನ, ಪರಿಶುದ್ಧ ಹೃದಯವಂತರಾದ, ನಿರುಪದ್ರವಕಾರಿಗಳಾದ ಮತ್ತು ಸತ್‌ಸ್ವಭಾವಿಗಳಾದ ದಾಸರಾಗಿರಿ. ವಿಷಲಿಪ್ತವಾದ ಯಾವುದೇ ಸ್ವಭಾವ ಬಾಕಿಯುಳಿಯಬಾರದು. ಮನುಷ್ಯ ಕುಲದೊಡನೆ ಸಹತಾಪ ತೋರಿಸಿರಿ. ಅಲ್ಲಾಹನಿಗೆ ಭಯಪಡಿರಿ. ನಾಲಗೆಯನ್ನೂ ಕೈಗಳನ್ನೂ ಚಿಂತನೆಗಳನ್ನೂ ಎಲ್ಲತರ ಅಶುದ್ಧಿಯಿಂದ, ಕಲಹದ ವಾತಾವರಣದಿಂದ ಮತ್ತು ವಂಚನೆಯಿಂದ ರಕ್ಷಿಸಿರಿ. ಅತ್ಯಂತ ನಿಷ್ಠೆಯಿಂದ ಐದು ಹೊತ್ತಿನ ನಮಾಝ್ ಮಾಡಿರಿ.

"ಕೆಟ್ಟ ಜನರ ಕೂಟದಲ್ಲಿ ಕುಳಿತುಕೊಳ್ಳಬಾರದು. ಅಲ್ಲಾಹನ ಆಜ್ಞೆಗಳನ್ನು ಧಿಕ್ಕರಿಸುವ, ಸಹಜೀವಿಗಳಿಗೋಸ್ಕರ ಮಾಡಬೇಕಾದ ಕರ್ತವ್ಯಗಳನ್ನು ನಿರ್ವಹಿಸದ ದುಷ್ಕರ್ಮಿಯೂ ದುಸ್ವಭಾವಿಯೂ ದುರ್ನಡತೆಗಾರನೂ ಎಂದು ಸಾಬೀತಾದರೆ, ದೇವದಾಸರನ್ನು ವಂಚಿಸಲು ಯತ್ನಿಸುವವನೆಂದು ಸಾಬೀತಾದರೆ, ಅಂಥ ಹಾನಿ ಮಾಡುವ ವ್ಯಕ್ತಿಯನ್ನು ನಿಮ್ಮ ಮಧ್ಯದಿಂದ ಕಡ್ಡಾಯವಾಗಿ ನೀಗಿಸಬೇಕಾಗಿದೆ... ಅಂಥ ಅಪಾಯಕಾರಿ ಜನರಿಂದ ಸಂಪೂರ್ಣ ಬಿಟ್ಟು ನಿಲ್ಲಬೇಕಾಗಿದೆ. ಯಾವುದೇ ಧರ್ಮಾನುಯಾಯಿಗಾಗಲಿ ಯಾವುದೇ ಸಂಘದವನಿಗಾಲಿ ಹಾನಿಮಾಡಬೇಕೆಂಬ ಯೋಚನೆ ಇಟ್ಟು ಕೊಳ್ಳಬಾರದು. ಎಲ್ಲರಿಗೂ ಸದುಪದೇಶಗಳನ್ನು ನೀಡವವರಾಗಿರಿ. ಅಂದರೆ, ಸತ್ಯವಾದ ರೀತಿಯಲ್ಲಿ ಉಪದೇಶಿಸುವವರೂ ಒಳ್ಳೆಯ ಅಭಿಪ್ರಾಯಗಳನ್ನು ಕೊಡುವವರೂ ಎಲ್ಲರ ಒಳಿತನ್ನು ಬಯಸುವವರೂ ಆಗಿರಿ.

"ಉಪದ್ರವಕಾರಿಗಳೂ ಗೂಂಡಾಗಳೂ ದುರ್ನಡತೆಗಾರರೂ ಗಲಭೆಕೋರರೂ ಎಂದಿಗೂ ನಿಮ್ಮ ಕೂಟದಲ್ಲಿ ಸೇರಿಕೊಳ್ಳಬಾರದು; ನಿಮ್ಮ ಮನೆಗಳಲ್ಲಿ ವಾಸಿಸಲೂ ಬಾರದು. ಅವರು ಯಾವುದಾದರೂ ಸಮಯದಲ್ಲಿ ನಿಮ್ಮನ್ನು ವಂಚಿಸುವರು. ಇವೆಲ್ಲ ನಾನು ಆದಿಯಿಂದಲೇ ಹೇಳುತ್ತಾ ಬಂದ ವಿಚಾರಗಳಾಗಿವೆ. ನನ್ನ ಎಲ್ಲ ಉಪದೇಶಗಳನ್ನು ಅನುಸರಿಸಿ ನಡೆಯಬೇಕಾದುದು ನನ್ನ ಜಮಾಅತಿನಲ್ಲಿರುವವರಿಗೆ ಕಡ್ಡಾಯವಾಗಿದೆ. ನಿಮ್ಮ ಕೂಟದಲ್ಲಿ ಅಧಿಕ್ಷೇಪಗಳೂ ಪರಿಹಾಸ್ಯಗಳೂ ಇರಬಾರದು. ಸಹೃದಯವಂತರಾಗಿ, ಸತ್‌ಸ್ವಭಾವಿಗಳಾಗಿ, ಸದ್ವಿಚಾರವಂತರಾಗಿ ಭೂಮಿಯಲ್ಲಿ ನಡೆಯಿರಿ. ಗುಂಪಾಗಿ ಕುಳಿತುಕೊಂಡು ಇತರರನ್ನು ಅಪಹಾಸ್ಯಕ್ಕೀಡು ಮಾಡುವುದು ಕೆಲವರ ಸ್ವಭಾವವಾಗಿದೆ.

"ಸದಾ ವಿನಾಯಿತಿ ಕೊಡುವ ಹಾಗೂ ಕ್ಷಮೆ ನೀಡುವ ಸ್ವಭಾವಗಳನ್ನು ಹೊಂದಿರಿ. ಸಹನೆ ಮತ್ತು ಸಹತಾಪದಿಂದ ವರ್ತಿಸಿರಿ. ಅನ್ಯಾಯವಾಗಿ ಯಾರ ಮೇಲೂ ಆಕ್ರಮಣ ಮಾಡಬೇಡಿರಿ. ಆವೇಶ, ಉದ್ವೇಗಗಳನ್ನು ಅದುಮಿಡಿರಿ. ನಿಮ್ಮನ್ನು ಲೋಕಕ್ಕೋಸ್ಕರ ಒಳಿತು ಮತ್ತು ಸತ್ಯಸಂಧತೆಗೆ ಮಾದರಿಯಾಗಿರುವ ಒಂದು ಜಮಾಅತನ್ನಾಗಿ ಮಾಡಲು ಅಲ್ಲಾಹನು ಇಚ್ಛಿಸುತ್ತಾನೆ. ಉತ್ತಮ ಮಟ್ಟದಲ್ಲಿ ಕಾಣಲು ಸಾಧ್ಯವಾಗುವಂತೆ ಬದಲಾವಣೆಯುಂಟಾದರೆ ಮಾತ್ರ ಮಾದರಿಯಾಗಲು ಸಾಧ್ಯ. ಯಥಾರ್ಥದಲ್ಲಿ ಇವರು ಬದಲಾವಣೆ ಉಂಟುಮಾಡಿದ್ದಾರೆಂದೂ ಇವರ ಮಾದರಿ ಅಂಗೀಕಾರಾರ್ಹವೆಂದೂ ಇತರರಿಗೆ ಹೇಳಲು ಸಾಧ್ಯವಾಗಬೇಕು. ಆದ್ದರಿಂದ ಕೆಡುಕು, ದುಷ್ಟತೆ, ಕಲಹ, ದುರ್ವಿಚಾರ ಇತ್ಯಾದಿ ಸ್ವಭಾವಗಳ ಜನರನ್ನು ಆದಷ್ಟುಬೇಗ ನಿಮ್ಮ ಮಧ್ಯದಿಂದ ದೂರ ಮಾಡಿರಿ. ಒಳಿತು, ಜಾಗರೂಕತೆ, ಸಹತಾಪ, ಒಳ್ಳೆಯ ಮಾತುಕತೆ, ಸತ್‌ಸ್ವಭಾವ, ಸದಾಚಾರ ಇತ್ಯಾದಿ ಗುಣಗಳಿಂದ ನಮ್ಮ

# ಧಾರ್ಮಿಕ ಸಹಿಷ್ಣುತೆ

❖ಅಬ್ದುಲ್ ವಹಾಬ್ ಆದಮ್
(ಆಫ್ರಿಕದ ಘಾನಾ ದೇಶದ ಅಹ್ಮದಿಯಾ ಅಮೀರ್)

ಮನುಷ್ಯ ಜೀವಿತವು ಪ್ರಸೂತಿ ಚಿಕಿತ್ಸಾಲಯದಲ್ಲಿ ಆರಂಭಿಸಿ ಶವಸಂಸ್ಕಾರ ನಿರ್ವಾಹಕನ ಶವಾಗಾರದಲ್ಲಿ ಮೃತಾವಸ್ಥೆಯಲ್ಲಿ ಇರುವುದಕ್ಕೆ ಮಾತ್ರ ಸೀಮಿತವಾಗಿದ್ದರೆ ಮನುಷ್ಯ ಸಮುದಾಯಕ್ಕೆ ಧರ್ಮದ ಆವಶ್ಯಕತೆ ಇರುತ್ತಿರಲಿಲ್ಲ. ಆದರೆ ಮನುಷ್ಯ ಜೀವಿತಕ್ಕೆ ಗಾಢವಾದ ಅರ್ಥವಿದೆ.

## ಧರ್ಮ

ಧರ್ಮವು ಸಮಾಜಕ್ಕೆ ಪ್ರೀತಿ, ದಯೆ, ಕ್ಷಮಾಪಣೆ, ನ್ಯಾಯ, ಸಹನೆ ಮತ್ತು ತಾಳ್ಮೆಯ ನಿಯಮಗಳನ್ನು ಕಲಿಸುತ್ತದೆ. ಈ ನಿಯಮಗಳು ಜೀವಂತವಾಗಿರುವ ಮಹಾನ್ ಶಕ್ತಿಯಿಂದ ರೂಪಿತವಾಗಿವೆ. ಅದೃಶ್ಯ ಮತ್ತು ಭವಿಷ್ಯದ ಅರಿವುಳ್ಳ ಆ ಮಹಾನ್ ಶಕ್ತಿಯು ಸತ್ಯ ಮತ್ತು ಜ್ಞಾನದ ತಳಹದಿಯ ಮೇಲೆ ಎಂದೂ ಬದಲಾಗದ ನಿಯಮಗಳನ್ನು ರೂಪಿಸುತ್ತದೆ. ಧರ್ಮವು ಒಂದು ರಾಷ್ಟ್ರದ ಬೌದ್ಧಿಕ, ಸಾಮಾಜಿಕ, ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಸಹಕಾರಿಯಾದ ಒಂದು ಉಪಕರಣವಾಗಬೇಕಿದೆ.

ಧರ್ಮದಿಂದ ತನ್ನನ್ನು ಪ್ರತ್ಯೇಕಿಸುವ ಸಮಾಜವು ದೇವನಿರ್ಮಿತ ಬದಲಾಗದ ನಿಯಮಗಳನ್ನು ನಿರ್ಲಕ್ಷಿಸುತ್ತದೆ. ಅಂತಹ ಸಮಾಜವು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಾರದು. ಇದೇ ರೀತಿ ಒಂದು ಧರ್ಮವು ತನ್ನನ್ನು ಸಮಾಜದಿಂದ ಬೇರ್ಪಡಿಸಿ ಜನಸಮೂಹದೊಂದಿಗೆ ನಿರ್ಲಕ್ಷ್ಯ ಮನೋಭಾವದಿಂದ ವರ್ತಿಸುವುದಾದರೆ ಅಂತಹ ಧರ್ಮವು ಧರ್ಮವೆಂದು ಕರೆಯುವ ಅರ್ಹತೆಯನ್ನು ಕಳಕೊಳ್ಳುತ್ತದೆ.

ನಾವು ಒಂದು ವಿಷಯದಲ್ಲಿ ಒಮ್ಮತಾಭಿಪ್ರಾಯವನ್ನು ಹೊಂದಿದ್ದೇವೆ. ಒಂದರ ನಂತರ ಇನ್ನೊಂದಾಗಿ ಆಡಳಿತ ನಿರ್ವಹಿಸುತ್ತಾ ಬಂದ ಸರಕಾರಗಳು ಈ ದೇಶದ ಜನರಿಗೆ ಧಾರ್ಮಿಕ ಸ್ವಾತಂತ್ರ್ಯದ ಭದ್ರತೆಯನ್ನು ನೀಡಿದ್ದರೂ ನಮ್ಮ ದೇಶದಲ್ಲಿ ಮತಾಂಧತೆ, ಅಜ್ಞಾನ ಮತ್ತು ಕುರುಡು ಮತಭ್ರಾಂತಿ ಮತ್ತು ಒಂದು ಧರ್ಮವು ಇನ್ನೊಂದು ಧರ್ಮದ ಮೇಲೆ ಅಧಿಕಾರ ಚಲಾಯಿಸುವುದೆಂಬ ಊಹೆಯಿಂದ ಭಯ - ಇವುಗಳ ಕಾರಣದಿಂದ ಧಾರ್ಮಿಕ ಅಸಹಿಷ್ಣುತೆ ಈಗಲೂ ಇದೆ. ಜನರ ಈ ಮನೋಭಾವ, ಧರ್ಮವನ್ನು ತಿರಸ್ಕಾರ, ದ್ವೇಷ ಮತ್ತು ಅಪಹಾಸ್ಯ ಭಾವದಿಂದ ಆಗಾಗ ಕಾಣುವಂತೆ ಮಾಡುತ್ತದೆ. ಆದುದರಿಂದ ದೇಶದ ಐಕ್ಯದ ದೃಷ್ಟಿಯಿಂದಲೂ ಧರ್ಮದ ಗೌರವವನ್ನು ಕಾಪಾಡಲಿಕ್ಕಾಗಿಯೂ ಧಾರ್ಮಿಕ ನಾಯಕರು ತಮ್ಮ ಅನುಯಾಯಿಗಳ ಹೃದಯದಲ್ಲಿ ಒಂದು ಬದಲಾವಣೆಯನ್ನು ಉಂಟುಮಾಡಲು ಪ್ರಯತ್ನಿಸಬೇಕು ಮತ್ತು ಇತರ ಧರ್ಮಗಳ ವಿಶ್ವಾಸಗಳನ್ನು ಆ ಧರ್ಮಗಳ ಮೂಲಗ್ರಂಥಗಳ ಗಾಢವಾದ ಅಧ್ಯಯನವನ್ನು ಕೈಗೊಳ್ಳುವ ಮೂಲಕ ಅರ್ಥಮಾಡಿಕೊಳ್ಳಲು ಪ್ರೋತ್ಸಾಹಿಸಬೇಕು. ಹೀಗೆ ಮಾಡಿದರೆ ಎಲ್ಲಾ ಧರ್ಮಗಳ ಸ್ಥಾಪಕರು ಒಬ್ಬನೇ ಒಬ್ಬನಾದ ದೇವನಲ್ಲಿ ವಿಶ್ವಾಸ ಹೊಂದಿದ್ದರೆಂಬುದು ಅವರಿಗೆ ತಿಳಿಯುವುದು ಮತ್ತು ದೇವನ ಏಕತೆ ಮತ್ತು ಆ ಮೂಲಕ ಮಾನವರ ಏಕತೆ ಎಂಬುದು ಈ ವಿಶ್ವದ ಮೂಲಭೂತ ಸತ್ಯ ಎಂಬುದು ಅವರಿಗೆ ಮನವರಿಕೆಯಾಗುವುದು.

ನಮ್ಮ ದೇಶದಲ್ಲಿ "ಫೋರಮ್ ಆಫ್ ರಿಲೀಜ್ಯಸ್ ಬೋಡೀಸ್" (ಸರ್ವಧರ್ಮಗಳ ಸಮನ್ವಯ ಸಂಸ್ಥೆ) ಸ್ಥಾಪಿತವಾದ ನಂತರ ವಿವಿಧ ಧರ್ಮಗಳಿಗೆ ಸೇರಿದ ಜನರ ಮಧ್ಯೆ ಸಹಕಾರ ಮಟ್ಟವು ವರ್ಧಿಸಿ ದೇಶದಲ್ಲಿ ಹಿಂದಿನ ಕಾಲಕ್ಕಿಂತ ಹೆಚ್ಚಿನ ಶಾಂತಿ ಮತ್ತು ಸೌಹಾರ್ದಗಳು ಸ್ಥಾಪಿಸಲ್ಪಟ್ಟಿವೆ ಎಂಬುದನ್ನು ನಾನು ಚರ್ಚೆ ಮಾಡಲಿರುವೆನು.

ಧರ್ಮದ ಚರಿತ್ರೆಯು ಪ್ರವಾದಿ ಆದಮ್‌ರಿಂದ ಆರಂಭಿಸಿ ಪ್ರವಾದಿ ನೂಹ್, ಪ್ರವಾದಿ ಇಬ್ರಾಹೀಮ್, ಪ್ರವಾದಿ ಮೂಸಾ ಮತ್ತು ಪ್ರವಾದಿ ಈಸಾ ಮೊದಲಾದ ಪ್ರವಾದಿಗಳನ್ನು ಒಳಗೊಂಡು ಇಸ್ಲಾಮಿನ ಪುಣ್ಯ ಪ್ರವಾದಿ ವರ್ಯರ ತನಕ ವ್ಯಾಪಿಸಿದ್ದು ಇಷ್ಟರವರೆಗೆ 1,24,000 ಪ್ರವಾದಿಗಳು ಆಗಮಿಸಿದ್ದರೆಂದು ನಂಬಲಾಗಿದೆ. ಅವರಲ್ಲಿ ಶ್ರೀ ಕೃಷ್ಣ, ಶ್ರೀ ಬುದ್ಧ ಮತ್ತು ಕನ್‌ಪ್ಯೂಶಿಯಸ್ ಸಹ ಸೇರಿದ್ದರು.

ಚರಿತ್ರೆಯ ದೀರ್ಘವಾದ ಕಾಲಘಟ್ಟದಲ್ಲಿ ಆಗಮಿಸಿದ ಪ್ರವಾದಿಗಳು ಆಧ್ಯಾತ್ಮಿಕ ಲೋಕದ ನಕ್ಷತ್ರಗಳಾಗಿಯೂ ಚಂದ್ರರಾಗಿಯೂ ಸೂರ್ಯರಾಗಿಯೂ ಆಗಮಿಸಿ ಅಂಧಕಾರವನ್ನು ಹೋಗಲಾಡಿಸಲು ಆವಶ್ಯಕವಾದ ಪ್ರಕಾಶವನ್ನು ಬೀರುವ ಉದ್ದೇಶದಿಂದಲೂ ನಿರಾಶೆಭರಿತರಾದ ಮಾನವರಿಗೆ ಶುಭಪ್ರತೀಕ್ಷೆ ನೀಡುವ ಉದ್ದೇಶದಿಂದಲೂ ಆಗಮಿಸಿದರಾದರೂ ಅವರೆಲ್ಲರೂ ಜನರ ಕ್ರೂರ, ವಿಕೃತ ಮತ್ತು ಅಹಂಕಾರದ ವರ್ತನೆಗೆ ಪಾತ್ರರಾಗಬೇಕಾಯಿತೆಂದು ಚರಿತ್ರೆಯು ನಮಗೆ ಚಿತ್ರಿಸಿ ಕೊಡುತ್ತದೆ. ಎಲ್ಲಾ ಪ್ರವಾದಿಗಳೊಡನೆ ಅವರ ಜನತೆಯ ವರ್ತನೆ ಒಂದೇ ಮಾದರಿಯದು ಮತ್ತು ಯಾವುದೇ ಬದಲಾವಣೆ ಇಲ್ಲದುದು ಆಗಿತ್ತು.

ಪ್ರವಾದಿಗಳೂ ಅನುಯಾಯಿಗಳೂ ಮನೆಗಳಿಂದ ಹೊರದೂಡಲ್ಪಟ್ಟರು. ಕೆಲವರನ್ನು ಕಲ್ಲೆಸೆದು ಕೊಲ್ಲಲಾಯಿತು. ಕೆಲವರನ್ನು ಉರಿಯುವ ಬೆಂಕಿ ಕುಂಡಗಳಿಗೆ ಹಾಕಲಾಯಿತು. ಆಹಾರ ಪಾನೀಯಗಳನ್ನು ಅವರಿಗೆ ನಿರಾಕರಿಸಲಾಯಿತು. ಬಿಸಿಯಾದ ಮರಳು ಮತ್ತು ಕಲ್ಲುಗಳ

(3ನೇ ಪುಟದಿಂದ) **ಹಿತೋಪದೇಶಗಳು**

ಜಮಾಅತಿನಲ್ಲಿ ಇರಲು ಸಾಧ್ಯವಿಲ್ಲದವರು ಆದಷ್ಟು ಬೇಗ ನಮ್ಮಿಂದ ಅಗಲಿಹೋಗಬೇಕಾಗಿದೆ. ಅಂತಹ ವ್ಯಕ್ತಿ ನಮ್ಮ ಮಧ್ಯೆ ಇರಲು ಅಲ್ಲಾಹನು ಬಯಸುವುದಿಲ್ಲ. ಖಂಡಿತವಾಗಿಯೂ ಅವನು ನಿರ್ಭಾಗ್ಯವಂತನಾಗಿ ಮರಣಿಸುವನು. ಕಾರಣವೇನೆಂದರೆ ಅವನು ಸತ್ಪಥವನ್ನು ಸ್ವೀಕರಿಸಲಿಲ್ಲ. ಆದ್ದರಿಂದ ನೀವು ಜಾಗರೂಕರಾಗಿರಿ. ಯಥಾರ್ಥದಲ್ಲಿ ಸಹೃದಯವಂತರೂ ಸತ್ ಸ್ವಭಾವಿಗಳೂ ಸದಾಚಾರಿಗಳೂ ಆಗಿ ಮಾರ್ಪಡಿರಿ. ನೀವು ಐದು ಹೊತ್ತಿನ ನಮಾಝ್‌ನಿಂದಲೂ ಸತ್‌ಸ್ವಭಾವದಿಂದಲೂ ಗುರುತಿಸಲ್ಪಡುವಿರಿ. ಯಾರಲ್ಲಿ ಕೆಡುಕಿನ ಬೀಜವಿರುವುದೋ ಅವನು ಈ ಉಪದೇಶವನ್ನು ಸ್ವೀಕರಿಸಲಾರ."

**(ಆಧಾರ: ಹಝ್ರತ್ ಖಲೀಫತುಲ್ ಮಸೀಹ್ Vರವರ 10-6-2005ರ ಜುಮುಅ ಖುತ್ಬ)**

ಮೇಲೆ ಅವರನ್ನು ಎಳೆದುಕೊಂಡು ಹೋಗಲಾಯಿತು. ಅವರನ್ನು ಶಿಲುಬೆಗೆ ಕೊಡಲಾಯಿತು.

ಇವೆಲ್ಲಾ ಘಟನೆಗಳು ಧರ್ಮದ ಮೇಲೆ ಅಸಹಿಷ್ಣುತೆಯನ್ನು ಆರೋಪಿಸುವವರ ವಾದವನ್ನು ತಪ್ಪೆಂದು ಸಾಬೀತುಗೊಳಿಸುತ್ತದೆ. ಮಾನವ ಚರಿತ್ರೆ ನಮಗೆ ಕಲಿಸಿಕೊಡುವುದೇನೆಂದರೆ ಧರ್ಮವನ್ನು ಬೋಧಿಸುವವರು ಜನರಿಂದ ದೌರ್ಜನ್ಯಕ್ಕೆ ಪಾತ್ರರಾದರೇ ಹೊರತು ಅವರೆಂದೂ ದೌರ್ಜನ್ಯಗಾರರಾಗಿ ವರ್ತಿಸಲಿಲ್ಲ.

## ಪೀಡನೆ

ಪೀಡನದಲ್ಲಿ ನಂಬಿಕೆ ಇರುವ ಮತ್ತು ಬಲಾತ್ಕಾರವನ್ನೂ ಚಿತ್ರಹಿಂಸೆಯನ್ನೂ ಮತ ಪರಿವರ್ತನೆಯ ಉಪಕರಣವಾಗಿ ಬಳಸುವ ಧರ್ಮವು ನಿಜವಾದ ಅರ್ಥದಲ್ಲಿ ಧರ್ಮವೇ ಅಲ್ಲ. ಅದು ಧರ್ಮ ಪರಿವರ್ತನೆಗೆ ಉಪಯೋಗಿಸುವ ವಾಮ ಮಾರ್ಗಗಳು, ಅದು ಬರಿದಾಗಿರುವ ಪಾತ್ರೆಯೆಂಬುದನ್ನು - ಅದು ಸಂಪೂರ್ಣವಾಗಿ ಬರಿದಾದುದೂ ಆಧ್ಯಾತ್ಮಿಕವಾಗಿ ಶೂನ್ಯವಾದುದೂ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ದೀರ್ಘಕಾಲವು ದಾಟಿಹೋದಾಗ ದೇವರಿಂದ ಅವತೀರ್ಣವಾದ ವಾಣಿಯು ನಾನಾ ವಿಧಗಳ ಪ್ರಕ್ಷೇಪಗಳಿಗೆ ಗುರಿಯಾಗಿ ಅಪಭ್ರಂಶಗೊಂಡು ವಿವಿಧ ಧರ್ಮಗಳ ಅನುಯಾಯಿಗಳು ತಮ್ಮ ಧರ್ಮಗಳ ಪ್ರವಾದಿಗಳ ವಿರುದ್ಧ ಅವರ ಶತ್ರುಗಳು ಮಾಡಿದ ಅಪರಾಧಗಳನ್ನು ಮಾಡುವ ಅಪರಾಧಿಗಳಾಗಿ ಪರಿಣಮಿಸುವುದು ಬಹಳ ವಿಡಂಬನೆಯ ಒಂದು ಸಂಗತಿಯಾಗಿದೆ.

## ಉತ್ತರ ಐಯರ್ಲೇಂಡ್

ನನ್ನ ಒಬ್ಬ ಸ್ನೇಹಿತ ತಾನು ಉತ್ತರ ಐಯರ್ಲೇಂಡಿಗೆ ಹೋದ ಕಥೆಯನ್ನು ಹೇಳಿದರು. ಅವರು ವಿಮಾನ ನಿಲ್ದಾಣದಲ್ಲಿ ಇಳಿದಾಗ ಹೋಟೆಲಿಗೆ ಹೋಗಲು ಒಂದು ಟ್ಯಾಕ್ಸಿಯನ್ನು ಹತ್ತಿದರು. ಅವರು ಟ್ಯಾಕ್ಸಿಯಲ್ಲಿ ಕುಳಿತ ಕೂಡಲೆ ಟ್ಯಾಕ್ಸಿ ಚಾಲಕ ಕೇಳಿದ: "ನೀವು ಕ್ಯಾಥಲಿಕರೋ ಪ್ರೊಟೆಸ್ಟೆಂಟ್‌ರೋ?" ಎಂದು. ನನ್ನ ಸ್ನೇಹಿತರಿಗೆ ದಿಗ್ಭ್ರಮೆಯಾಯಿತು. ಅವರು ತಾನು ಕ್ಯಾಥ'ಲಿಕನು ಎಂದು ಹೇಳಿದರೆ ಚಾಲಕನು ಪ್ರೊಟೆಸ್ಟೆಂಟ್‌ನಾಗಿದ್ದರೆ ಅವರಿಗೆ ತೊಂದರೆಯಾಗುತ್ತಿತ್ತು. ಅವರು ತಾನು ಪ್ರೊಟೆಸ್ಟೆಂಟ್ ಎಂದು ಹೇಳಿದರೆ ಚಾಲಕನು ಕ್ಯಾಥಲಿಕನಾಗಿದ್ದರೆ ಅವರಿಗೆ ತೊಂದರೆ ಆಗುತ್ತಿತ್ತು. ಆದುದರಿಂದ ಅವರು ಥಟ್ಟನೆ ಚಿಂತಿಸಿ ಹೀಗೆ ಹೇಳಿದರು: "ನಾನು ಆಫ್ರಿಕದಿಂದ ಆಗಮಿಸಿದೆನು. ಆಫ್ರಿಕದಲ್ಲಿ ಒಂದು ದೊಡ್ಡ ಮರವಿದೆ. ನಾವೆಲ್ಲರೂ ಅದರ ಕೆಳಗಡೆ ಪೂಜೆ ಮಾಡುತ್ತೇವೆ."

ಟ್ಯಾಕ್ಸಿ ಚಾಲಕನಿಗೆ ಈ ಉತ್ತರ ಕೇಳಿ ತೃಪ್ತಿಯಾಯಿತು. ಅವನು ನನ್ನ ಸ್ನೇಹಿತರನ್ನು ಸುರಕ್ಷಿತವಾಗಿ ಹೋಟೇಲಿಗೆ ತಲಪಿಸಿದನು.

ಯೇಸು ಕ್ರಿಸ್ತರು ಬಹಳ ಸೌಮ್ಯ ಸ್ವಭಾವದವರೂ ದೇವನಿಂದ ನಿಯುಕ್ತರಾದ ಪ್ರವಾದಿಯೂ ಆಗಿದ್ದರು. ನಿನ್ನ ಬಲಗೆನ್ನೆಗೆ ಯಾರಾದರೂ ಹೊಡೆದರೆ ಎಡಗೆನ್ನೆಯನ್ನು ಆತನ ಕಡೆಗೆ ತಿರುಗಿಸು ಎಂದು ಅವರು ಉಪದೇಶಿಸಿದರು. ಈ ಪ್ರವಾದಿ ಎಂತಹ ಮಹಾನುಭಾವರಾಗಿದ್ದರೆಂದರೆ ಒಂದು ನೊಣವನ್ನು ಕೂಡ ಅದಕ್ಕೆ ಹಾನಿಯನ್ನುಂಟು ಮಾಡಲು ಸ್ಪರ್ಶಿಸದವರಾಗಿದ್ದರು. ಹೀಗಿದ್ದರೂ ಈಗ ವಿದ್ಯಾಭ್ಯಾಸ ಮತ್ತು ತಿಳುವಳಿಕೆಯ ದೃಷ್ಟಿಯಲ್ಲಿ ಸಾಮಾನ್ಯ ಪ್ರಗತಿ ಹೊಂದಿದಂತಹ ಒಂದು ದೇಶದಲ್ಲಿ ಅವರ ಹೆಸರು ಹೇಳಿ ಮಕ್ಕಳನ್ನು ಅಂಗವಿಕಲರನ್ನಾಗಿ ಮಾಡಲಾಗುತ್ತಿದೆ. ಗಂಡಸರನ್ನೂ ಹೆಂಗಸರನ್ನೂ ಕೊಲ್ಲಲಾಗುತ್ತಿದೆ. ಹಿಂಸೆಯು ಯಾವುದೇ ಕೊರತೆಯಿಲ್ಲದೆ ಮುಂದುವರಿಯುತ್ತಿದೆ.

ಮೇಲಿನ ಉದಾಹರಣೆಯಿಂದ, ಧರ್ಮವು ಒಂದು ಉಪದೇಶ ನೀಡಿದರೂ ಆ ಧರ್ಮದ ಅನುಯಾಯಿಗಳಲ್ಲಿ ಒಂದು ವಿಭಾಗದವರು ತದ್ವಿರುದ್ಧವಾಗಿ ವರ್ತಿಸುತ್ತಾರೆ ಎಂದು ಸುಲಭವಾಗಿ ಮನವರಿಕೆಯಾಗಿರಬಹುದು. "ಒಂದು ವಿಭಾಗ" ಎಂಬ ಪದಗಳನ್ನು ನಾನು ಬುದ್ಧಿಪೂರ್ವಕವಾಗಿ ಉಪಯೋಗಿಸಿದ್ದೇನೆ. ಒಂದು ಧರ್ಮದ ಒಂದು ವಿಭಾಗದ ಜನರು ಆ ಧರ್ಮದ ಉಪದೇಶಕ್ಕೆ ವಿರುದ್ಧವಾಗಿ ವರ್ತಿಸುತ್ತಾರೆ ಎಂಬ ವಾಸ್ತವಿಕ ಸಂಗತಿ ಆ ವಿಭಾಗದ ಜನರು ಆ ಧರ್ಮದ ನಿಜವಾದ ಉಪದೇಶಗಳನ್ನು ಪ್ರತಿನಿಧೀಕರಿಸುವುದಿಲ್ಲ ಎಂಬ ಸತ್ಯವನ್ನು ಸಾಬೀತುಗೊಳಿಸುತ್ತದೆ.

## ಇಸ್ಲಾಮ್ ಧರ್ಮದ ಉಪದೇಶಗಳು

ನಾನು ಇಷ್ಟರವರೆಗೆ ನಿಮ್ಮ ಮುಂದೆ ನಿವೇದಿಸಿದ ವಿಷಯದ ಬೆಳಕಿನಲ್ಲಿ ಧಾರ್ಮಿಕ ಸಹಿಷ್ಣುತೆಯ ಕುರಿತು ಇಸ್ಲಾಮ್ ಧರ್ಮವು ನೀಡಿದ ಉಪದೇಶಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸಲು ಉದ್ದೇಶಿಸುತ್ತೇನೆ.

ವಿಶ್ವವು ಒಂದು ಸುಂದರ ಸೃಷ್ಟಿಯಾಗಿದೆ. ಅದರ ಸೌಂದರ್ಯವು ಅದರ ನಿರ್ಮಾಪಕನ ಬುದ್ಧಿ ವೈಭವವನ್ನು ಚಿತ್ರಿಸುತ್ತದೆ. ಬಣ್ಣದ ವಿವಿಧ ಮಾದರಿಗಳು, ಗಾತ್ರಗಳ ಮಾದರಿಗಳು, ಎತ್ತರದ ಮಾದರಿಗಳು, ಘನ ಪದಾರ್ಥಗಳ ಸಾಂದ್ರತೆಯ ವೈವಿಧ್ಯಗಳು, ಭಯ ಮತ್ತು ಮತ್ಸರದ ಭಾವನೆಗಳು, ಪ್ರೀತಿ ಮತ್ತು ದ್ವೇಷದ ಭಾವನೆಗಳು, ಸಂತೃಪ್ತಿ ಮತ್ತು ಸಮಾಧಾನಗಳು, ಅನುಭವಿಸಿ ತಿಳಿಯಬಹುದಾದ ಮತ್ತು ವಿವರಣೆಗೆ ನಿಲುಕದ ಆಧ್ಯಾತ್ಮಿಕ ಅನುಭೂತಿಗಳು ಇವುಗಳೆಲ್ಲಾ ನಮ್ಮ ಲೋಕದ ಭಾಗಗಳಾಗಿವೆ.

> ದೇವನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: **"ಆಕಾಶಗಳ ಮತ್ತು ಭೂಮಿಯ ಸೃಷ್ಟಿ, ನಿಮ್ಮ ಭಾಷೆಗಳ ಮತ್ತು ಬಣ್ಣಗಳ ವೈವಿಧ್ಯತೆ - ಇವು ಸಹ ಆವನ ದೃಷ್ಟಾಂತಗಳಲ್ಲಿ ಸೇರಿವೆ. ನಿಶ್ಚಯವಾಗಿಯೂ ಅದರಲ್ಲಿ ಜ್ಞಾನವಂತರಿಗೆ ದೃಷ್ಟಾಂತಗಳು ಇವೆ."** (ಪವಿತ್ರ ಖುರ್‌ಆನ್ 30:23)

ನಮ್ಮ ಸುತ್ತುಮುತ್ತಲು ನೋಡಿದರೆ ದೇವನು ಸೃಷ್ಟಿಸಿದ ವಿವಿಧ ವಸ್ತುಗಳನ್ನು ಕಾಣುತ್ತೇವೆ. ಆಕಾಶ ಮತ್ತು ಭೂಮಿ, ಸೂರ್ಯಚಂದ್ರರು, ನದಿಗಳು ಮತ್ತು ಸಾಗರಗಳು, ಮರಗಳು ಮತ್ತು ಪರ್ವತಗಳು, ವಿವಿಧ ರೀತಿಯ ಬಣ್ಣಗಳನ್ನು ಹೊಂದಿದ ಕಣಿವೆ ಪ್ರದೇಶಗಳು - ಇವುಗಳಲ್ಲಿ ಪ್ರತಿಯೊಂದಕ್ಕೆ ತನ್ನದೇ ಆದ ವೈಶಿಷ್ಟ್ಯಗಳಿವೆ. ಅವುಗಳು ವಿವಿಧವಾಗಿದ್ದರೂ ಅವುಗಳೆಲ್ಲಾ ವಿಶ್ವವನ್ನು ಸುಂದರವನ್ನಾಗಿ ಮಾಡಲು ಮತ್ತು ವಿಶ್ವಕ್ಕೆ ಸ್ಥಿರತೆ ನೀಡಲು ಮತ್ತು ಮನುಷ್ಯರಿಗೆ ಸುಖ ಸೌಲಭ್ಯ, ಪ್ರಗತಿ ಮತ್ತು ಐಶ್ವರ್ಯ ನೀಡಲು ಒಗ್ಗೂಡಿ ಕಾರ್ಯನಿರತವಾಗಿವೆ.

ನಾನು ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನಿನ ವಚನದಲ್ಲಿ ನಮ್ಮೊಡನೆ ಹೀಗೆ ಹೇಳಲಾಗಿದೆ: ಭಾಷೆಗಳ ವಿವಿಧತೆ, ಗೋತ್ರಗಳ ವಿವಿಧತೆ, ಧರ್ಮಗಳ ವಿವಿಧತೆ, ಜೀವಿತದಲ್ಲಿ ಅಂತಸ್ತುಗಳ ವಿವಿಧತೆ ಇದ್ದರೂ ನಮ್ಮನ್ನೆಲ್ಲಾ ಒಬ್ಬನೇ ದೇವನು ಸೃಷ್ಟಿಸಿರುವನೆಂದು ಮನವರಿಕೆ ಮಾಡಿಕೊಳ್ಳಬೇಕು ಮತ್ತು ನಾವೆಲ್ಲರೂ ಒಂದೇ ಮೂಲದಿಂದ ಬಂದವರು ಮತ್ತು "ಒಬ್ಬನೇ ತಂದೆಯ ಮಕ್ಕಳು" ಆಗಿದ್ದೇವೆ. ಆದುದರಿಂದ ನಾವು ಶಾಂತಿ ಮತ್ತು ಸೌಹಾರ್ದದಿಂದ ಜೀವಿಸಲು ಅತ್ಯಂತ ಹೆಚ್ಚು ಹೆಚ್ಚಾಗಿ ಪ್ರಯತ್ನಿಸಬೇಕು ಮತ್ತು ಎಲ್ಲರಿಗೂ ಜೀವಿತವು ಜೀವಿಸಲು ಯೋಗ್ಯವಾದುದನ್ನಾಗಿ ಮಾಡಲು ಪರಸ್ಪರ ಸಹಕರಿಸಬೇಕು.

ನಾವು ಪುನಃ ಉತ್ತರ ಐಯರ್ಲೇಂಡಿನ ಕಥೆಗೆ ಅದರಿಂದ ಇನ್ನಷ್ಟು ಪಾಠಗಳನ್ನು ಕಲಿಯಲು ಮರಳಿಹೋಗುವ. ಆಫ್ರಿಕನರು ಒಂದು ದೊಡ್ಡ ಮರದ ಕೆಳಗೆ ಪೂಜೆ ಮಾಡುವ ಕಥೆಯನ್ನು ಕೇಳಿ ಟ್ಯಾಕ್ಸಿ ಚಾಲಕ ಸಮಾಧಾನಪಟ್ಟದ್ದು ಆಶ್ಚರ್ಯಕರವಾಗಿದೆ. ಆಫ್ರಿಕ ಖಂಡದ ಕೋಟಿಗಟ್ಟಲೆ ಜನರು ಒಂದು ಮರದ ಕೆಳಗೆ ನಿಂತು ಪೂಜಿಸುವುದನ್ನು ನೀವು ಊಹಿಸಿರಿ.

ಈ ಹೇಳಿಕೆಯಲ್ಲಿ ಸತ್ಯವು ಅಡಕವಾಗಿದೆ. ಆಫ್ರಿಕ ಖಂಡದಲ್ಲಿರುವವರು ಮಾತ್ರವಲ್ಲ ಭೂಲೋಕದಲ್ಲಿ ಇರುವ ಎಲ್ಲರೂ ಆಕಾಶವೆಂಬ ಒಂದೇ ಒಂದು ಛಾವಣಿಯ ಕೆಳಗೆ ಭೂಮಿಯಲ್ಲಿ

ವಾಸಿಸುತ್ತಿದ್ದಾರೆ. ಆಕಾಶ ಮತ್ತು ಭೂಮಿ ಹಾಗೂ ಅವುಗಳಲ್ಲಿರುವ ಎಲ್ಲವನ್ನೂ ಅಪರಿಮಿತ ದಯಾಮಯನೂ ಸದಾ ಕರುಣೆದೋರುವವನೂ ಆಗಿರುವ ಸೃಷ್ಟಿಕರ್ತನು ನಮಗೆ ಒದಗಿಸಿಕೊಟ್ಟಿದ್ದಾನೆ.

ನಾವು ನಮ್ಮ ಬಲವನ್ನೂ ಶಕ್ತಿಯನ್ನೂ ಪೋಷಣೆಯನ್ನೂ ಅವನಿಂದ ಪಡೆಯುತ್ತಿದ್ದೇವೆ. ಅವನು ಮನುಷ್ಯರನ್ನು ಅವರ ಮೈಬಣ್ಣ, ಕುಲ, ಲಿಂಗ ಭೇದ ಮತ್ತು ಧಾರ್ಮಿಕ ವಿಶ್ವಾಸವನ್ನವಲಂಬಿಸಿ ಯಾವುದೇ ತಾರತಮ್ಯ ಭಾವದಿಂದ ಕಾಣುವುದಿಲ್ಲ. ಅವನು ಮಳೆ ಸುರಿಸುವಾಗ ಅವನನ್ನು ಆರಾಧಿಸುವವರೂ ಆರಾಧಿಸದವರೂ ಸಮಾನವಾಗಿ ಪ್ರಯೋಜನ ಪಡೆಯುತ್ತಾರೆ. ಆದುದರಿಂದ ನನ್ನ ಸ್ನೇಹಿತ ಟ್ಯಾಕ್ಸಿ ಚಾಲಕನೊಂದಿಗೆ "ನಾವೆಲ್ಲರೂ ಒಂದು ಮರದ ಕೆಳಗೆ ನಿಂತು ಆರಾಧಿಸುತ್ತೇವೆ" ಎಂದು ಹೇಳಿದುದು ಸರಿಯಾಗಿರುವ ಮಾತೇ ಆಗಿದೆ.

## ಶಾಂತಿಯ ಸಂದೇಶ

ಅಹ್ಮದಿಯಾ ಮುಸ್ಲಿಮ್ ಸಮುದಾಯದ ಸ್ಥಾಪಕರು ಬರೆದ ಎಂಭತ್ತು ಗ್ರಂಥಗಳಲ್ಲಿ ಕೊನೆಯ ಪುಸ್ತಕದ ಹೆಸರು "ಶಾಂತಿಯ ಸಂದೇಶ" ಎಂದಾಗಿತ್ತು. ಈ ಗ್ರಂಥ ಬರೆಯಲು ಪ್ರೇರೇಪಿಸಿದ ಸಂದರ್ಭ ಮತ್ತು ಸತ್ಯವಾಗಿಯೂ ಪ್ರಾಮಾಣಿಕವಾಗಿಯೂ ಧಾರ್ಮಿಕ ಸಮುದಾಯಗಳ ಬಗ್ಗೆ ಶಾಂತಿಯನ್ನೂ ಸೌಹಾರ್ದವನ್ನೂ ಆಶಿಸುವವರಿಗೆ ಅದನ್ನು ಸಮರ್ಪಿಸಿದುದು ಆ ಗ್ರಂಥಕ್ಕೆ ವಿಶಿಷ್ಟವಾದ ಮೆಚ್ಚಿಕೆಯನ್ನು ನೀಡಿದೆ. ಅವರನ್ನು ಸೃಷ್ಟಿಕರ್ತನು ತನ್ನ ಕಡೆಗೆ ಕರೆದ ದಿನದಂದೇ ಅವರು ಆ ಗ್ರಂಥ'ವನ್ನು ಪೂರ್ಣಗೊಳಿಸಿದುದರಿಂದ ಆ ಗ್ರಂಥವು ಲೋಕದ ಎಲ್ಲಾ ಧಾರ್ಮಿಕ ಸಮುದಾಯಗಳಿಗೆ ನೀಡಿರುವ ಒಂದು ಕೊನೆಯ ಉಯಿಲು ಪತ್ರವಾಗಿದೆ.

> ಅವರು ಗ್ರಂಥವನ್ನು ಹೀಗೆ ಪ್ರಾರಂಭಿಸುತ್ತಾರೆ: "ವಿಸ್ತೃತವಾದ ಸಹಾನುಭೂತಿಯನ್ನು ಬೋಧಿಸದ ಧರ್ಮವು ಧರ್ಮವೇ ಅಲ್ಲ." ಅವರು ಹೀಗೆ ಮುಂದುವರಿಯುತ್ತಾರೆ: "ದೇವನು ಪಕ್ಷಪಾತಿಯಲ್ಲ. ಅವನು ತನ್ನ ಅನುಗ್ರಹಗಳನ್ನು ಯಾರಿಗೂ ನಿಷೇಧಿಸಿಲ್ಲ. ಎಲ್ಲಾ ಜನರಿಗೆ ದೇವನು ಭೂಮಿಯನ್ನು ವಾಸಿಸಲಿಕ್ಕೆ ನೀಡಿರುವನು. ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಎಲ್ಲರಿಗೂ ಬೆಳಕನ್ನು ಕೊಡುತ್ತವೆ ಮತ್ತು ದೇವನು ನಿಗದಿಪಡಿಸಿದ ಕೆಲಸಗಳನ್ನು ಮಾನವರಿಗಾಗಿ ಮಾಡುತ್ತವೆ. ಎಲ್ಲಾ ಜನರು ಗಾಳಿ, ನೀರು, ಬೆಂಕಿ, ಭೂಮಿ ಮೊದಲಾದ ದೇವ ನಿರ್ಮಿತ ವಸ್ತುಗಳಿಂದ ಪ್ರಯೋಜನ ಪಡೆಯುತ್ತಾರೆ. ಎಲ್ಲಾ ಜನರು ಭೂಮಿಯ ಉತ್ಪನ್ನಗಳಾದ ಧಾನ್ಯಗಳನ್ನು, ಗಿಡಮೂಲಿಕೆಗಳನ್ನು, ಹೂ ಮತ್ತು ಹಣ್ಣುಗಳನ್ನು ಉಪಯೋಗಿಸುತ್ತಾರೆ. ದೇವನ ಈ ಔದಾರ್ಯವು ನಾವು ಸಹ ಮಾನವರೊಂದಿಗೆ ಉದಾರ ಭಾವದಿಂದ ಜಾಗರೂಕತೆ ವರ್ತಿಸಬೇಕೆಂಬ ಪಾಠವನ್ನು ಕಲಿಸುತ್ತದೆ. ನಾವು ಸಂಕುಚಿತ ಮತ್ತು ಸೀಮಿತ ಸಹಾನುಭೂತಿಯ ಮನೋಭಾವ ಹೊಂದಬಾರದೆಂದೂ ಕಲಿಸುತ್ತದೆ."

## ಪ್ರವಾದಿತ್ವದ ಸಾರ್ವತ್ರಿಕತೆ

ಪ್ರವಾದಿಗಳು ಸಾರ್ವತ್ರಿಕವಾಗಿ ಲೋಕದಲ್ಲೆಲ್ಲಾ ಆಗಮಿಸಿದ್ದರು ಎಂದು ಪವಿತ್ರ ಖುರ್‌ಆನ್ ಸ್ಪಷ್ಟಪಡಿಸಿದೆ. ಎಲ್ಲಾ ಪ್ರವಾದಿಗಳನ್ನು ನಂಬಬೇಕೆಂಬ ಉಪದೇಶವನ್ನು ಇಸ್ಲಾಮ್ ನೀಡಿದೆ. ಆದುದರಿಂದ ಮುಸ್ಲಿಮರು ಪ್ರವಾದಿಗಳ ಮಧ್ಯೆ ತಾರತಮ್ಯ ಭಾವನೆ ಹೊಂದದೆ ಎಲ್ಲರನ್ನೂ ಗೌರವ ಭಾವದಿಂದ ಕಾಣಬೇಕೆಂದು ಪವಿತ್ರ ಖುರ್‌ಆನ್ ಉಪದೇಶಿಸಿದೆ:

> "ನೀವು ಹೇಳಿರಿ: ನಾವು ಅಲ್ಲಾಹನಲ್ಲಿಯೂ ನಮಗೆ ಅವತೀರ್ಣಗೊಂಡುದರಲ್ಲಿಯೂ ಇಬ್ರಾಹೀಮ್, ಇಸ್ಮಾಈಲ್, ಇಸ್‌ಹಾಖ್, ಯಅ್‌ಖೂಬ್ ಮತ್ತು (ಅವರ) ಸಂತಾನಗಳಿಗೆ ಅವತೀರ್ಣಗೊಂಡುದರಲ್ಲಿಯೂ ಮೂಸಾ, ಈಸಾರಿಗೆ ನೀಡಲ್ಪಟ್ಟುದರಲ್ಲಿಯೂ (ಉಳಿದ) ಪ್ರವಾದಿಗಳಿಗೆ ಅವರ ಪ್ರಭುವಿನಿಂದ ನೀಡಲ್ಪಟ್ಟುದರಲ್ಲಿಯೂ ವಿಶ್ವಾಸ ಹೊಂದಿದ್ದೇವೆ. ನಾವು ಅವರಲ್ಲಿ ಯಾರೊಬ್ಬರ ಬಗ್ಗೆಯೂ ತಾರತಮ್ಯ ಭಾವನೆಯನ್ನು ಹೊಂದಿಲ್ಲ. ನಾವು ನಮ್ಮನ್ನು ಅವನಿಗೆ (ಅಲ್ಲಾಹನಿಗೆ) ಪೂರ್ಣವಾಗಿ ಸಮರ್ಪಿಸಿಕೊಂಡವರಾಗಿದ್ದೇವೆ."
> (ಪವಿತ್ರಖುರ್‌ಆನ್ 2:137)

> "ಪ್ರತಿಯೊಂದು ಸಮುದಾಯದಲ್ಲಿ ನಾವು ಸಂದೇಶವಾಹಕನನ್ನು 'ನೀವು ಅಲ್ಲಾಹನನ್ನು ಆರಾಧಿಸಿರಿ ಮತ್ತು ದುಷ್ಟ ಶಕ್ತಿಗಳಿಂದ ದೂರ ಸರಿಯಿರಿ' ಎಂಬ ಸಂದೇಶದೊಂದಿಗೆ ಕಳುಹಿಸಿದ್ದೇವು."
> ( ಪವಿತ್ರಖುರ್‌ಆನ್ 16:37)

> "ನೀನು ಒಬ್ಬ ಮುನ್ನೆಚ್ಚರಿಕೆ ನೀಡುವವನು ಮಾತ್ರವಾಗಿರುವೆ. ನಿಶ್ಚಯವಾಗಿಯೂ ನಾವು ನಿನ್ನನ್ನು ಸತ್ಯದೊಂದಿಗೆ ಶುಭವಾರ್ತೆ ಅರುಹುವವನಾಗಿಯೂ ಮುನ್ನೆಚ್ಚರಿಕೆ ನೀಡುವವನಾಗಿಯೂ ಕಳುಹಿಸಿದ್ದೇವೆ. ಒಬ್ಬ ಮುನ್ನೆಚ್ಚರಿಕೆಗಾರನು ಕಳುಹಿಸಲ್ಪಡದೆ ಇರುವ ಯಾವುದೇ ಸಮುದಾಯವಿಲ್ಲ."
> (ಪವಿತ್ರ ಖುರ್‌ಆನ್ 35:24,25)

## ಏಕ ಸ್ವಾಮ್ಯ

ಪವಿತ್ರ ಖುರ್‌ಆನಿನ ಈ ವಚನಗಳಿಗೆ ವ್ಯಾಖ್ಯಾನ ನೀಡುತ್ತಾ ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫರಾಗಿದ್ದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್(ರ) ಹೀಗೆ ಹೇಳುತ್ತಾರೆ:

"ಈ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ಇಸ್ಲಾಮ್ ಸತ್ಯದ ಏಕಸ್ವಾಮ್ಯವನ್ನು ಘೋಷಿಸಿ ಅನ್ಯ ಧರ್ಮಗಳನ್ನು ಅದರಿಂದ ವಿಹೀನವಾದವು ಎಂದು ಹೇಳುವುದಿಲ್ಲ. ಅದು ಅಸಂದಿಗ್ಧವಾಗಿ ಹೀಗೆ ಘೋಷಿಸುತ್ತದೆ: ಎಲ್ಲಾ ಯುಗಗಳಲ್ಲಿಯೂ ಲೋಕದ ಎಲ್ಲಾ ಭಾಗಗಳಲ್ಲಿಯೂ ದೇವನು ಜನರ ಆಧ್ಯಾತ್ಮಿಕ ಮತ್ತು ಧಾರ್ಮಿಕ ಆವಶ್ಯಕತೆಗಳನ್ನು ಈಡೇರಿಸಲು ಪ್ರವಾದಿಗಳಾದ ದೂತರನ್ನು ಕಳುಹಿಸುತ್ತಾ ಇದ್ದನು. ಅವರು ದೇವ ಸಂದೇಶವನ್ನು ತಾವು ಯಾರಿಗೆ ಕಳುಹಿಸಲ್ಪಟ್ಟರೋ ಅವರಿಗೆ ತಲಪಿಸುತ್ತಾ ಇದ್ದರು."

(Islam's Response to Contemporary Issues - ಪುಟ 15)

## ಮೋಕ್ಷ

ಅವರು ಅದೇ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ: "ಮೋಕ್ಷದ ಪ್ರಶ್ನೆಯು ನಿಷ್ಕಳಂಕವೆಂದು ತೋರುವುದಾದರೂ ಅದು ಧಾರ್ಮಿಕ ಜಗತ್ತಿನಲ್ಲಿ ಶಾಂತಿಗೆ ಅಪಾಯಕರವಾದ ಪ್ರಚ್ಛನ್ನ ಶಕ್ತಿಯನ್ನು ಹೊಂದಿದೆ. ಒಂದು ಧರ್ಮ ಹೀಗೆ ಹೇಳುತ್ತದೆ: ಸೈತಾನನ ಉಪದ್ರಗಳಿಂದ ಮುಕ್ತನಾಗಲು ಮತ್ತು ಮೋಕ್ಷಗಳಿಸಲು ಆ ಧರ್ಮದ ಸುರಕ್ಷಿತ ಧಾಮಕ್ಕೆ ಧಾವಿಸಬೇಕು. ಅಲ್ಲಿಯೇ ಮೋಕ್ಷವು ಲಭಿಸುವುದು ಮತ್ತು ಪಾಪದಿಂದ ಶಾಶ್ವತ ಮುಕ್ತಿಯು ಸಿಗುವುದು. ಅದೇ ಧರ್ಮ ಬೇರೊಂದು ಮಾತನ್ನೂ ಹೇಳುತ್ತದೆ: ಯಾರು ಅದರ ಬಳಿಗೆ ಶರಣಾರ್ಥಿಯಾಗಿ ಬರುವುದಿಲ್ಲವೋ ಅವರೆಲ್ಲರೂ ಶಾಶ್ವತವಾಗಿ ಶಿಕ್ಷಿಸಲ್ಪಡುವರು. ಅವರು ದೇವ ಪ್ರೀತಿಗಾಗಿ ಬೇರೇನನ್ನೂ ಮಾಡಿದರೂ ನಿಷ್ಫಲವಾಗುವುದು. ಅವರು ತಮ್ಮ ಸೃಷ್ಟಿಕರ್ತನನ್ನೂ ಅವನ ಸೃಷ್ಟಿಗಳನ್ನೂ ಎಷ್ಟು ಪ್ರೀತಿಸಿದರೂ ಅವರು ಎಂತಹ ಪರಿಶುದ್ಧ ಸಾತ್ವಿಕ ಜೀವನ ನಡೆಸಿದರೂ ಅವರೆಲ್ಲರೂ ಖಂಡಿತವಾಗಿಯೂ ಶಾಶ್ವತ ನರಕಾಗ್ನಿಯ ಶಿಕ್ಷೆಗೆ ವಿಧಿಸಲ್ಪಡುವರು."

(Islam's Response to Contemporary Issues - ಪುಟ 23)

## ಬಲಾತ್ಕಾರ

ಧಾರ್ಮಿಕ ಸಂಘರ್ಷದ ಇನ್ನೊಂದು ಕಾರಣವು ಕೆಲವು ಮತಾಂಧರು ತಮ್ಮ ಧರ್ಮವನ್ನು ಇತರರ ಮೇಲೆ ಬಲಾತ್ಕಾರದಿಂದ ಹೇರಲು

ಯತ್ನಿಸುವುದಾಗಿದೆ. ಈ ಬಗ್ಗೆ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳಿದೆ:

**"ಧರ್ಮದ ವಿಷಯದಲ್ಲಿ ಯಾವುದೇ ಬಲಾತ್ಕಾರವಿಲ್ಲ. ಸರಿಯಾದ ಮಾರ್ಗದರ್ಶನವು ಪಥಭ್ರಷ್ಟತೆಯಿಂದ ಪ್ರತ್ಯೇಕವಾಗಿ ಸ್ಪಷ್ಟವಾಗಿದೆ."** (ಪವಿತ್ರ ಖುರ್‌ಆನ್ 2:257)

ಬಲಾತ್ಕಾರವು ಕಪಟ ವಿಶ್ವಾಸಿಗಳನ್ನು ಸೃಷ್ಟಿಸುವುದು. ಅವರು ಪ್ರಾಮಾಣಿಕ ವಿಶ್ವಾಸಿಗಳಾಗಲಾರರು. ಬೇರೆ ಕಾರಣಗಳೊಂದಿಗೆ ಈ ಕಾರಣವೂ ಸೇರಿದುದರಿಂದ ಇಸ್ಲಾಮ್ ಧರ್ಮವು ತನ್ನ ಸಂದೇಶವನ್ನು ಹರಡಲು ಬಲಾತ್ಕಾರವನ್ನು ಅನುಮತಿಸುವುದಿಲ್ಲ. ಸರ್ವಶಕ್ತನಾದ ದೇವನು ಧರ್ಮ ಪ್ರಚಾರಕ್ಕಾಗಿ ಬಲಾತ್ಕಾರಮಾಡಲು ಇಸ್ಲಾಮಿನ ಪುಣ್ಯ ಪ್ರವಾದಿಯವರಿಗೆ ಆಜ್ಞಾಪಿಸುವುದು ಅಸಂಭಾವ್ಯವಾಗಿದೆ ಎಂಬುದು ಸ್ಪಷ್ಟವಾಗಿದೆ. ಇದೇ ಕಾರಣದಿಂದ ಪವಿತ್ರ ಖುರ್‌ಆನ್ ಅವರನ್ನು ಮುನ್ನೆಚ್ಚರಿಕೆ ನೀಡುವವನೆಂದು ಹೇಳಿದೆ:

**"ಉಪದೇಶ ನೀಡು. ನೀನು ಕೇವಲ ಒಬ್ಬ ಉಪದೇಶ ನೀಡುವವನಾಗಿರುವೆ. ಅವರನ್ನು ಬಲವಂತಪಡಿಸಲು ನಿನಗೆ ಅಧಿಕಾರವಿಲ್ಲ."** (ಪವಿತ್ರ ಖುರ್‌ಆನ್ 88:22,23)

ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ರವರಿಗೆ ಹೀಗೆ ನೆನಪಿಸಿ ಕೊಡಲಾಗಿದೆ:

**"ಅವರು ವಿಮುಖರಾಗಿ ಹೋದರೆ ನಾವು ನಿನ್ನನ್ನು ಅವರ ಮೇಲ್ವಿಚಾರಕನಾಗಿ ಮಾಡಿ ಕಳುಹಿಸಿಲ್ಲ. ಸಂದೇಶವನ್ನು ತಲಪಿಸುವುದು ಮಾತ್ರ ನಿನ್ನ ಕರ್ತವ್ಯವಾಗಿದೆ."** (ಪವಿತ್ರ ಖುರ್‌ಆನ್ 42:49)

**"ಅಲ್ಲಾಹನನ್ನು ಪೂರ್ಣವಾಗಿ ಅನುಸರಿಸುವವರಲ್ಲಿ ನಾನು ಸೇರಿದವನಾಗಬೇಕೆಂದು ಮತ್ತು ಖುರ್‌ಆನನ್ನು ಓದಿ ಹೇಳಬೇಕೆಂದು ನನಗೆ ಆಜ್ಞಾಪಿಸಲಾಗಿದೆ. ಯಾರು ಸತ್ಪಥವನ್ನು ಅನುಸರಿಸುತ್ತಾನೋ ಅವನು ತನ್ನ ಆತ್ಮದ ಒಳಿತಿಗಾಗಿ ಅನುಸರಿಸುತ್ತಾನೆ. ಯಾರು ಮಾರ್ಗಭ್ರಷ್ಟನಾಗುತ್ತಾನೋ ಅವನೊಂದಿಗೆ ಹೇಳು: ನಾನೊಬ್ಬ ಮುನ್ನೆಚ್ಚರಿಕೆ ನೀಡುವವನಾಗಿದ್ದೇನೆ."** (ಪವಿತ್ರ ಖುರ್‌ಆನ್ 27:92,93)

## ಬುದ್ಧಿ

ನಮಗೆ ದೇವನಿಂದ ದಯಪಾಲಿಸಲ್ಪಟ್ಟ ಬುದ್ಧಿಯನ್ನು ಉಪಯೋಗಿಸಬೇಕೆಂದು ಪವಿತ್ರ ಖುರ್‌ಆನ್ ಪದೇ ಪದೇ ಆಗ್ರಹಪಡಿಸುತ್ತದೆ. ಒಬ್ಬನು ಮಾಡುವ ವಾದಕ್ಕೆ ಪುರಾವೆಗಳನ್ನು ಮತ್ತು ಅಧಿಕಾರವನ್ನು ಅದು ಅವಶ್ಯಪಡುತ್ತದೆ.

**"ಏನು ನಿಮಗೆ ಸ್ಪಷ್ಟವಾದ ಆಧಾರವಿದೆಯೋ? ನೀವು ಸತ್ಯ ಹೇಳುವವರಾಗಿದ್ದರೆ ನಿಮ್ಮ ಗ್ರಂಥವನ್ನು ತನ್ನಿರಿ."** (ಪವಿತ್ರ ಖುರ್‌ಆನ್ 37:157,158)

**"ಹೇಳು: ನಿಮ್ಮ ಹತ್ತಿರ ಯಾವುದಾದರೂ ಜ್ಞಾನವಿದೆಯೋ? ಹಾಗಿದ್ದರೆ, ಅದನ್ನು ನಮ್ಮ ಮುಂದೆ ತನ್ನಿರಿ. ನೀವು ಊಹಾಪೋಹಗಳನ್ನು ಮಾತ್ರ ಅನುಸರಿಸುತ್ತೀರಿ ಮತ್ತು ಅನುಮಾನದಿಂದಲೇ ವರ್ತಿಸುತ್ತೀರಿ. "** (ಪವಿತ್ರ ಖುರ್‌ಆನ್ 6:149)

**"ಹೇಳು: ನಾನು ನನ್ನ ಪ್ರಭುವಿನಿಂದ ದೊರೆತ ಸ್ಪಷ್ಟವಾದ ಸಾಕ್ಷ್ಯಾಧಾರದ ಮೇಲೆ ನಿಂತಿರುವೆನು."** (ಪವಿತ್ರ ಖುರ್‌ಆನ್ 6:58)

## ಇಚ್ಛಾ ಸ್ವಾತಂತ್ರ್ಯ

ಸರ್ವಶಕ್ತನಾದ ದೇವನು ತನ್ನನ್ನು ನಂಬಬೇಕೆಂದು ಯಾರನ್ನೂ ಬಲವಂತಪಡಿಸುವುದಿಲ್ಲ. ಅವನನ್ನು ಆರಾಧಿಸುವ ಮತ್ತು ಆರಾಧಿಸದೆ ಇರುವ ಸ್ವಾತಂತ್ರ್ಯವನ್ನು ಅವನು ಪ್ರತಿಯೊಬ್ಬನಿಗೆ ನೀಡಿದ್ದಾನೆ.

**"ನೀನು ಹೇಳು: ಪ್ರಭಾವಶಾಲಿ ಸಾಕ್ಷ್ಯಾಧಾರಗಳು ಅಲ್ಲಾಹನ ಬಳಿಯಲ್ಲಿವೆ. ಅವನು ಇಚ್ಛಿಸುತ್ತಿದ್ದರೆ ನಿಮಗೆಲ್ಲರಿಗೂ ನಿಶ್ಚಯವಾಗಿಯೂ ಮಾರ್ಗದರ್ಶನ ನೀಡುತ್ತಿದ್ದನು."** (ಪವಿತ್ರ ಖುರ್‌ಆನ್ 6:150)

ಧಾರ್ಮಿಕ ಜಗಳಗಳು ತಲೆದೋರದಿರಲು ಇಸ್ಲಾಮ್ ಧರ್ಮವು ಧರ್ಮಪ್ರಚಾರಕ್ಕೆ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ನೀಡಿದೆ:

**"ನೀನು ಜಾಣ್ಮೆಯಿಂದಲೂ ಉತ್ತಮ ಉಪದೇಶದ ಮೂಲಕವಾಗಿಯೂ ನಿನ್ನ ಪ್ರಭುವಿನ ಮಾರ್ಗದ ಕಡೆಗೆ (ಜನರನ್ನು) ಕರೆ. ನೀನು ಅವರೊಂದಿಗೆ ಅತ್ಯುತ್ತಮವಾದ ರೀತಿಯಲ್ಲಿ ವಾಗ್ವಾದ ಮಾಡು. ನಿಶ್ಚಯವಾಗಿಯೂ ನಿನ್ನ ಪ್ರಭು ತನ್ನ ಮಾರ್ಗದಿಂದ ಯಾರು ದಾರಿ ತಪ್ಪಿ ಹೋಗಿರುವನೆಂಬುದನ್ನು ಚೆನ್ನಾಗಿ ತಿಳಿದಿರುವನು. ಯಾರು ಮಾರ್ಗದರ್ಶನವನ್ನು ಪಡೆದಿರುವರೋ ಅವರನ್ನೂ ಚೆನ್ನಾಗಿ ತಿಳಿದಿರುವನು."** (ಪವಿತ್ರ ಖುರ್‌ಆನ್ 16:126)

## ಬೈಗುಳು

ಬೈಗುಳಕ್ಕೂ ಉತ್ತಮವಾಗಿ ಪ್ರತಿಕ್ರಿಯೆ ನೀಡಬೇಕು. ಪವಿತ್ರ ಖುರ್‌ಆನ್ ಈ ಬಗ್ಗೆ ಹೀಗೆ ಹೇಳಿದೆ:

**"ನೀನು ಕೆಟ್ಟದ್ದನ್ನು ಅತ್ಯುತ್ತಮವಾದುದರ ಮೂಲಕ ದೂರೀಕರಿಸು. ಅವರು ಆರೋಪಿಸುವುದೇನೆಂಬುದನ್ನು ನಾವು ಚೆನ್ನಾಗಿ ಬಲ್ಲೆವು."** (ಪವಿತ್ರ ಖುರ್‌ಆನ್ 23:97)

ಇಸ್ಲಾಮ್ ಏಕದೇವ ವಿಶ್ವಾಸವನ್ನು ಪ್ರತಿಪಾದಿಸುವ ಧರ್ಮವಾಗಿದ್ದರೂ ಅದು ತನ್ನ ಅನುಯಾಯಿಗಳಿಗೆ, ಶಾಂತಿ ಮತ್ತು ಸೌಹಾರ್ದವನ್ನು ಕಾಪಾಡಲಿಕ್ಕಾಗಿ ವಿಗ್ರಹ ಮತ್ತು ಊಹಾಪೋಹದ ದೇವರುಗಳನ್ನು ನಿಂದಿಸಬಾರದೆಂದು ಕಟ್ಟುನಿಟ್ಟಾಗಿ ಉಪದೇಶಿಸಿದೆ :

**"ಅಲ್ಲಾಹನ ಹೊರತು ಅವರು ಯಾರನ್ನು ಕರೆದು ಪ್ರಾರ್ಥಿಸುತ್ತಾರೋ ಅವರನ್ನು ನಿಂದಿಸಬೇಡಿರಿ."** (ಪವಿತ್ರ ಖುರ್‌ಆನ್ 6:109)

## ವ್ಯಕ್ತಿ ಸ್ವಾತಂತ್ರ್ಯ

ವ್ಯಕ್ತಿ ಸ್ವಾತಂತ್ರ್ಯದ ಕುರಿತು ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್(ರ) ಹೀಗೆ ಹೇಳುತ್ತಾರೆ:

"ಇಸ್ಲಾಮ್ ಧರ್ಮವು ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಿದೆಯಾದರೂ ಆ ಸ್ವಾತಂತ್ರ್ಯವನ್ನು ಗಲಭೆ, ಅರಾಜಕತೆ ಮತ್ತು ಸೇಡು ತೀರಿಸುವಿಕೆಗೆ ಉಪಯೋಗಿಸಿ ನಿಷ್ಕಳಂಕರಿಗೆ ಹಾನಿಯನ್ನು ಉಂಟು ಮಾಡಲು ಸಹಕಾರಿಯಾಗುವಂತೆ ಮಾಡಬಾರದೆಂದು ನಿರ್ಬಂಧಿಸುತ್ತದೆ. ಪವಿತ್ರ ಖುರ್‌ಆನ್ ನೀಡುವ ಸಂದೇಶ 'ದೇವನು ಗಲಭೆಯನ್ನು ಇಷ್ಟಪಡುವುದಿಲ್ಲ' (2:206) ಎಂದಾಗಿದೆ. ಬೇರೆ ಧರ್ಮಗಳ ಹಾಗೆ ಇಸ್ಲಾಮ್ ಧರ್ಮವು ಸಮತೋಲನದ ಸ್ವಾತಂತ್ರ್ಯವನ್ನು ಕೊಡುಕೊಳ್ಳುವ ಮನೋಭಾವದಿಂದ ಅನುಭವಿಸುವುದನ್ನು ಒತ್ತಿ ಹೇಳಿದೆ. ಪರಿಪೂರ್ಣ ಸ್ವಾತಂತ್ರ್ಯ ಎಂಬ ತತ್ವವು ಪೊಳ್ಳಾಗಿದೆ. ಅದು ಸಮಾಜದ ದೃಷ್ಟಿಯಲ್ಲಿ ಅಸಂಬದ್ಧವೂ ಅವಾಸ್ತವಿಕವೂ ಆಗಿದೆ. ಕೆಲವು ಸಾರಿ ಸ್ವಾತಂತ್ರ್ಯವನ್ನು ಹೇಗೆ ತಪ್ಪಾಗಿ ಭಾವಿಸಿ ಪ್ರಯೋಗಿಸುತ್ತಾರೆಂದರೆ ನಾವು ನಚ್ಚಿಕೊಂಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವು ವಿರೂಪಗೊಳಿಸಲ್ಪಟ್ಟು, ನಿಂದಿಸಲು ಇರುವ ಸ್ವಾತಂತ್ರ್ಯವಾಗಿ ಪರಿಣಮಿಸಿ ಬೈಯಲು ಮತ್ತು ಮಿಥ್ಯಾರೋಪ ಹೊರಿಸಲು ಇರುವ ಸ್ವಾತಂತ್ರ್ಯವಾಗಿ ಬಳಸಲಾಗುತ್ತಿದೆ."

(Islam's Response to Contemporary Issues - ಪುಟ 38)

ಪ್ರಚೋದನೆಯ ಕಾರಣದಿಂದ ಶಾಂತಿ ಭಂಗವಾಗುತ್ತದೆ ಎಂಬ ವಾದವನ್ನು ಇಸ್ಲಾಮ್ ಅಂಗೀಕರಿಸುವುದಿಲ್ಲ. ಪ್ರಚೋದನೆಗೆ ಗುರಿಯಾಗುವ ಸ್ಥಳದಿಂದ ಎದ್ದು ಹೋಗಬೇಕೆಂದೂ ಆ ಕಾರಣದಿಂದ ಶಾಂತಿ ಭಂಗ ಮಾಡಬಾರದೆಂದೂ ಅದು ಹೇಳುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

> **"ಅಲ್ಲಾಹನ ದೃಷ್ಟಾಂತಗಳನ್ನು ಅವರು ನಿರಾಕರಿಸುವುದನ್ನು ಮತ್ತು ಪರಿಹಾಸ ಮಾಡುವುದನ್ನು ನೀವು ಆಲಿಸಿದಾಗ, ಅವರು ಬೇರೆ ಒಂದು ಮಾತನ್ನು ಆರಂಭಿಸುವ ತನಕ ನೀವು ಅವರೊಂದಿಗೆ ಕುಳಿತುಕೊಳ್ಳಬೇಡಿರಿ ಎಂದು ಅಲ್ಲಾಹನು ಈ ಗ್ರಂಥದಲ್ಲಿ ನಿಮಗೆ ಆದೇಶಿಸಿದ್ದಾನೆ." (4:141)**

## ಧಾರ್ಮಿಕ ಸ್ಥಳಗಳ ಸಂರಕ್ಷಣೆ

ಇದರ ಮೊದಲು ನಾನು ವಿವರಿಸಿದ ತತ್ವಗಳಿಗೆ ಅನುಸಾರವಾಗಿ ಇಸ್ಲಾಮ್ ಧರ್ಮವು ಎಲ್ಲಾ ಧಾರ್ಮಿಕ ಸ್ಥಳಗಳ ಸಂರಕ್ಷಣೆಯನ್ನು ತನ್ನ ಅನುಯಾಯಿಗಳಿಗೆ ಕಡ್ಡಾಯಗೊಳಿಸಿದೆ.

> **"ಅಲ್ಲಾಹನು ಕೆಲವರನ್ನು ಬೇರೆ ಕೆಲವರ ಮೂಲಕ ತಡೆದು ನಿಲ್ಲಿಸದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿಯರ ದೇವಾಲಯಗಳೂ ಅಲ್ಲಾಹನ ನಾಮವು ಹೆಚ್ಚಾಗಿ ಸ್ಮರಿಸಲ್ಪಡುವ ಮಸ್‌ಜಿದ್‌ಗಳೂ ನಾಶಗೊಳಿಸಲ್ಪಡುತ್ತಿದ್ದುವು."**
>
> (ಪವಿತ್ರಖುರ್‌ಆನ್ 22:41)

ಧಾರ್ಮಿಕ ಸ್ಥಳಗಳ ಸಂರಕ್ಷಣೆಯ ವಿಷಯವನ್ನು ಪ್ರಸ್ತಾಪಿಸುತ್ತಾ ಮುಸ್ಲಿಮರ ಆರಾಧನಾಲಯವನ್ನು ಕೊನೆಯದಾಗಿ ಹೇಳಿದುದು ಗಮನಾರ್ಹವಾಗಿಲ್ಲವೇ? ಹಝ್ರತ್ ಮುಹಮ್ಮದ್ ಪೈಗಂಬರ್‌ರವರು[ಸ] ನಜ್‌ರಾನಿನ ಏಕದೇವ ವಿಶ್ವಾಸಿಗಳಾದ ಕ್ರೈಸ್ತರ ಪ್ರತಿನಿಧಿಗಳಿಗೆ ತನ್ನ ಮಸ್‌ಜಿದ್‌ನಲ್ಲಿ ಆರಾಧಿಸಲು ಅನುಮತಿ ನೀಡಿದ್ದರು. ಧಾರ್ಮಿಕ ಸಹಿಷ್ಣುತೆಯ ಎಂತಹ ಅಮೋಘ ಉದಾಹರಣೆ!

## ಇಸ್ಲಾಮಿಕ ಜಿಹಾದ್

ಇಷ್ಟರವರೆಗೆ ನಾನು ನಿಮಗೆ ನೀಡಿದ ವಿವರಣೆಯಿಂದ, ಮುಸ್ಲಿಮೇತರರನ್ನು ಇಸ್ಲಾಮ್ ಧರ್ಮ ಸ್ವೀಕರಿಸಲು ಬಲಾತ್ಕಾರ ಮಾಡಿ ಅವರು ಇಸ್ಲಾಮ್ ಧರ್ಮ ಸ್ವೀಕರಿಸದಿದ್ದರೆ ಅವರ ತಲೆ ತುಂಡರಿಸಿ ಬಿಡುವುದೇ ಇಸ್ಲಾಮಿಕ ಜಿಹಾದ್ ಎಂಬುದು ಊಹಿಸಲು ಸಹ ಸಾಧ್ಯವಿಲ್ಲದ ಒಂದು ಭಾವನೆಯಾಗಿದೆ ಎಂದು ನಿಮಗೆ ಸ್ಪಷ್ಟವಾಗಿರಬಹುದು. ನೀವು ನೆನಪಿಡಬೇಕಾದ ಸಂಗತಿ ಏನೆಂದರೆ:

"ಖಡ್ಗಗಳು ಭೂಪ್ರದೇಶಗಳನ್ನು ಗೆಲ್ಲಬಹುದು ಆದರೆ ಹೃದಯಗಳನ್ನು ಗೆಲ್ಲಲಾರವು. ಬಲಾತ್ಕಾರವು ತಲೆಗಳನ್ನು ಬಗ್ಗುವಂತೆ ಮಾಡಬಲ್ಲದು ಆದರೆ ಮನಸ್ಸುಗಳನ್ನು ಬಗ್ಗಿಸಲಾರದು."

(Islam's Respose to Contemporary Issues - ಪುಟ 2)

ಧರ್ಮ ಪರಿತ್ಯಾಗ ಮತ್ತು ಧರ್ಮ ನಿಂದನೆಗೆ ಇದೆಯೆಂದು ಸರ್ವ ಸಾಮಾನ್ಯವಾಗಿ ಭಾವಿಸಲಾಗುವ ಶಿಕ್ಷೆಯು ಪಾರದರ್ಶಿಯಾದ ಇಸ್ಲಾಮಿಕ ತತ್ವಗಳ ಸೂಕ್ಷ್ಮದರ್ಶನದಲ್ಲಿ ವೀಕ್ಷಿಸಿದರೆ ನ್ಯಾಯಬದ್ಧವೆಂದು ಅಂಗೀಕರಿಸಲು ಸಾಧ್ಯವಿಲ್ಲ. ಧಾರ್ಮಿಕ ನಂಬಿಕೆಗಳಲ್ಲಿ ವ್ಯತ್ಯಾಸವಿದ್ದರೂ ಅನ್ಯಧರ್ಮದ ಜನರೊಂದಿಗೆ ಪರಸ್ಪರ ಪ್ರಯೋಜನಕರವಾದ ರೀತಿಯಲ್ಲಿ ಸಹಕಾರಭಾವದಿಂದ ವರ್ತಿಸಲು ಪವಿತ್ರ ಖುರ್‌ಆನ್ ಉಪದೇಶಿಸುತ್ತದೆ:

> **"ಓ ಗ್ರಂಥದವರೇ, ನಮ್ಮ ಮತ್ತು ನಿಮ್ಮ ಮಧ್ಯೆ ಸಮವಾಗಿರುವ ಒಂದು ಮಾತಿನ ಕಡೆಗೆ ನೀವು ಬನ್ನಿರಿ - ನಾವು ಏಕದೇವನ ಹೊರತು ಬೇರೆ ಯಾರನ್ನೂ ಆರಾಧಿಸುವುದಿಲ್ಲ ಮತ್ತು ನಾವು ಅವನಿಗೆ ಯಾರನ್ನೂ ಸರಿಸಾಟಿಯಾಗಿ ಮಾಡುವುದಿಲ್ಲ." (3:65)**
>
> **"ಒಂದು ಸಮುದಾಯದ ದ್ವೇಷವು ನಿಮ್ಮನ್ನು ಅವರ ವಿರುದ್ಧ ಅನ್ಯಾಯದಿಂದ ವರ್ತಿಸುವಂತೆ ಪ್ರೇರೇಪಿಸದಿರಲಿ. ಒಳ್ಳೆಯ ಕೆಲಸ ಮಾಡುವುದರಲ್ಲಿಯೂ ಭಯಭಕ್ತಿಯಲ್ಲಿಯೂ ಒಬ್ಬರಿನ್ನೊಬ್ಬರಿಗೆ ಸಹಾಯ ಮಾಡಿರಿ. ಪಾಪ ಮತ್ತು ಅತಿರೇಕ ವರ್ತನೆಯಲ್ಲಿ ಒಬ್ಬರಿನ್ನೊಬ್ಬರಿಗೆ ಸಹಾಯ ಮಾಡಬೇಡಿರಿ." (5:3)**

## ಇಸ್ಲಾಮಿಕ ಚರಿತ್ರೆ

ಇಸ್ಲಾಮಿಕ ಚರಿತ್ರೆಯು ಇಂತಹ ಸಹಕಾರ, ಸಹಾಯಗಳ ಘಟನೆಗಳಿಂದ ತುಂಬಿದೆ. ಅವು ಶಾಂತಿ ಸ್ಥಾಪನೆಗೆ ಸಹಾಯಕವಾದುವು ಮತ್ತು ಜ್ಞಾನದ ಗಡಿಗಳನ್ನು ವಿಸ್ತಾರಗೊಳಿಸಿದುವು. ಮುಸ್ಲಿಮರು ಅನ್ಯ ಧರ್ಮದೊಂದಿಗೆ ಸಹಕಾರ ಮನೋಭಾವದಿಂದ ವರ್ತಿಸದೆ ಇರುತ್ತಿದ್ದರೆ ಯುರೋಪಿನ ನವಜಾಗೃತಿ ನಿಶ್ಚಯವಾಗಿಯೂ ಸಂಭವಿಸುತ್ತಿರಲಿಲ್ಲ.

ಇಂತಹ ಮಹಾನ್ ತತ್ವಗಳನ್ನು ಪಾಲಿಸುವವರು ಈಗಿನ ಕಾಲದಲ್ಲಿಯೂ ಲೋಕವನ್ನು ಪೂರ್ವಗ್ರಹಗಳಿಂದ ಮುಕ್ತವನ್ನಾಗಿ ಮಾಡಲು, ಹಿಂಸೆಯನ್ನು ವರ್ಜಿಸುವಂತೆ ಪ್ರೋತ್ಸಾಹಿಸಲು, ಐಕ್ಯತೆಯನ್ನೂ ಶಾಂತಿಯನ್ನೂ ಸ್ಥಾಪಿಸಲು, ಇಂದಿನ ಮತ್ತು ಮುಂದಿನ ಪೀಳಿಗೆಗಳ ಅಭಿವೃದ್ಧಿ ಮತ್ತು ಸುಖಸಂಪತ್ತಿಗಾಗಿ ಪ್ರಯತ್ನಿಸಲು ಏಕೆ ಸಹಾಯ ಮಾಡಬಾರದು.

## ಪಾರಿತೋಷಕ

ಅಹ್ಮದಿಯಾ ಜಮಾಅತಿನ ತೃತೀಯ ಖಲೀಫರಾಗಿದ್ದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್[ರ] ಅವರನ್ನು ಸ್ಮರಿಸಲು ಸಹಾಯಕವಾದ ಕಾರಣಗಳಲ್ಲಿ ಒಂದು, ಅವರು ಅಹ್ಮದೀ ಮುಸ್ಲಿಮರಿಗೆ ನೀಡಿದ ಈ ಧ್ಯೇಯವಾಕ್ಯವಾಗಿದೆ:

**"Love For All, Hatred For None."**
**"ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ."**

## ಅಹ್ಮದೀ ಮುಸ್ಲಿಮರು

ಪವಿತ್ರ ಖುರ್‌ಆನಿನ ವಚನಗಳು, ಹಝ್ರತ್ ಪೈಗಂಬರರ[ಸ] ನುಡಿಗಳು ಮತ್ತು ಇವುಗಳಿಗೆ ಅಹ್ಮದಿಯಾ ಜಮಾಅತಿನ ಸ್ಥಾಪಕರು ಮತ್ತು ಅವರ ನಂತರ ಅವರ ಖಲೀಫರು ನೀಡಿದ ವ್ಯಾಖ್ಯಾನಗಳ ಬೆಳಕಿನಲ್ಲಿ ಅಹ್ಮದಿಯಾ ಮುಸ್ಲಿಮರು ಲೋಕದಾದ್ಯಂತ ಹಿಂಸೆಯನ್ನು ಸಂಪೂರ್ಣವಾಗಿ ವರ್ಜಿಸಿರುವವರು ಮತ್ತು ಅಸಹಿಷ್ಣುತೆ ಮತ್ತು ಶಾಂತಿ ಭಂಗಕಾರಕವಾದ ಮಾತುಗಳಿಂದ ಮತ್ತು ನಡೆವಳಿಕೆಗಳಿಂದ ದೂರ ಸರಿದಿರುವವರು.

ಅಹ್ಮದಿಯಾ ಸಂಘಟನೆಯವರು ಇಸ್ಲಾಮಿನ ಸುಂದರ ತತ್ವಗಳನ್ನು ಲೋಕದಾದ್ಯಂತ ಪ್ರಚಾರ ಮಾಡಲು ಬಿರುಸಿನ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ತಮ್ಮ ಕೆಲಸವನ್ನು ಶಾಂತಿಯುತ ಪ್ರಚಾರ, ಭಾಷಣ, ವಿಚಾರ ಸಂಕಿರಣ ಮತ್ತು ಸಾಹಿತ್ಯ ಹಂಚುವಿಕೆಯ ಮೂಲಕ ಈಡೇರಿಸುತ್ತಾರೆ. ಅವರು ಇಸ್ಲಾಮ್‌ಧರ್ಮ, ಕ್ರೈಸ್ತಧರ್ಮ, ಬುದ್ಧಧರ್ಮ, ಹಿಂದೂ ಧರ್ಮ ಹಾಗೂ ಇನ್ನಿತರ ಧರ್ಮಗಳ ಪ್ರತಿನಿಧಿಗಳು ಒಂದೇ ವೇದಿಕೆಯಲ್ಲಿ ತಮ್ಮ ಧರ್ಮಗಳ ಕುರಿತು ಭಾಷಣ ಮಾಡಲು ಸಭೆಗಳನ್ನು ಏರ್ಪಾಡು ಮಾಡುವುದನ್ನು ತಮ್ಮ ಧಾರ್ಮಿಕ ತತ್ವಗಳಲ್ಲಿ ಒಂದಾಗಿ ಮಾಡಿದ್ದಾರೆ.

ಬಹಳ ಸೌಹಾರ್ದಭರಿತ ವಾತಾವರಣದಲ್ಲಿ ವಿವಿಧ ಧರ್ಮಗಳ ಪ್ರತಿನಿಧಿಗಳೊಂದಿಗೆ ಸ್ನೇಹದಿಂದ ಕೂಡಿದ ಚರ್ಚೆಗಳು ಅಹ್ಮದಿಯಾ ಸಂಘಟನೆ ವತಿಯಿಂದ ನಡೆಸಲ್ಪಡುತ್ತವೆ.

ಮುಸ್ಲಿಮ್ ಮತ್ತು ಕ್ರೈಸ್ತ ಧರ್ಮದವರ ಮಧ್ಯೆ ನಡೆಯುವ ಗಲಭೆಗಳು ನಮಗೆ ಮಾನಸಿಕ ನೋವು ನೀಡಿದೆ. ಅವುಗಳು ಇಸ್ಲಾಮ್ ಧರ್ಮಕ್ಕೂ

**(10 ನೇ ಪುಟಕ್ಕೆ)**

# ಮುಹಮ್ಮದ್ ಪೈಗಂಬರರ ದಾನಶೀಲತೆ

❖ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್
ಖಲೀಫತುಲ್ ಮಸೀಹ್ V

ಜನರು ಸಾಮಾನ್ಯವಾಗಿ ಸಂಪತ್ತನ್ನು ಬಯಸುವವರಾಗಿದ್ದಾರೆ. ಜನರೆಡೆಯಲ್ಲಿ ಹೆಸರು ಗಳಿಸಲಿಕ್ಕೂ ತನ್ನ ಸುಖಾಡಂಬರಗಳಿಗೋಸ್ಕರ ಸೌಕರ್ಯಗಳನ್ನೇರ್ಪಡಿಸಲಿಕ್ಕೂ ತನ್ನ ಮರಣದ ಬಳಿಕ ಪತ್ನಿ ಮತ್ತು ಮಕ್ಕಳು ಸುಖಸಮೃದ್ಧಿಯೊಂದಿಗೆ ಬದುಕಲಿಕ್ಕೂ ಹಣದ ಭಂಡಾರವನ್ನು ಅವರಿಗೋಸ್ಕರ ಬಿಟ್ಟುಹೋಗಲಿಕ್ಕಾಗಿ ಜನರು ಧನರಾಶಿ ಸಂಗ್ರಹಿಸಲು ಪರಿಶ್ರಮಿಸುತ್ತಾರೆ. ತನ್ನ ಮರಣದ ಬಳಿಕ, ಇಂತಹ ವ್ಯಕ್ತಿ ತನ್ನ ಸ್ವತ್ತನ್ನೆಲ್ಲ ಬಿಟ್ಟು ಮರಣಹೊಂದಿದನೆಂದೂ ಆತನ ಮಕ್ಕಳು ಇಂದು ಆತನು ಸಂಪಾದಿಸಿಟ್ಟ ಸಂಪತ್ತಿನಿಂದ ಐಶಾರಾಮದಿಂದ ಬದುಕುತ್ತಿದ್ದಾರೆಂದೂ ಜನರು ಹೇಳಬೇಕೆಂಬ ಒಂದು ಆಶೆ ಸಹ ಅದರಲ್ಲಿ ಅಡಗಿಕೊಂಡಿದೆ.

ತಾವು ಜನರೊಡನೆ ಸಹತಾಪವುಳ್ಳವರೆಂದೂ ಅನುಕಂಪ ತೋರಿಸುವವರೆಂದೂ ಭಾವಿಸುವ ಕೆಲವರಿದ್ದಾರೆ. ಜನರ ಆವಶ್ಯಕತೆಗಳನ್ನು ತಾವು ಪೂರೈಸುತ್ತೇವೆಂದು ಅವರು ವಾದಿಸುತ್ತಾರೆ. ಆದರೆ, ಅವರ ವರ್ತನೆ ಮತ್ತು ವಾದಕ್ಕೆ ಪರಸ್ಪರ ಏನೂ ಹೊಂದಾಣಿಕೆಯಿಲ್ಲ. ಅದು ಕೇವಲ ಒಂದು ತಾತ್ಕಾಲಿಕವಾದ ಆವೇಶವಾಗಿದೆ. ಅದರಲ್ಲೂ ಇತರರು ಕಾಣಬೇಕೆಂಬ ವಾಂಛೆಯಿರುತ್ತದೆ. ಅಂದರೆ, ಜನರಿಗೋಸ್ಕರ ಖರ್ಚುಮಾಡುವವನೆಂಬ ಖ್ಯಾತಿ ತನಗೆ ಸಿಗಬೇಕೆಂಬ ಆಶೆಯಿಂದ ಅವರು ಖರ್ಚು ಮಾಡುತ್ತಾರೆ.

ಆದರೆ,ಸಂಪತ್ತು ದೊರೆತಾಗ ಅದನ್ನು ಹೇಗೆ ವ್ಯಯಿಸಬೇಕೆಂದು ಹಝ್ರತ್ ಮುಹಮ್ಮದ್ ಪೈಗಂಬರ್(ಸಲ್ಲಲ್ಲಾಹು ಅಲೈಹಿ ವಸಲ್ಲಂ) ನಮಗೆ ಕಲಿಸಿಕೊಟ್ಟಿದ್ದಾರೆ. ಇದು ಅವರ ಅನುಗ್ರಹೀತ ಜೀವನದ ಅಂಶವಾಗಿರುತ್ತದೆ. ಇದರಲ್ಲಿ ಪೈಗಂಬರರು(ಸ) ಅತುಲ್ಯವಾದ ಮಾದರಿಯಾಗಿದ್ದರು. ದಾನಧರ್ಮದ ಉದಾತ್ತವಾದ ಈ ರೀತಿ ಪೈಗಂಬರರ(ಸ) ಜೀವಿತಕ್ಕೆ ಮುಂಚೆ ಎಂದೂ ಗೋಚರಿಸಿಲ್ಲ. ಮುಂದೆಯೂ ಗೋಚರಿಸಲಾರದು. ಜನರು ಏಕದೇವನನ್ನು ಗುರುತಿಸಿ ತಿಳಿಯಬೇಕೆಂಬ ಮತ್ತು ಲೋಕದಲ್ಲಿ ಏಕದೇವ ಸಿದ್ಧಾಂತ ಜಯಿಸಬೇಕೆಂಬ ಯೋಚನೆ ಪೈಗಂಬರರಿಗೆ(ಸ) ರಾತ್ರಿ-ಹಗಲು ಇತ್ತು. ಅದರೊಂದಿಗೆ ಜನರ ಆವಶ್ಯಕತೆಗಳನ್ನು ಪೂರೈಸಿಕೊಡಬೇಕೆಂಬ ಉತ್ಕಟೇಚ್ಛೆ. ಅವರಿಗೆ ತನ್ನ ಮತ್ತು ತನ್ನ ಪತ್ನಿ-ಮಕ್ಕಳ ಸುಖಕ್ಷೇಮಗಳ ಕುರಿತು ಏನೂ ಯೋಚನೆ ಇರಲಿಲ್ಲ. ತನ್ನ ಶಿಷ್ಯವೃಂದಕ್ಕೂ ಇದನ್ನೇ ಕಲಿಸಿದರು: ಇತರರಿಗೋಸ್ಕರ ನಿಮ್ಮ ಕೈಗಳನ್ನು ಬಿಡಿಸಿಡಿರಿ. ಕಾರಣವೇನೆಂದರೆ, ಪರಲೋಕ ಜೀವಿತದಲ್ಲಿ ನಿಮ್ಮ ಪ್ರಯೋಜನಕ್ಕೆ ಬರುವುದು ಇದೊಂದು ಮಾತ್ರವಾಗಿದೆ.

ಪೈಗಂಬರರು(ಸ) ಹೇಳಿದರು: "ದಾನಶೀಲರಲ್ಲಿ ಅತಿದೊಡ್ಡ ದಾನಶೀಲ ಅಲ್ಲಾಹನಾಗಿದ್ದಾನೆ."

ಹಝ್ರತ್ ಪೈಗಂಬರರು(ಸ) ಮನುಷ್ಯರ ಪೈಕಿ ಅತಿ ದೊಡ್ಡ ದಾನಶೀಲರಾಗಿದ್ದರು. ಅಲ್ಲಾಹನು ಅವರಿಗೆ ನೀಡಿದ ಯಾವ ಸಂಪತ್ತನ್ನೂ ಅವರು ತನ್ನ ಕೈವಶ ಇಡಲಿಲ್ಲ. ಆದಷ್ಟು ಬೇಗ ಅದನ್ನು ಅರ್ಹರಾದವರಿಗೆ ಹಂಚಬೇಕೆಂಬ ಇಚ್ಛೆ ಅವರಿಗಿತ್ತು. ಹಝ್ರತ್ ಪೈಗಂಬರರು(ಸ) ಹೇಳಿದರು: "ನಾನು ಕೇವಲ ಓರ್ವ ಹಂಚುವವನಾಗಿದ್ದೇನೆ; ಅಲ್ಲಾಹು ನೀಡುವವನು." ಒಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: "ಪೈಗಂಬರರು(ಸ) ಎಲ್ಲರಿಗಿಂತ ಸೌಂದರ್ಯವಂತನೂ ಬಲು ದೊಡ್ಡ ಆತಿಥೇಯನೂ ಎಲ್ಲರಿಗಿಂತಲೂ ಮಿಗಿಲಾದ ದಾನಶೀಲನೂ ಆಗಿದ್ದರು. ರಮಝಾನ್ ಮಾಸದಲ್ಲಿ ಅವರ ದಾನಧರ್ಮ ಪರಾಕಾಷ್ಠೆಗೆ ತಲಪುತ್ತಿತ್ತು." ವರದಿಯಲ್ಲಿ ಅದನ್ನು ಶಕ್ತಿಯುತ ಗಾಳಿಯೊಂದಿಗೆ ಹೋಲಿಸಲಾಗಿದೆ. ಯಾರಾದರೂ ಪೈಗಂಬರರೊಡನೆ ಏನಾದರೂ ಕೇಳಿದಾಗ, ಪೈಗಂಬರರ ಕೈಯಲ್ಲಿ ಅದು ಇದ್ದು, ಅವರು ಅದನ್ನು ಕೊಡದಿದ್ದ ಘಟನೆ ಎಂದೂ ನಡೆದಿಲ್ಲ. ಕೆಲವು ಸಲ ಸಾಲ ಪಡೆದು ಅವರು ದಾನಧರ್ಮ ನೀಡಿದ್ದಾರೆ.

ಪೈಗಂಬರರ ದಾನಧರ್ಮದ ಬಗ್ಗೆ ಅನೇಕ ವರದಿಗಳಿವೆ. ಆಡಿನ ಹಿಂಡನ್ನೂ ಒಂಟೆಯ ಗುಂಪನ್ನೂ ಅವರು ದಾನಮಾಡಿದ್ದಾರೆ. ಸಹಾಯಾರ್ಥಿಗಳಾದ ಕೆಲವರು ಪೈಗಂಬರರೊಡನೆ ಧಿಕ್ಕಾರದಿಂದ ವರ್ತಿಸಿದ ಸಂದರ್ಭಗಳು ಸಹ ಇವೆ. ಆದರೆ ಪೈಗಂಬರರು ಸತ್‌ಸ್ವಭಾವವನ್ನು ತೋರ್ಪಡಿಸುತ್ತಾ ಅಂತಹ ಜನರಿಗೂ ದಾನಧರ್ಮನೀಡಿದ್ದಾರೆ.

ಯಾರಾದರೂ ಪೈಗಂಬರರಿಗೆ(ಸ) ಏನಾದರೂ ಉಡುಗೊರೆ ನೀಡಿದರೆ ಅದಕ್ಕಿಂತ ಉತ್ತಮವಾದುದನ್ನು ಪೈಗಂಬರರು ಪಾರಿತೋಷಕವಾಗಿ ನೀಡುತ್ತಿದ್ದರು. ಸಾಮಾನ್ಯ ಉಡುಗೊರೆಗಳ ಬದಲಿಗೆ ಬೆಲೆಬಾಳುವ ಉಡುಗೊರೆಗಳನ್ನು ನೀಡುವುದು ಅವರ ಜೀವನಚರ್ಯೆಯಾಗಿತ್ತು. ಹಾಗೆಯೇ ದಾನಧರ್ಮ ನೀಡುವ ಮಾರ್ಗಗಳನ್ನು ಅವರು ಹುಡುಕುತ್ತಿದ್ದರು. ಯಾರಿಂದಾದರೂ ಹಣಕೊಟ್ಟು ವಸ್ತುವನ್ನು ಖರೀದಿಸಿದ ಬಳಿಕ ಆ ವಸ್ತುವನ್ನು ಅವರಿಗೆಯೇ ದಾನವಾಗಿ ಮರಳಿಸಿದ ಸಂದರ್ಭಗಳೂ ಇವೆ. ಭೌತಿಕ ಸಂಪತ್ತಿಗೆ ಪೈಗಂಬರರ ದೃಷ್ಟಿಯಲ್ಲಿ ಏನೂ ಸ್ಥಾನವಿರಲಿಲ್ಲ. ತನ್ನ ಕೈಯಲ್ಲಿರುವ ಎಲ್ಲವನ್ನೂ ವಿತರಣೆ ಮಾಡಬೇಕೆಂದು ಅವರ ಬಯಕೆಯಾಗಿತ್ತು.

ಹಝ್ರತ್ ಅಬೂದರ್(ರಝಿಯಲ್ಲಾಹು ಅನ್‌ಹು) ವರದಿ ಮಾಡುತ್ತಾರೆ: "ಪೈಗಂಬರ್(ಸ) ಹೇಳಿದರು: ಉಹ್‌ದ್ ಪರ್ವತದಷ್ಟು ಬಂಗಾರ ನನ್ನ ಕೈಯಲ್ಲಿ ಇದ್ದರೆ ಮೂರನೇ ದಿನ ಉದಿಸಿ ಬರುವುದಕ್ಕಿಂತ ಮುಂಚೆಯೇ ಅದನ್ನು ಹಂಚಿಬಿಡಬೇಕೆಂದು ನನ್ನ ಇಚ್ಛೆ. ಆ ಬಳಿಕ ಹೇಳಿದರು: ಪುನರುತ್ಥಾನ ದಿನದಂದು ಸಿರಿವಂತರು ನಷ್ಟಹೊಂದಿದವರಾಗುವರು; ಸೃಷ್ಟಿಗಳಿಗೋಸ್ಕರ ಖರ್ಚು ಮಾಡುವವರು ಹೊರತು."

ವಾಗ್ದತ್ತ ಮಸೀಹ್ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅಲೈಹಿಸ್ಸಲಾಂ) ಹೇಳುತ್ತಾರೆ: "ಪೈಗಂಬರರ(ಸ) ಮಹತ್ತರ ಧಾರ್ಮಿಕ ಗುಣಗಳು ನೂರಾರು ಸಂದರ್ಭಗಳಲ್ಲಿ ಸ್ಪಷ್ಟವಾಗಿ ಪ್ರಕಟವಾಗಿವೆ. ಆ ಮಹಾಪುರುಷ ಪರೀಕ್ಷಿಸಲ್ಪಟ್ಟರು. ಅವರ ಸತ್ಯತೆ ಸೂರ್ಯನಂತೆ ಪ್ರಕಾಶಿಸಿತು. ನೈತಿಕ ಗುಣಗಳಾದ ಸಹೃದಯತೆ, ಔದಾರ್ಯ, ದಾನಧರ್ಮ, ತ್ಯಾಗ, ವಿಜಯ, ಧೈರ್ಯ, ಇದ್ದುದರಲ್ಲೇ ತೃಪ್ತಿ ಮತ್ತು ಭೌತಿಕತೆಯಲ್ಲಿ ವಿರಕ್ತಿ ಪೈಗಂಬರರ ಅನುಗ್ರಹೀತ ವ್ಯಕ್ತಿತ್ವದಲ್ಲಿ ಒಂದೇ ರೀತಿಯಲ್ಲಿ ಪ್ರಕಾಶಿಸುತ್ತಿದ್ದವು. ಅಲ್ಲಾಹನು ಪೈಗಂಬರರಿಗೆ(ಸ) ಅಸಂಖ್ಯಾತ ಖಜಾನೆಗಳನ್ನು ನೀಡಿದನು. ಅವನ್ನೆಲ್ಲ ಅವರು ಅಲ್ಲಾಹನ ಮಾರ್ಗದಲ್ಲಿ ವ್ಯಯಿಸಿದರು. ತನಗೋಸ್ಕರ ಏನನ್ನೂ ತೆಗೆದಿಡಲಿಲ್ಲ. ಒಂದು ಕಟ್ಟಡವನ್ನಾಗಲಿ ಅರಮನೆಯನ್ನಾಗಲಿ ನಿರ್ಮಿಸಲಿಲ್ಲ. ಚಿಕ್ಕ ಒಂದು ಗುಡಿಸಲಿನಲ್ಲಿ ಕೊನೆಯ ಕಾಲದವರೆಗೆ ವಾಸಮಾಡಿದರು. ಮಲಗಲಿಕ್ಕೆ ನೆಲದ ಮೇಲೆ ಚಾದರ ಹಾಸಿದರು. ತಿನ್ನಲು ಬಾರ್ಲಿಯ ರೊಟ್ಟಿ; ಇಲ್ಲವಾದರೆ ಖಾಲಿ ಹೊಟ್ಟೆ. ಪೈಗಂಬರರಿಗೆ ಭೌತಿಕ ಸಂಪತ್ತು ಧಾರಾಳವಾಗಿ ನೀಡಲ್ಪಟ್ಟಿತ್ತು. ಆದರೆ ತನ್ನ ಕೈಗಳಿಗೆ ಕೆಸರು ಮೆತ್ತಲು ಪೈಗಂಬರರು(ಸ) ಎಡೆಗೊಡಲಿಲ್ಲ. ಲೋಕದ ಯಾವ ವಸ್ತುವಿಗೂ ತನ್ನ ಮರಣದ ತನಕ ಏನೂ ಬೆಲೆಗೊಡಲಿಲ್ಲ. ಜಗತ್ತಿನಲ್ಲಿ ಹಿಂದೆಂದೂ ಪ್ರಕಟಗೊಂಡಿಲ್ಲದ ಹಾಗೂ ಇನ್ನು ಮುಂದೆ ಪ್ರಕಟಗೊಳ್ಳದಂಥ ಉದಾತ್ತ ಧಾರ್ಮಿಕ ಗುಣಗಳ ಮಾದರಿಗಳನ್ನು ಅವರು ಲೋಕದಲ್ಲಿ ಸ್ಥಾಪಿಸಿದರು."

**(18-3-2005ರ ಜುಮುಅ ಖುತ್ಬದ ಸಂಕ್ಷಿಪ್ತ ಭಾಷಾಂತರ)**

# ಪವಿತ್ರ ಖುರ್‌ಆನ್ ಸರ್ವ ಮಾನವರಿಗೋಸ್ಕರ

❖ ಮುಹಮ್ಮದ್ ಕೋಯ

'ಖುರ್‌ಆನ್' ಎಂಬುದು ಅತಿ ಮನೋಹರವಾದೊಂದು ಹೆಸರಾಗಿದೆ. ಆ ನಾಮ ಕೋಟಾನುಕೋಟಿ ಮನುಷ್ಯರ ನಾಲಗೆಯಲ್ಲೂ ಮನಸ್ಸಿನಲ್ಲೂ ಆದರದಿಂದ ನೆಲೆಸುತ್ತದೆ. ಆ ಹೆಸರನ್ನು ಹೊಂದಿರುವ ಗ್ರಂಥವನ್ನು ಅವರು ಮನಸ್ಸಿನಲ್ಲೂ ಹೃದಯದಲ್ಲೂ ಭದ್ರಪಡಿಸಿದ್ದಾರೆ. ಕೋಟಾನುಕೋಟಿ ಜನರು ಅದನ್ನು ನಿತ್ಯ ಪಾರಾಯಣ ಮಾಡುತ್ತಾರೆ.

'ಖುರ್‌ಆನ್' ಎಂಬುದು ಅಲ್ಲಾಹನೇ ನೀಡಿದ ನಾಮವಾಗಿದೆ. ತನ್ನ ದಾಸನೂ ದೂತನೂ ಆದ ಮುಹಮ್ಮದ್ ಪೈಗಂಬರರೊಡನೆ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಅಲ್ಲಾಹನು ಹೇಳಿದ್ದು "ಇಖ್‌ರಅ್" - "ನೀನು ಓದು" ಎಂದಾಗಿದೆ. 'ಖರಅ್' ಎಂಬ ಧಾತುವಿನಿಂದ 'ಇಖ್‌ರಅ್' ರೂಪಗೊಂಡಿದೆ. 'ಖುರ್‌ಆನ್' ಎಂಬ ಪದದ ವ್ಯುತ್ಪತ್ತಿ ಸಹ ಇದೇ ಧಾತುವಿನಿಂದಾಗಿದೆ. ಓದಲಿಕ್ಕಾಗಿ, ಸದಾ ಪಾರಾಯಣ ಮಾಡಲಿಕ್ಕಾಗಿ ಗ್ರಂಥರೂಪದಲ್ಲಿ ಒಟ್ಟು ಸೇರಿಸಿದ ಪರಿಶುದ್ಧ ವಚನಗಳ ಸಂಗ್ರಹವಾಗಿದೆ ಖುರ್‌ಆನ್.

'ಖುರ್‌ಆನ್' ಎಂಬ ಪದದ ಅರ್ಥವನ್ನು ಈ ರೀತಿಯಲ್ಲಿ ವಿಶದೀಕರಿಸಬಹುದು:

1. ಖುರ್‌ಆನ್ ಸಕಲ ಮಾನವರಿಗೆ ಸರ್ವ ಕಾಲಗಳಲ್ಲೂ ಸಮಯಗಳಲ್ಲೂ ಪಾರಾಯಣ ಮಾಡುವ ಉದ್ದೇಶದಿಂದ ಸಿದ್ಧಪಡಿಸಲಾದ ಗ್ರಂಥವಾಗಿದೆ. "The Quran is widely read Book in the world" ಎಂದು ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾದಲ್ಲಿ (11th Edition) ಉಲ್ಲೇಖಿಸಲಾಗಿದೆ.

2. ಒಬ್ಬನು ಮತ್ತೊಬ್ಬನಿಗೆ - ಹಾಗೆ ಎಲ್ಲ ಮನುಷ್ಯರಿಗೂ ತಲುಪಿಸುವ ಉದ್ದೇಶದಿಂದ ಸಿದ್ಧಗೊಳಿಸಲ್ಪಟ್ಟ ಸಂದೇಶ ಖುರ್‌ಆನ್ ಆಗಿದೆ. ಅದು ಸಕಲ ಮಾನವರಿಗೋಸ್ಕರವಿರುವ ಗ್ರಂಥವಾಗಿದೆ. ಅದು ಇಂಥ ಜಾತಿಗೆ, ಇಂಥ ದೇಶಕ್ಕೆ, ಇಂಥ ಭಾಷೆಗೆ ಮಾತ್ರ ಎಂದು ಹೇಳಲಾಗದು. ಅದು ಎಲ್ಲರಿಗೂ ಎಲ್ಲ ಕಾಲಕ್ಕೂ ಎಲ್ಲ ಭಾಷೆ ಮಾತನಾಡುವವರಿಗೋಸ್ಕರ ಇದೆ. 'ಅರಬಿ' ಭಾಷೆಯಲ್ಲಿ ಅದು ಬರೆಯಲ್ಪಟ್ಟಿದೆ. ಅದೇ ಭಾಷೆಯಲ್ಲಿ ಅದು ಲೋಕದಲ್ಲೆಲ್ಲ ಪ್ರಚರಿಸಲ್ಪಡುತ್ತಿದೆ. ಅರಬಿಯನಿಗೂ ಅರಬಿಯೇತರನಿಗೂ ಒಂದೇ ಗ್ರಂಥ. ಮೂಲ ಭಾಷೆಯಲ್ಲೇ ಅದು ಪಾರಾಯಣ ಮಾಡಲ್ಪಡುತ್ತದೆ.

3. ಖುರ್‌ಆನ್ ಮನುಷ್ಯನಿಗೆ ಮನೋಜ್ಞವಾದ ಒಂದು ಸಂಚಾರ ಪಥವನ್ನು ತೋರಿಸಿ ಕೊಡುವ ಗ್ರಂಥವಾಗಿದೆ. ಸುವಾರ್ತೆಗಳನ್ನು ನೀಡಿ, ದೃಷ್ಟಾಂತಗಳನ್ನು ತೋರಿಸಿ, ಕಥೆಗಳನ್ನು ಹೇಳಿ, ಮುನ್ನೆಚ್ಚರಿಕೆಗಳನ್ನು ಕೊಟ್ಟು, ನಿಷಿದ್ಧಗಳನ್ನು ವಿವರಿಸಿ, ಅಭಯವನ್ನು ನೀಡಿ ಅದು ಮನುಷ್ಯರನ್ನು ಸತ್ಪಥದಲ್ಲಿ ಕೊಂಡೊಯ್ಯುತ್ತದೆ. ಮನುಷ್ಯನು ತನ್ನ ಸೃಷ್ಟಿಕರ್ತನನ್ನು ಸಂಧಿಸುವ ಸಂಚಾರ ಪಥವನ್ನು ಖುರ್‌ಆನ್ ಸುಗಮಗೊಳಿಸುತ್ತದೆ.

4. ಖುರ್‌ಆನ್ ಎಲ್ಲ ಸತ್ಯಗಳು ಒಳಗೊಂಡಿರುವ ಗ್ರಂಥವಾಗಿದೆ. ಹಿಂದಿನ ಕಾಲದ ಗ್ರಂಥಗಳ ಸತ್ಯವನ್ನು ಅದು ಸಾಕ್ಷೀಕರಿಸುತ್ತದೆ. ಪೂರ್ವಕಾಲದ ಪ್ರವಾದಿಗಳ ದೌತ್ಯವನ್ನು ಅದು ಅಂಗೀಕರಿಸುತ್ತದೆ. ಅದರಲ್ಲಿ ಶಾಶ್ವತವಾದ ಆಜ್ಞೆಗಳಿವೆ.

5. ದೃಷ್ಟಿಗೋಚರವಾದ ಸತ್ಯಗಳೂ ದೃಷ್ಟಾಂತಗಳೂ ಮಾತ್ರವಲ್ಲ, ಅದರಲ್ಲಿ ಅತಿ ಗಹನವಾದ ತತ್ವಗಳೂ ಕಾಲಾಂತರದ ನಂತರ ಈಡೇರುವ ವಾಸ್ತವಾಂಶಗಳೂ ಶೇಖರಿಸಲ್ಪಟ್ಟಿವೆ. ಆದರೆ ಅವುಗಳನ್ನು ಕಾಣುವ ಶಕ್ತಿ ಇರಬೇಕಾಗಿದೆ. ಅವುಗಳನ್ನು ಸ್ವೀಕರಿಸುವ ಸಾಮರ್ಥ್ಯವಿರಬೇಕು. ಖುರ್‌ಆನಿನೊಂದಿಗೆ ನಿಲ್ಲುವ ಪರಿಶುದ್ಧತೆಯೂ ಬೇಕು. ಅಲ್ಲಾಹನು ಹೇಳುತ್ತಾನೆ: 'ಯಾವುದೇ ವಸ್ತುವಿನ ಭಂಡಾರ ನಮ್ಮ ಬಳಿ ಇಲ್ಲದಿರುವುದಿಲ್ಲ. ಆದರೆ ನಿರ್ದಿಷ್ಟ ಪ್ರಮಾಣದಲ್ಲಿ ಹೊರತು ನಾವು ಅದನ್ನು ಒದಗಿಸುವುದಿಲ್ಲ." (ಪವಿತ್ರ ಖುರ್‌ಆನ್15:22)

---

(8 ನೇ ಪುಟದಿಂದ) **ಧಾರ್ಮಿಕ ಸಹಿಷ್ಣುತೆ**

ಕ್ರೈಸ್ತ ಧರ್ಮಕ್ಕೂ ಹಾಗೂ ವಿಶಿಷ್ಟವಾಗಿ ಧರ್ಮ ಎಂಬ ವ್ಯವಸ್ಥೆಗೂ ಬಹಳ ಕೆಟ್ಟ ಹೆಸರು ನೀಡಿದೆ.

## ಶಾಂತಿಯಿಂದ ಧಾರ್ಮಿಕ ಗುರಿ

ಆಯಾ ದೇಶದ ಜನರಿಗೆ ಇಸ್ಲಾಮ್ ಧರ್ಮವನ್ನು ಶಾಂತಿಯುತವಾಗಿ ತಲಪಿಸುವ ಗುರಿಯನ್ನು ಈಡೇರಿಸಲು ನಾವು ನಮ್ಮ ಪ್ರಯತ್ನಗಳನ್ನು ಮುಂದುವರಿಸುವೆವು. ಇತರ ಧಾರ್ಮಿಕ ಸಂಸ್ಥೆಗಳು ಸಹ ಶಾಂತಿಯುತವಾದ ಮಾರ್ಗವನ್ನು ಅವಲಂಬಿಸಬೇಕೆಂದು ನಾವು ಆಗ್ರಹಪಡಿಸುತ್ತೇವೆ. ಅವರು ತಮ್ಮ ಧರ್ಮವನ್ನು ಪ್ರಚಾರ ಮಾಡಲು ಬಯಸುವುದಾದರೆ ಅವರು ಬೈಯ್ಯುವುದನ್ನು ಬಿಡಬೇಕು. ಇತರ ಧರ್ಮದವರ ಪವಿತ್ರ ಗ್ರಂಥಗಳನ್ನು ನಿಂದಿಸುವುದನ್ನು ಮತ್ತು ಅನ್ಯಧರ್ಮದ ಅನುಯಾಯಿಗಳ ಬುದ್ಧಿ ಸಾಮರ್ಥ್ಯವನ್ನು ಪ್ರಶ್ನಿಸುವುದನ್ನು ಬಿಡಬೇಕು.

ಧರ್ಮವು ಜನರನ್ನು ಜೋಡಿಸಬೇಕು; ಅವರನ್ನು ವಿಭಜಿಸಬಾರದು. ಧರ್ಮವು ಶಾಂತಿಯನ್ನು ಪ್ರೋತ್ಸಾಹಿಸಬೇಕು; ಹಿಂಸೆಯನ್ನಲ್ಲ. ಧರ್ಮವು ಪ್ರೀತಿ ಮತ್ತು ಸಮಾಧಾನವನ್ನು ನಮ್ಮ ಜೀವಿತಕ್ಕೆ ತರಬೇಕು; ನೋವನ್ನೂ ಯಾತನೆಯನ್ನೂ ಅಲ್ಲ.

ಕೊನೆಯದಾಗಿ ನಾನು ಹೇಳಬಯಸುವುದೇನೆಂದರೆ ಎಲ್ಲಾ ಧರ್ಮಗಳಲ್ಲಿ ಮತಭ್ರಾಂತರು ಇರುವರಾದರೂ ಪ್ರತಿಯೊಂದು ಧರ್ಮದ ಶುದ್ಧ ಮತ್ತು ನಿಷ್ಕಳಂಕ ತತ್ವಗಳನ್ನು ಪಾಲಿಸುವವರೂ ಇದ್ದಾರೆ.

ನಾನು ಅಂತಹ ವಿಶ್ವಾಸಿಗಳಾದ ಪುರುಷರಿಗೆ ಮತ್ತು ಮಹಿಳೆಯರಿಗೆ ಕರೆ ನೀಡುತ್ತೇನೆ. ಅವರು ಉಚ್ಚಧ್ವನಿಯಲ್ಲಿ ಪ್ರತಿಭಟಿಸಬೇಕು. ಮತ ಭ್ರಾಂತರು ಮತ್ತು ಉಗ್ರವಾದಿಗಳು ತಮ್ಮಿಷ್ಟದಂತೆ ವರ್ತಿಸಿ ದೇವನ ಪ್ರವಾದಿಗಳು ಮಾನವರಿಗಾಗಿ ಕಷ್ಟಪಟ್ಟು ಸ್ಥಾಪಿಸಿದ ಶಾಂತಿಯನ್ನು ನಾಶ ಮಾಡಲು ಬಿಡಬಾರದು.

ಈ ರೀತಿ ವಿವೇಕದ ಧ್ವನಿಯು ಮೇಲುಗೈಯಾಗುವುದು ಹಾಗೂ ನಾವು ನಮ್ಮ ಧರ್ಮವು ಯಾವುದೇ ಆದರೂ ಪರಸ್ಪರ ಗೌರವಿಸಿ ಒಟ್ಟಾಗಿ ಜೀವಿಸುವೆವು. ಇದು ರಾಷ್ಟ್ರೀಯ ಭಾವೈಕ್ಯತೆಗೆ ಮತ್ತು ಅಭಿವೃದ್ಧಿಗೆ ಆವಶ್ಯಕವಾಗಿದೆ.

(ಅನುವಾದ: ಮಂ. ಉ.)

## ಖುರ್‌ಆನ್ ಅಲ್ಲಾಹನ ವಚನಗಳು

ಖುರ್‌ಆನ್ ಅಲ್ಲಾಹನ ಪರಿಶುದ್ಧ ವಚನಗಳಾಗಿವೆ. ಈ ವಚನಗಳು ಸದಾ ನೆಲೆನಿಲ್ಲುವಂಥವುಗಳಾಗಿವೆ. ಅವು ಖಚಿತ ಹಾಗೂ ನಿರ್ಣಾಯಕಗಳಾಗಿವೆ. ಅಲ್ಲಾಹನ ಈ ಪರಿಶುದ್ಧ ವಚನಗಳನ್ನು ಅಲ್ಲಾಹನೇ ನಿರ್ದೇಶಿಸಿದ ಪ್ರಕಾರ ಹಝ್ರತ್ ಮುಹಮ್ಮದ್ ಪೈಗಂಬರರು[ಸ] ಕ್ರಮಾನುಸಾರ ಕ್ರೋಢೀಕರಿಸಿದ ಗ್ರಂಥ ಖುರ್‌ಆನ್ ಆಗಿದೆ. ಖುರ್‌ಆನನ್ನು ಓದಲಿಕ್ಕೂ ಬರೆಯಲಿಕ್ಕೂ ಕಂಠಪಾಠ ಮಾಡಲಿಕ್ಕೂ ವ್ಯಾಖ್ಯಾನಿಸಲಿಕ್ಕೂ ಜನರಿಗೆ ಸ್ವಾತಂತ್ರ್ಯವಿದೆ. ಆದರೆ ಅದರಲ್ಲಿ ವ್ಯತ್ಯಾಸ ಮಾಡಲಿಕ್ಕಾಗಲಿ, ಏನನ್ನಾದರೂ ಕೂಡಿಸಲಿಕ್ಕಾಗಲಿ, ಕಳೆಯಲಿಕ್ಕಾಗಲಿ ಸ್ವಾತಂತ್ರ್ಯವಿಲ್ಲ. ಹಾಗೆ ಮಾಡಲಿಕ್ಕೆ ಸಾಧ್ಯವೂ ಇಲ್ಲ. ಈ ಸಂರಕ್ಷಣೆಯಲ್ಲಿ ಖುರ್‌ಆನಿನ ದಿವ್ಯತ್ವವಿದೆ. ಖುರ್‌ಆನ್ ಯಾವ ರೀತಿಯಲ್ಲಿ ಅವತೀರ್ಣವಾಯಿತೋ ಅದೇ ರೀತಿಯಲ್ಲಿ ಏನೂ ವ್ಯತ್ಯಾಸವಿಲ್ಲದೆ ಅದು ಸಂರಕ್ಷಿಸಲ್ಪಡುತ್ತಿದೆ ಎಂಬ ವಿಚಾರದಲ್ಲಿ ಸಂಶಯವಿಲ್ಲ. ಅದು ವಿಮರ್ಶಕರು ಕೂಡ ವಿಸ್ಮಯ ಚಕಿತರಾಗಿ ಸಮ್ಮತಿಸುವ ಸತ್ಯವಾಗಿದೆ. 1400 ವರ್ಷಗಳ ಮುಂಚೆ ಪೈಗಂಬರರಿಂದ ಕ್ರೋಢೀಕರಿಸಲ್ಪಟ್ಟ ಅದೇ ಗ್ರಂಥ ಲೋಕಾದ್ಯಂತ ಇಂದು ಸಹ ಪಾರಾಯಣ ಮಾಡಲ್ಪಡುತ್ತಿದೆ. ಹೀಗಿರುವ ಒಂದು ಸಂರಕ್ಷಣೆ ಬೇರೊಂದು ಗ್ರಂಥಕ್ಕೆ ಇರುವುದಾಗಿ ಹೇಳಲು ಸಾಧ್ಯವಿಲ್ಲ. ಖುರ್‌ಆನಿನ ಕೋಟಾನುಕೋಟಿ ಪ್ರತಿಗಳು ಜಗತ್ತಿನೆಲ್ಲೆಡೆ ಇವೆ. ಅವೆಲ್ಲ ಒಂದೇ ರೀತಿಯಲ್ಲಾಗಿದೆ. ಸೂರಃ ಫಾತಿಹ ಆದಿಯಲ್ಲಿ; ಸೂರಃ ಅನ್ನಾಸ್ ಅಂತ್ಯದಲ್ಲಿ. ಯಾವುದರಲ್ಲೂ ವ್ಯತ್ಯಾಸವಿಲ್ಲ. ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತಾನೆ: "ದಿಟವಾಗಿಯೂ ನಾವೇ ಈ ಉಪದೇಶ ಗ್ರಂಥವನ್ನು ಅವತೀರ್ಣಗೊಳಿಸಿದ್ದು. ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು." (15:10)

## ಖುರ್‌ಆನ್ ಎಲ್ಲ ಮನುಷ್ಯರಿಗೆ

ದೇವ ವಚನವಾದ ಪವಿತ್ರ ಖುರ್‌ಆನ್ ಜಿಬ್ರೀಲ್ ಎಂಬ ದೇವದೂತರ ಮುಖಾಂತರ ಸತ್ಯಸಂಧನೂ ಲೋಕಾನುಗ್ರಹಿಯೂ ಆದ ಮುಹಮ್ಮದ್ ಪೈಗಂಬರರಿಗೆ[ಸ] ಅವತೀರ್ಣವಾಯಿತು. ಅದು ಸಕಲ ಮಾನವರಿಗೋಸ್ಕರ ಅವತೀರ್ಣಗೊಂಡ ದಿವ್ಯ ಸಂದೇಶವೆಂದು ಅಲ್ಲಾಹನು ಹೇಳುತ್ತಾನೆ. ಈ ಮಹತ್ತಾದ ಖುರ್‌ಆನ್ ದುರ್ಬಲನಾದ ಮನುಷ್ಯನ ಕೈ ಹಿಡಿಯುತ್ತದೆ. ಅವನನ್ನು ಪ್ರೀತಿಯಿಂದ, ಸಮತ್ವದಿಂದ, ಸಾಹೋದರ್ಯದಿಂದ ಸತ್ಯಸಂಧವಾದ ಋಜು ಮಾರ್ಗದಲ್ಲಿ ಮುನ್ನಡೆಸಿ ಅನಶ್ವರವಾದ ಪರಲೋಕ ಜೀವನದ ಹೊಸಿಲು ತನಕ ತಲಪಿಸುತ್ತದೆ. ಇದು ಮನುಷ್ಯರಿಗೋಸ್ಕರ ಸಿದ್ಧಪಡಿಸಲಾದ ಕಾರುಣ್ಯವಾಗಿದೆ.

ಖುರ್‌ಆನ್ ಒಂದು ಪ್ರಕಾಶವಾಗಿದೆ. ಈ ಪ್ರಕಾಶ ಅಲ್ಲಾಹನು ಮನುಷ್ಯರಿಗೆ ನೀಡಿದ ಅತಿ ದೊಡ್ಡ ಅನುಗ್ರಹವಾಗಿದೆ. "ನೂರುನ್ ಅಲಾ ನೂರ್"- ಪ್ರಕಾಶದ ಮೇಲೆ ಪ್ರಕಾಶ. ಪವಿತ್ರ ಖುರ್‌ಆನ್ ಎಂಬ ಪ್ರಕಾಶದ ಮೇಲೆ 'ಅಲ್ಲಾಹು' ಎಂಬ ಸರ್ವಾಧಿನಾಥನ ಪ್ರಕಾಶ. ಇಲ್ಲಿ ಉದ್ಭವಿಸುವ ಪ್ರಶ್ನೆ ಮನುಷ್ಯನಲ್ಲಿ ಪ್ರಕಾಶವಿದೆಯೇ ಎಂದಾಗಿದೆ. ಒಂದು ಮಿಂಚುಹುಳದಷ್ಟಾದರೂ ಪ್ರಕಾಶವಿದ್ದರೆ ಆ ಪ್ರಕಾಶದ ಮೇಲೆ ಈ ಮಹಾ ಪ್ರಕಾಶ ಬೀಳುವುದು. ಈ ದಿವ್ಯ ಪ್ರಕಾಶ ಆ ಪ್ರಕಾಶವನ್ನು ಶೋಭಿಸುವಂತೆ ಮಾಡುವುದು.

ಖುರ್‌ಆನನ್ನು ಅವತೀರ್ಣಗೊಳಿಸಿದ ಅಲ್ಲಾಹನು ಆಕಾಶ ಮತ್ತು ಭೂಮಿಯ ಪ್ರಕಾಶವಾಗಿದ್ದಾನೆ. ಖುರ್‌ಆನಿನ ಪ್ರಥಮ ಅಧ್ಯಾಯವಾದ ಸೂರಃ ಫಾತಿಹದಲ್ಲಿ ಅಲ್ಲಾಹನನ್ನು 'ರಬ್ಬುಲ್ ಆಲಮೀನ್' - ಸರ್ವಲೋಕಗಳ ಪರಿಪಾಲಕ ಎಂದು ಬಣ್ಣಿಸಲಾಗಿದೆ. ಅಂಥ ಅಲ್ಲಾಹನ ಪರಿಶುದ್ಧ ವಚನಗಳಾದ ಖುರ್‌ಆನ್ ಸರ್ವ ಮಾನವರಿಗೋಸ್ಕರವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. "ಓ ಜನರೇ, ನಿಮ್ಮ ಪ್ರಭುವನ್ನು ಆರಾಧಿಸಿರಿ" ಎಂದು ಖುರ್‌ಆನ್ ಬೋಧಿಸುತ್ತದೆ. ಇಲ್ಲಿ 'ಓ ಅರಬಿಯರೇ' ಎಂದು ಕರೆಯಲಿಲ್ಲ; ಭೂ ನಿವಾಸಿಗಳಾದ 'ಓ ಜನರೇ' ಎಂದಾಗಿದೆ. ಆ ಕಾಲದಲ್ಲಿದ್ದವರನ್ನು ಮಾತ್ರವಲ್ಲ, ಎಲ್ಲ ಕಾಲಗಳಲ್ಲಿರುವವರನ್ನು ಇಲ್ಲಿ ಉದ್ದೇಶಿಸಲಾಗಿದೆ.

ಖುರ್‌ಆನ್ ಪೂರ್ವ ಧರ್ಮಗ್ರಂಥಗಳನ್ನು ಅಂಗೀಕರಿಸುತ್ತದೆ ಎಂಬುದು ಸಹ ಅದರ ಮಹತ್ವವಾಗಿದೆ. ಪೂರ್ವ ಧರ್ಮ ಗ್ರಂಥಗಳನ್ನು ಮಾತ್ರವಲ್ಲ ಪೂರ್ವ ದೇವಸಂದೇಶವಾಹಕರನ್ನೂ ಅದು ಅಂಗೀಕರಿಸುತ್ತದೆ. ಬರೇ ಅಂಗೀಕಾರವಲ್ಲ. ಅದು ವಿಶ್ವಾಸದ ಒಂದು ಅಂಶವಾಗಿದೆ. ಮನುಷ್ಯಕುಲಕ್ಕೆ ಸತ್ಪಥ ದರ್ಶನ ನೀಡಲಿಕ್ಕಾಗಿ ದೇವನು ಅವರನ್ನು ನಿಯೋಜಿಸಿರುವನು ಎಂದು ನಂಬಲು ಖಂಡಿತವಾಗಿಯೂ ಒಬ್ಬ ವಿಶ್ವಾಸಿ ಸಿದ್ಧನಿರಬೇಕಾಗಿದೆ. ಆಗ ವಿಶ್ವಾಸದ ಪೂರ್ಣತೆಯನ್ನು ಅವನು ಪಡೆಯುತ್ತಾನೆ. ಸಮ್ಮೋಹಕವಾದ ಸಹವರ್ತಿತ್ವದ ಪಾಠವನ್ನು ಇಲ್ಲಿ ಖುರ್‌ಆನ್ ನೀಡುತ್ತದೆ.

ಪೂರ್ವಕಾಲದಲ್ಲಿ ಅವತೀರ್ಣವಾದ ಧರ್ಮಗ್ರಂಥಗಳು ಬೇರೆ ಬೇರೆ ಕಾಲ-ದೇಶ-ವರ್ಗಗಳಿಗೋಸ್ಕರವಾಗಿದ್ದವು. ಭಾರತೀಯರಿಗೆ ಬೇರೆ ಗ್ರಂಥ; ಬೇರೆ ದೇವ ಸಂದೇಶವಾಹಕರು. ಚೀನಾದವರಿಗೆ ಬೇರೆ, ಇರಾನಿಗಳಿಗೆ ಬೇರೆ, ಇಸ್ರಾಯೇಲ್ಯರಿಗೆ ಬೇರೆ. ಈ ಒಂದು ರೀತಿ ಅಂದು ಅನಿವಾರ್ಯವಾಗಿತ್ತು. ಮನುಷ್ಯರು ಬೌದ್ಧಿಕವಾಗಿ ಬೆಳೆದಿರಲಿಲ್ಲ; ಪಕ್ವತೆಗಳಿಸಿರಲಿಲ್ಲ. ಅವರು ಬೇರೆ ಬೇರೆ ದೇಶಗಳಲ್ಲಿ, ಬೇರೆ ಬೇರೆ ರೀತಿಗಳಲ್ಲಿ ಪರಸ್ಪರ ತಿಳಿಯಲ್ಪಡದೆ ಜೀವಿಸುತ್ತಿದ್ದರು. ಅವರಿಗೆ ಅನ್ಯೋನ್ಯ ವಿಚಾರ ವಿನಿಮಯ ದುಸ್ಸಾಧ್ಯವಾಗಿತ್ತು. ಯಾತ್ರಾಸೌಕರ್ಯ ನಾಮಮಾತ್ರವಾಗಿತ್ತು. ಸೂರ್ಯನು ಈ ಕಡೆ ಉದಯಿಸುವಾಗ ಸೂರ್ಯನು ಉದಯಿಸುವ 'ಆ ಕಡೆ' ಉಂಟೋ ಎಂದು ತಿಳಿಯಲಾಗದ ಕಾಲ. ಲೋಕವು ಅಂದು ಒಂದಾಗಿರಲಿಲ್ಲ. ಆದ್ದರಿಂದ ಪೂರ್ವ ಧರ್ಮಗ್ರಂಥಗಳ ವಿಚಾರಗಳಿಗೂ ಜ್ಞಾನಗಳಿಗೂ ಜನರನ್ನು ಒಂದುಗೂಡಿಸುವ ಸಾಮರ್ಥ್ಯಗಳಿಗೂ ಪರಿಮಿತಿಗಳಿದ್ದವು. ಹೊಣೆಗಾರಿಕೆಗೂ ಪರಿಮಿತಿಗಳಿದ್ದವು. ಅವುಗಳಿಗೆ ಸಣ್ಣ ಕ್ಯಾನ್ವಸ್‌ನ ಚಿತ್ರ ಬರೆದರೆ ಸಾಕಾಗುತ್ತಿತ್ತು. ಒಂದು ಪ್ರತ್ಯೇಕ ಕಾಲ, ಪ್ರತ್ಯೇಕ ದೇಶ, ಪ್ರತ್ಯೇಕ ಭಾಷೆ ಮಾತನಾಡುವವರು. ಆ ಚಿತ್ರ ಅವರಿಗೆ ಮಾತ್ರವಾಗಿತ್ತು; ಆ ಕಾಲದವರಿಗೆ. ಇತರರಿಗೆ ಬೇರೆ. ನಂತರದ ಕಾಲಘಟ್ಟದವರಿಗೆ ಮತ್ತೊಂದು. ಆದುದರಿಂದ ಕೊನೆಗೆ ಬರಲಿಕ್ಕಿರುವ ಬೇರೊಂದು ಮಹಾಧರ್ಮಗ್ರಂಥದ ಬಗ್ಗೆ - ಒಂದು ಪರಿಪೂರ್ಣವಾದ ಧರ್ಮಗ್ರಂಥದ ಬಗ್ಗೆ ಅವುಗಳೆಲ್ಲ ಭವಿಷ್ಯ ನುಡಿದಿದ್ದವು. ಒಬ್ಬ ಮಹಾ ಜಗದ್ಗುರುವಿನ ಕುರಿತು ಸಹ ಅವರು ಭವಿಷ್ಯ ಹೇಳಿದರು. ಆ ಪ್ರವಾದನೆ ಇಂದು ಈಡೇರಿದೆ. ಇಂದು ಲೋಕವು ಒಂದಾಗಿದೆ. ಭೂಮಿಯಲ್ಲಿ ಸೂರ್ಯನು ಅಸ್ತಮಿಸುವುದಿಲ್ಲವೆಂದು ಇಂದು ಮನುಷ್ಯನು ಮನಗಂಡಿದ್ದಾನೆ. ತಾನು ನಿದ್ರಿಸುತ್ತಿರುವಾಗ ಭೂಮಿಯ ಇನ್ನೊಂದು ಭಾಗದಲ್ಲಿ ಎಚ್ಚರದಿಂದಿರುವ ಇನ್ನೊಬ್ಬನಿದ್ದಾನೆಂದು ಅವನು ತಿಳಿದುಕೊಂಡಿದ್ದಾನೆ. ಅದರೊಂದಿಗೆ ಮನುಷ್ಯರ ಪರಸ್ಪರ ದೂರ ಕಡಿಮೆಯಾಯಿತು. ಅವರೊಳಗೆ ವಿಚಾರ

# ಇಮಾಂ ಮಹ್‌ದಿಯ ಕುರುಹುಗಳು

❖ ಮೌಲವಿ ಮುಹಮ್ಮದ್ ಉಮರ್ H.A.

1400 ವರ್ಷಗಳ ಮೊದಲು ಹಝ್ರತ್ ಮುಹಮ್ಮದ್ ಪೈಗಂಬರರು (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಕೊನೆಗಾಲದಲ್ಲಿ ಅವತರಿಸುವ ಇಮಾಂ ಮಹ್‌ದಿಯ ಕುರಿತು ವ್ಯಕ್ತವಾಗಿ ವಿವರಿಸಿರುವರು. ವಾಗ್ದಾನ ಮಾಡಲ್ಪಟ್ಟ ಆ ಮಹಾ ಸುಧಾರಕ ಅವತರಿಸುವಾಗ ಆಕಾಶ ಭೂಮಿಗಳಲ್ಲಿ ಉಂಟಾಗುವ ಮಹತ್ತರ ಕುರುಹುಗಳ ಕುರಿತೂ ಅಂದು ಲೋಕದ ರಾಜಕೀಯ, ಸಾಂಸ್ಕೃತಿಕ, ಸಾಮುದಾಯಿಕ ರಂಗಗಳಲ್ಲಿ ಉಂಟಾಗುವ ಘಟನೆಗಳ ಕುರಿತೂ ಪೈಗಂಬರರು ಭವಿಷ್ಯ ನುಡಿದಿರುವರು.

ಆಧುನಿಕ ಕಾಲದಲ್ಲಿ ಆಧ್ಯಾತ್ಮಿಕ ಕ್ರಾಂತಿಯ ಇತಿಹಾಸವನ್ನು ವಿರಚಿಸಿ ವಾಗ್ದತ್ತ ಮಸೀಹಾಗಿ ಅವತೀರ್ಣರಾದ ಹಝ್ರತ್ ಅಹ್ಮದ್ (ಅಲೈಹಿಸ್ಸಲಾಂ) ಅವರಲ್ಲಿ ಈ ಎಲ್ಲಾ ಕುರುಹುಗಳೂ ಭವಿಷ್ಯ ನುಡಿಗಳೂ ನೆರವೇರಿವೆ. ಪೈಗಂಬರರ(ಸ) ಸತ್ಯಸಾಕ್ಷ್ಯದ ಮನೋಜ್ಞ ದೃಷ್ಟಾಂತ ಸಹ ಆಗಿರುವ ಈ ಭವಿಷ್ಯೋಕ್ತಿಗಳೂ ಕುರುಹುಗಳೂ ಹಝ್ರತ್ ಅಹ್ಮದ್‌ರಲ್ಲಿ(ಅ) ನೆರವೇರಿದ್ದು ಹೇಗೆಂದು ಪರಿಶೀಲಿಸೋಣ.

### 1. ಹೆಸರು

ಮಹ್‌ದಿಯ ಹೆಸರು ಅಹ್ಮದ್, ಅಬ್ದುಲ್ಲಾಹ್, ಮಹ್‌ದಿ ಎಂದಾಗಿರುವುದೆಂದು ಪೈಗಂಬರ್(ಸ) ನುಡಿದದ್ದು ನಾನು ಕೇಳಿರುವೆನೆಂದು ಹುದೈಫ ವರದಿ ಮಾಡಿದ್ದಾರೆ. (ಬಿಹಾರುಲ್ ಅನ್ವಾರ್, ಸಂಪುಟ 13, ಪುಟ 174).

### 2. ಕುಟುಂಬ

ಸತ್ಯ ವಿಶ್ವಾಸ ಸುರಯ್ಯಾ (ಕಾರ್ತಿಕ) ನಕ್ಷತ್ರದವರೆಗೆ ಮೇಲಕ್ಕೆತ್ತಲ್ಪಡುವ ಕಾಲ ಬಂದೊದಗಿದಾಗ ಫಾರ್ಸಿ ವಂಶದ ಕೆಲವರು ಅಥವಾ ಓರ್ವ ಅದನ್ನು ಭೂಮಿಗೆ ಮರಳಿ ತರುವರು. (ಬುಖಾರಿ, ಸಂಪುಟ 3, ಪುಟ 131).

### 3. ರಾಜ್ಯ

ಅಹ್ಮದ್ ಎಂಬ ಹೆಸರಿನ ಮಹ್‌ದಿಯ ಸಂಗಡ ಒಂದು ಜಮಾಅತು ಇಂಡಿಯಾದಲ್ಲಿ ಜಿಹಾದ್ (ಮತ ಪ್ರಚಾರ) ನಡೆಸುವುದು. (ಅನ್ನಜ್ಮುಸ್ಸಾಖಿಬ್, ಸಂಪುಟ 2, ಪುಟ 41-42).

### 4. ದೇಶ

'ಕದಿಆ' ಎಂಬ ಹೆಸರಿನಿಂದ ಕರೆಯಲ್ಪಡುವ ಸ್ಥಳದಲ್ಲಿ ಇಮಾಂ ಮಹ್‌ದಿ ಪ್ರತ್ಯಕ್ಷಗೊಳ್ಳುವರು. (ಜವಾಹಿರುಲ್ ಅಸ್ರಾರ್, ಬಿಹಾರುಲ್ ಅನ್ವಾರ್, ಸಂಪುಟ13, ಪುಟ19)

### 5. ಕಾಲ

ಸಾವಿರದ ಇನ್ನೂರ ನಲ್ವತ್ತು (ಹಿಜ್‌ರೀ) ವರ್ಷಗಳ ನಂತರ ಅಲ್ಲಾಹು ಇಮಾಂ ಮಹ್‌ದಿಯನ್ನು ನಿಯೋಜಿಸುವನು. (ಅನ್ನಜ್ಮುಸ್ಸಾಖಿಬ್, ಸಂಪುಟ 2, ಪುಟ 209).

### 6. ಜಮಾಅತಿನ ಹೆಸರು

ಅಂತ್ಯಕಾಲದಲ್ಲಿ ತನ್ನ ಸಮುದಾಯ 73 ಪಂಗಡಗಳಾಗಿ ವಿಂಗಡಿಸಲ್ಪಡುವುದೆಂದೂ ಅವುಗಳ ಪೈಕಿ 72 ಪಂಗಡಗಳು ನರಕವಾಸಿಗಳಾಗುವುವೆಂದೂ ಒಂದು ಪಂಗಡ ಮಾತ್ರ ಮೋಕ್ಷಾರ್ಹವಾಗುವುದೆಂದೂ ಆ ಜಮಾಅತು ಓರ್ವ ಆಧ್ಯಾತ್ಮಿಕ ನೇತಾರನ (ಇಮಾಂ ಮಹ್‌ದಿಯ) ಕೈಕೆಳಗೆ ತನ್ನ ಮತ್ತು ತನ್ನ ಅನುಚರರ ಪ್ರವರ್ತನ ಪಥದಲ್ಲಿ ಚಲಿಸುವುದೆಂದೂ ಪೈಗಂಬರ್(ಸ) ನುಡಿದಿದ್ದಾರೆ. ಮಿಶ್ಕಾತಿನ ವ್ಯಾಖ್ಯಾನವಾದ ಮಿರ್ಖಾತ್‌ನಲ್ಲಿ ಆ ಜಮಾಅತಿನ ಹೆಸರು "ಅಹ್ಮದಿಯಾ ಜಮಾಅತ್" ಎಂದಾಗಿರುವುದೆಂದು ಬರೆಯಲಾಗಿದೆ. ಅದು ಹೀಗಿದೆ:

ಎಪ್ಪತ್ತ ಎರಡು ಪಂಗಡಗಳು ನರಕದಲ್ಲಿ ಬೀಳುವುವು.

---

(11 ನೇ ಪುಟದಿಂದ) **ಪವಿತ್ರ ಖುರ್‌ಆನ್ ಸರ್ವ ಮಾನವರಿಗೋಸ್ಕರ**

ವಿನಿಮಯ ಸಾಧ್ಯವಾಯಿತು; ಸುಲಭವೂ ಆಯಿತು. ಸಂಚಾರ ಸೌಕರ್ಯಗಳು ವೃದ್ಧಿಗೊಂಡವು. ಈಗ ಎಲ್ಲವೂ ಒಂದು ಕೂಗಳತೆಯ ದೂರದಲ್ಲಾಯಿತು. ಒಂದು ಶಬ್ದಕ್ಕೆ, ಒಂದು ವಚನಕ್ಕೆ ಲೋಕವನ್ನೆಲ್ಲ ಒಂದುಗೂಡಿಸುವಂತಾಯಿತು. ಅಂದರೆ, ಎಲ್ಲರಿಗೋಸ್ಕರ ಒಬ್ಬ ದೇವ ಸಂದೇಶವಾಹಕ ಸಾಕು; ಒಂದು ಧರ್ಮ ಗ್ರಂಥ ಸಾಕು; ಒಂದು ಜೀವನ ಸಂದೇಶ ಸಾಕು. ಇಲ್ಲಿ ಅರೇಬಿಯಾದಲ್ಲಿ ಆವಿರ್ಭವಿಸಿದ ಮುಹಮ್ಮದ್ ಪೈಗಂಬರ್(ಸ) ಎಂಬ ದೇವ ಸಂದೇಶವಾಹಕ ಸಾರ್ವಲೌಕಿಕ ಪ್ರವಾದಿಯಾಗುತ್ತಾರೆ. ಅವರಿಗೆ ದೇವದೂತ ಜಿಬ್ರೀಲ್ ಮುಖಾಂತರ ಲೋಕೈಕನಾಥನಾದ ಅಲ್ಲಾಹನು ಅವತೀರ್ಣಗೊಳಿಸಿದ ಪವಿತ್ರ ಖುರ್‌ಆನ್ ಸಾರ್ವತ್ರಿಕವಾಗುವುದು ಸಹ ಇಲ್ಲೇ ಆಗಿದೆ. ಇದು ಲೋಕ ಒಂದಾಗುವುದರೊಂದಿಗೆ ಧರ್ಮಗ್ರಂಥಗಳೂ ಒಂದಾಗುವ ದೃಶ್ಯವಾಗಿದೆ. ದೈವಿಕ ನಿರ್ದೇಶನಗಳು ಪೂರ್ಣಗೊಳ್ಳುವ ದೃಶ್ಯವನ್ನೂ ಮನೋಹರವಾಗಿ ಇಲ್ಲಿ ದರ್ಶಿಸಲು ಸಾಧ್ಯವಾಗುತ್ತದೆ.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರಾದ ಹಝ್ರತ್ ಅಹ್ಮದ್(ಅಲೈಹಿಸ್ಸಲಾಂ) ಅವರು ಎಷ್ಟು ಹೃದಯಸ್ಪರ್ಶಿಯಾಗಿ ಹೇಳಿದರು: "ಈ ಮಹದ್ಗ್ರಂಥವನ್ನು ಸದಾ ಚುಂಬಿಸುತ್ತಾ ಇರಬೇಕೆಂಬ ಆಶೆ ನನ್ನ ಮನಸ್ಸಿನಲ್ಲಿದೆ. ಇದು ನನ್ನ 'ಕಅ್‌ಬ' ಆಗಿದೆ. ಇದರ ಸುತ್ತಲೂ ಪ್ರದಕ್ಷಿಣೆ ಮಾಡಲು ನಾನು ಬಯಸುತ್ತೇನೆ."

ಹೌದು, ಪವಿತ್ರ ಖುರ್‌ಆನ್ ಕಅ್‌ಬ ಆಗಿದೆ. ಅದರ ಅನುಗ್ರಹಗಳು ಅನಂತ. ಅದನ್ನು ಹೇಳಲು ಸಾವಿರ ನಾಲಿಗೆಗಳು ಸಾಕಾಗಲಿಕ್ಕಿಲ್ಲ.

ಮೋಕ್ಷಾರ್ಹವಾದ ಜಮಾಅತು ಮುಹಮ್ಮದೀ ಶರೀಅತಿನ ಪ್ರಕಾರ ನಡೆಯುವ ಪವಿತ್ರ ಅಹ್ಮದಿಯಾ ತರೀಖತಿನಲ್ಲಿ (ಜಮಾಅತಿನಲ್ಲಿ) ಸೇರಿದವರಾಗಿರುವರು. (ಮಿರ್ಖಾತ್-ಶರಹ್ ಮಿಶ್ಕಾತ್, ಸಂಪುಟ1,ಪುಟ 204).

### 7. ಕಾಲ ಸೂಚನೆ

"ವ ಇಧ್ದಲ್ ಇಶಾರು ಉತ್ತಿಲತ್" (ಖುರ್‌ಆನ್ 81:5). ಮರುಭೂಮಿಯ ಹಡಗು ಎಂಬ "ಒಂಟೆ ತ್ಯಜಿಸಲ್ಪಡುವುದು." ಎಂದರೆ, ನೆಲ, ಜಲ ಆಕಾಶಗಳಲ್ಲಿ ತ್ವರಿತವಾಗಿ ಸಂಚರಿಸುವ ವಾಹನಗಳು ಬಳಸಲ್ಪಡುವ ಕಾರಣದಿಂದಾಗಿ ಒಂಟೆ ಸವಾರಿ ಉಪೇಕ್ಷಿಸಲ್ಪಡುವುದು.

### 8. ನಾಗರಿಕತೆ

"ವ ಇಧ್ದಲ್ ವುಹೂಶು ಹುಶಿರತ್" (ಖುರ್‌ಆನ್ 81:6). "ವನ್ಯ ಮೃಗ ಜಂತುಗಳು ಒಂದುಗೂಡಿಸಲ್ಪಡುವುವು." ಮೃಗಾಲಯ ಮತ್ತು ವಸ್ತುಸಂಗ್ರಹಾಲಯಗಳ ಮೂಲಕ ಪ್ರಪಂಚದ ವಿವಿಧ ಕಡೆಗಳಲ್ಲಿ ಕಂಡು ಬರುವ ಪಕ್ಷಿ ಮೃಗಾದಿಗಳು ಒಂದುಗೂಡಿಸಲ್ಪಡುವುವು. ಹಿಂದುಳಿದ ಸ್ಥಿತಿಯಲ್ಲಿ ಕಾಲ ಕಳೆಯುತ್ತಿದ್ದ ಜನವರ್ಗಗಳು ಆಧುನಿಕ ನಾಗರಿಕತೆಯ ಕಾರಣದಿಂದ ಲೋಕದಲ್ಲಿ ಪ್ರಬಲ ಶಕ್ತಿಯಾಗಿ ಬೆಳೆಯುವುವು.

### 9. ಭೂಸ್ಥಿತಿ

"ವ ಇಧ್ದಲ್ ಬಿಹಾರು ಸುಜ್ಜಿರತ್" (ಖುರ್‌ಆನ್ 81:7). ಕಾಲುವೆಗಳನ್ನು ನಿರ್ಮಿಸಿ "ನದಿಗಳೂ ಸಮುದ್ರಗಳೂ ಪರಸ್ಪರ ಸಂಯೋಜಿಸಲ್ಪಡುವುವು." ಅಣೆಕಟ್ಟುಗಳನ್ನು ರಚಿಸಿ ನೀರಾವರಿ ಯೋಜನೆ ಏರ್ಪಡಿಸಲಾಗುವುದು.

### 10. ಸಾರಿಗೆ ಸಂಚಾರ ಪ್ರಗತಿ

"ವ ಇಧ್ದನ್ನುಫೂಸು ಝುವ್ವಿಜತ್" (ಖುರ್‌ಆನ್ 81:8). ಸಾರಿಗೆ ಸಂಚಾರ ಸೌಕರ್ಯವಲ್ಲದೆ ರೇಡಿಯೋ, ಟೆಲಿವಿಷನ್ ಮೊದಲಾದ ವ್ಯವಸ್ಥೆಗಳ ಮೂಲಕ "ವಿಭಿನ್ನ ಜನತೆಗಳೆಡೆಯಲ್ಲಿ ಅನ್ಯೋನ್ಯ ಸಂಪರ್ಕವುಂಟಾಗುವುದು." ವಿವಿಧ ಪಕ್ಷಗಳೂ ಸಹಕಾರ ಸಂಘಗಳೂ ಹುಟ್ಟಿಕೊಳ್ಳುವುವು.

### 11. ಸಾಹಿತ್ಯ ಪ್ರಕಾಶನ

"ವ ಇಧ್ದಸ್ಸುಹುಫು ನುಶಿರತ್" (ಖುರ್‌ಆನ್ 81:11). "ಗ್ರಂಥಗಳೂ ಪತ್ರಿಕೆಗಳೂ ಅತ್ಯಧಿಕ ಪ್ರಕಾಶಿತಗೊಳ್ಳುವುವು". ಆಧುನಿಕ ಮುದ್ರಣ ಯಂತ್ರಗಳ ಸಹಾಯದಿಂದ ಪತ್ರಿಕೆಗಳ ಪ್ರಕಟನೆ ವಿಪುಲವಾಗಿ ನಡೆಯುವುವು. ವಾಚನಾಲಯ ಮತ್ತು ಗ್ರಂಥಾಲಯಗಳ ಹೆಚ್ಚಳ ಸಹ ಇಲ್ಲಿ ಸೂಚಿಸಲ್ಪಟ್ಟಿದೆ.

### 12. ಧಾರ್ಮಿಕ ಸ್ಥಿತಿ

ಇಮಾಂ ಮಹ್‌ದಿಯ ಆಗಮನ ಕಾಲದ ಧಾರ್ಮಿಕ ಪರಿಸ್ಥಿತಿಗಳ ಕುರಿತು ಪೈಗಂಬರ್(ಸ) ವಿಶದವಾಗಿ ಭವಿಷ್ಯ ನುಡಿದಿರುವರು:

(i) ಆ ಕಾಲದಲ್ಲಿ ಕ್ರೈಸ್ತ ಧರ್ಮಕ್ಕೆ ವಿಪುಲ ಅಭಿವೃದ್ಧಿ ಸಿದ್ಧಿಸುವುದು. (ಮುಸ್ಲಿಂ, ಸಂಪುಟ2 ಕಿತಾಬುಲ್ ಫಿತನ್).

ಕ್ರೈಸ್ತ ಧರ್ಮದ ಎದುರಲ್ಲಿ ಇಸ್ಲಾಂ ಧರ್ಮದ ಶೋಚನೀಯ ಸ್ಥಿತಿಯ ಕುರಿತು ಹೀಗೆ ಹೇಳಲಾಗಿದೆ:

(ii) ಆ ಕಾಲದಲ್ಲಿ ಇಸ್ಲಾಂ ಆರಂಭದಶೆಯಲ್ಲಿದ್ದಂತೆ ಬಲಹೀನವಾದ ಒಂದು ಸ್ಥಿತಿಯಲ್ಲಿರುವುದು. (ಇಬ್ನು ಮಾಜ).

### 13. ಸಾಮುದಾಯಿಕ ಸ್ಥಿತಿ

(i) ಮುಸ್ಲಿಮರು ದಜ್ಜಾಲಿನ (ಕ್ರೈಸ್ತರ) ಅನುಯಾಯಿಗಳಾಗುವರು. (ತಿರ್ಮದಿ, ಅಬ್ವಾಬುಲ್ ಫಿತನ್).

(ii) ಇಸ್ಲಾಮಿನ ನಾಮ ಮತ್ತು ಖುರ್‌ಆನಿನ ಲಿಪಿ ಮಾತ್ರವೇ ಬಾಕಿ ಉಳಿಯುವುವು. ಮಸೀದಿಗಳು ಜನಬಾಹುಳ್ಯದಿಂದ ಕೂಡಿ ಇದ್ದರೂ ಭಕ್ತಿಶೂನ್ಯವಾಗಿರುವುವು. ಅವರ ಧರ್ಮಪಂಡಿತರು ಆಕಾಶದ ಕೆಳಗೆ ನಿಕೃಷ್ಟಜೀವಿಗಳಾಗುವರು. (ಮಿಶ್ಕಾತ್)

(iii) ಮುಸ್ಲಿಮರು ಪ್ರಾರ್ಥನೆ ತ್ಯಜಿಸುವರು. ಝಕಾತನ್ನು ದಂಡವೆಂಬಂತೆ ಗಣಿಸುವರು. (ಇಬ್ನು ಅಬ್ಬಾಸ್‌ರವರು ವರದಿ, ಪುಟ 298, 927 ಹುಜ್ಜುಲ್ ಕಿರಾಮ).

(iv) ಹಝ್ರತ್ ಅಲಿ(ರ) ಈ ರೀತಿ ವರದಿ ಮಾಡುತ್ತಾರೆ: ಅರಬಿಗಳು (ಇಸ್ಲಾಂ) ಧರ್ಮದಿಂದ ಬಹಳ ದೂರವಾಗುವರು.

(v) ಮುಸ್ಲಿಮರು ಯಹೂದರನ್ನೂ ಕ್ರೈಸ್ತರನ್ನೂ ಸಂಪೂರ್ಣವಾಗಿ ಅನುಸರಿಸುವರು. (ಮಿಶ್ಕಾತ್)

### 14. ಸದಾಚಾರ ಸ್ಥಿತಿ

(i) ಆ ಕಾಲದಲ್ಲಿ ಅಶ್ಲೀಲ ಸಾಹಿತ್ಯಗಳೂ ವ್ಯಭಿಚಾರವೂ ವೃದ್ಧಿಗೊಂಡು ವ್ಯಭಿಚಾರ ಸಂತತಿಗಳು ಹೆಚ್ಚುವುವು. (ಇಬ್ನು ಅಬೀಶೀಬ ಅವರ ವರದಿ-ಹುಜ್ಜುಲ್ ಕಿರಾಮ).

(ii) ಆ ಕಾಲದಲ್ಲಿ ಮದ್ಯವು ಬಹಳ ಹೆಚ್ಚಾಗಿ ಉಪಯೋಗಿಸಲ್ಪಡುವುದೆಂದು ಅನಸಿಬ್ನು ಮಾಲಿಕ್ ಅವರು ವರದಿ ಮಾಡಿದ್ದಾರೆ. (ಮುಸ್ಲಿಂ).

(iii) ಜೂಜಾಟ ವಿಪುಲವಾಗಿ ನಡೆಯುವುದು. (ದೈಲಮಿ).

(iv) ಅಮಾನತ್ (ವಿಶ್ವಸ್ತತೆ) ನಾಸ್ತಿಯಾಗುವುದು. (ದೈಲಮಿ, ಹುಜ್ಜುಲ್ ಕಿರಾಮ).

(v) ಪುತ್ರನು ಮಾತಾಪಿತರನ್ನು ಅನುಸರಿಸದೆ ಅವರನ್ನು ಅಪಮಾನಿಸುವನು; ಅವರಿಗೆ ಕಷ್ಟ ಕೊಡುವನು. (ಹುದೈಫಾ ಬಿನ್ ಯಮಾನ್ ವರದಿಮಾಡಿದ್ದು).

(vi) ಸಂಪತ್ತು ಮತ್ತು ಪ್ರೌಢಿಮೆಯನ್ನು ಗಣಿಸಿ ಜನರು ಹೊಗಳಲ್ಪಡುವರು. ಜನರು ಧೈರ್ಯವಂತರು, ಬುದ್ಧಿವಂತರು, ಪ್ರತಾಪಶಾಲಿಗಳು ಎಂಬಿತ್ಯಾದಿಯಾಗಿ ಸ್ತುತಿಸಲ್ಪಡುವರು. ಆದರೆ ಅವರ ಹೃದಯದಲ್ಲಿ ತುಸುಮಾತ್ರವಾದರೂ ವಿಶ್ವಾಸ ಇರಲಿಕ್ಕಿಲ್ಲ. (ತಿರ್ಮದಿ).

### 15. ವೇಷಭೂಷಣಗಳು

(i) ಆ ಕಾಲದಲ್ಲಿ ಸ್ತ್ರೀಯರು ವಸ್ತ್ರ ಧರಿಸಿದರೂ ನಗ್ನರಾಗಿ ಕಾಣುವರು. (ಮುಸ್ನದ್ ಅಹ್ಮದ್)

(ii) ಆ ಕಾಲದಲ್ಲಿ ಸ್ತ್ರೀಯರು ಒಂಟೆಯ ಡುಬ್ಬದಂತೆ ತಮ್ಮ ತಲೆಗೂದಲನ್ನು ಅಲಂಕರಿಸುವರು. (ಮುಸ್ನದ್)

(iii) ಸ್ತ್ರೀಯರು ತಮ್ಮ ಪತಿಯೊಂದಿಗೆ ಸೇರಿ ವ್ಯಾಪಾರ ನಡೆಸುವರು. (ಹುಜ್ಜುಲ್ ಕಿರಾಮ).

(iv) ಸ್ತ್ರೀಯರು ಪುರುಷ ವೇಷ ಧರಿಸಿ ಸ್ವತಂತ್ರರಾಗಿ ತಿರುಗಾಡುವರು. (ಇಬ್ನು ಅಬ್ಬಾಸ್).

(v) ಪುರುಷರು ಸ್ತ್ರೀಯರಂತೆ ವಸ್ತ್ರ ಧರಿಸುವರು. (ಹುದೈಫತುಬ್ನು ಯಮಾನ್).

(vi) ಆ ಕಾಲದಲ್ಲಿ ಆಕಸ್ಮಿಕ ಮರಣಗಳು (ಹೃದಯಸ್ತಂಭನ ಇತ್ಯಾದಿ) ಹೆಚ್ಚುವುವು. (ಇಬ್ನು ಅಬೀಶೀಬ - ಹುಜ್ಜುಲ್ ಕಿರಾಮ.)

### 16. ಆಡಳಿತ ರಂಗ

(i) ಬಡ್ಡಿ ವ್ಯವಹಾರ ಅತ್ಯಧಿಕ ವೃದ್ಧಿಗೊಳ್ಳುವುದು. [ಬ್ಯಾಂಕಿಂಗ್, ಇನ್ಶೂರೆನ್ಸ್ ಇತ್ಯಾದಿ] (ದೈಲಮಿ).

(ii) ದರಿದ್ರರೂ ಬಡವರೂ ರಾಜರಾಗುವರು.

(iii) ಶ್ರಮಜೀವಿಗಳ ಸಂಘಟನೆ ಬಹಳ ಶಕ್ತಿ ಪಡೆಯುವುದು.

(iv) ಆಡಳಿತಾಧಿಕಾರಿಗಳು ಹೆಚ್ಚುವರು. [ಜನಪ್ರತಿನಿಧಿಗಳು ಆಡಳಿತಗಾರರಾಗುವರು] (ಹುದೈಫ).

### 17. ದಜ್ಜಾಲ್

ದಜ್ಜಾಲನ ಹೊರಡುವಿಕೆ.

"ದಜ್ಜಾಲನ ಬಲಗಣ್ಣು (ಆಧ್ಯಾತ್ಮಿಕ ದೃಷ್ಟಿ) ಕುರುಡಾಗಿರುವುದು. ನಿಮ್ಮಲ್ಲಿ ಯಾರಾದರೂ ಅವನನ್ನು ಕಂಡರೆ ಸೂರಃ ಕಹ್‌ಫಿನ ಪ್ರಾರಂಭ ವಚನಗಳನ್ನು (ಯೇಸುಕ್ರಿಸ್ತರ ದೇವತ್ವಕ್ಕೆ ವಿರುದ್ಧವಾದ ಪ್ರಸ್ತಾಪನೆಗಳಿಂದ ಕೂಡಿದವು) ಓದಿರಿ. ದಜ್ಜಾಲ್ ಮಳೆ ಸುರಿಸಲು ಆಕಾಶದೊಡನೆ ಆಜ್ಞಾಪಿಸುವಾಗ ಆಕಾಶ ಮಳೆ ಸುರಿಸುವುದು (ಕೃತಕ ಮಳೆ). ಮೊಳೆಸಲಿಕ್ಕೆ ಭೂಮಿಯೊಡನೆ ಆಜ್ಞಾಪಿಸುವಾಗ ಭೂಮಿ ಮೊಳೆಸುವುದು. ಅವನ ಜೊತೆಯಲ್ಲಿ ರೊಟ್ಟಿಯ ಗುಡ್ಡೆ ಮತ್ತು ನೀರಿನ ಕಾಲುವೆ ಇರುವುವು." (ಮಿಶ್ಕಾತ್).

ದಜ್ಜಾಲ್ ಎಂಬುದರ ತಾತ್ಪರ್ಯ ಆಧುನಿಕ ಯುಗದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಧಿಪತ್ಯಗಳಿಸಿರುವ ಪಾಶ್ಚಾತ್ಯ ಸಂಸ್ಕೃತಿಯಾಗಿದೆ.

### 18. ಯಲ್‌ಜೂಜ್ ಮಲ್‌ಜೂಜ್

ಯಲ್‌ಜೂಜ್ ಮಲ್‌ಜೂಜ್ ಪ್ರತ್ಯಕ್ಷಗೊಳ್ಳುವುವು. (ಸೂರಃ ಅಂಬಿಯಾ, ಸೂರಃ ಕಹ್‌ಫ್).

ಇವು ರಶ್ಯಾ ಮತ್ತು ಅಮೇರಿಕಾ ಎಂಬೀ ಎರಡು ಶಕ್ತಿಗಳಾಗಿವೆಯೆಂದು ವ್ಯಕ್ತಗೊಂಡಿದೆ.

### 19. ಕುಸಿಯುವ ಶಿಲುಬೆಗಳು

ಇಮಾಂ ಮಹ್‌ದಿಯ ಪ್ರಧಾನ ಕರ್ತವ್ಯವಾಗಿ ಮುಹಮ್ಮದ್ ಪೈಗಂಬರ್[ಸ] ಹೀಗೆ ನುಡಿದಿರುವರು:

ಅವರು ಬಂದು ಶಿಲುಬೆಯನ್ನು ಮುರಿಯುವರು, ಹಂದಿಯನ್ನು ಕೊಲ್ಲುವರು. (ಹಂದಿಯ ಸ್ವಭಾವವುಳ್ಳವರನ್ನು ಪರಿವರ್ತಿಸಲು ಪ್ರಯತ್ನಿಸುವರು)-[ಬುಖಾರಿ, ಸಂಪುಟ 2, ಪುಟ 19].

ಶಿಲುಬೆಯನ್ನು ಮುರಿಯುವರು ಎಂಬ ಪೈಗಂಬರರ ವಚನಕ್ಕೆ ವ್ಯಾಖ್ಯಾನ ನೀಡುತ್ತಾ ಬಿಹಾರುಲ್ ಅನ್ವಾರ್ ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ:

ಶಿಲುಬೆಯನ್ನು ಮುರಿಯಲಾಗುವುದು ಎಂಬುದರ ತಾತ್ಪರ್ಯ ಕ್ರೈಸ್ತ ವಿಶ್ವಾಸದ ಅಸಂಬದ್ಧತೆಯನ್ನು ಎತ್ತಿ ತೋರಿಸುವುದು ಹಾಗೂ ಇಸ್ಲಾಮಿಕ ನಿಯಮಾನುಸಾರ ವಿಶ್ವಾಸವಿರಿಸುವುದು ಎಂದಾಗಿದೆ. (ಬಿಹಾರುಲ್ ಅನ್ವಾರ್, ಸಂಪುಟ13, ಪುಟ 198).

### 20. ಅರಬಿಯರಿಗೆ ನಾಶನಷ್ಟ

ಹಝ್ರತ್ ಪೈಗಂಬರ್[ಸ] ಹೀಗೆ ನುಡಿದಿರುವರು:

ಅರಬಿಯರಿಗೆ ತುಂಬಾ ನಾಶನಷ್ಟಗಳು ಸಂಭವಿಸುವುವು. ಯಲ್‌ಜೂಜ್ ಮಲ್‌ಜೂಜ್‌ಗಳ ಗೋಡೆಯಲ್ಲಿ ಒಂದು ರಂಧ್ರವಿರುವುದೆಂದು ಹೇಳುತ್ತಾ ಅವರು ತನ್ನ ತೋರುಬೆರಳು ಮತ್ತು ಹೆಬ್ಬೆರಳನ್ನು ಸೇರಿಸಿ ಒಂದು ರಂಧ್ರವನ್ನುಂಟುಮಾಡಿ ತೋರಿಸಿದರು. (ಬುಖಾರಿ- ಯಲ್‌ಜೂಜ್ ಮಲ್‌ಜೂಜ್ ಸಂಬಂಧಿಸಿದ ಅಧ್ಯಾಯ).

ಯಲ್‌ಜೂಜ್ ಮಲ್‌ಜೂಜ್ (ಅಮೇರಿಕನ್- ರಶ್ಯನ್ ರಾಷ್ಟ್ರಗಳು) ಮುಖಾಂತರ ಅರಬಿಯರಿಗೆ ಮಹಾ ನಾಶನಷ್ಟಗಳನ್ನು ಎದುರಿಸಬೇಕಾದೀತು.

1967ರ ಅರಬ್-ಇಸ್ರಾಯೀಲ್ ಯುದ್ಧ ಅರಬ್ ಲೋಕಕ್ಕೆ ಉಂಟುಮಾಡಿದ ನಾಶನಷ್ಟಗಳು ಈ ಭವಿಷ್ಯೋಕ್ತಿಯ ನೆರವೇರಿಕೆಯಂಬಂತೆ ಸಂಭವಿಸಿತು.

### 21. ಸೂರ್ಯ ಚಂದ್ರ ಗ್ರಹಣಗಳು

ನಮ್ಮ ಮಹ್‌ದಿಗೆ ಎರಡು ಕುರುಹುಗಳಿವೆ. ಆಕಾಶ ಭೂಮಿ ಉಂಟಾದ ಮೊದಲ್ಗೊಂಡು ಈ ರೀತಿಯ ಕುರುಹುಗಳು ಗೋಚರಿಸಲಿಲ್ಲ. ಎಂದರೆ ರಮಝಾನ್ ಮಾಸದಲ್ಲಿ ಚಂದ್ರ ಗ್ರಹಣಕ್ಕಾಗಿ ನಿಶ್ಚಿತವಾದ ರಾತ್ರಿಗಳಲ್ಲಿ (13,14,15) ಪ್ರಥಮ ರಾತ್ರಿ (13ನೇ ರಾತ್ರಿ) ಚಂದ್ರನಿಗೂ ಸೂರ್ಯ ಗ್ರಹಣಕ್ಕಾಗಿ ನಿಶ್ಚಿತವಾದ ದಿನಗಳಲ್ಲಿ (27,28,29) ಮಧ್ಯ ದಿನದಂದು (28ರಂದು) ಸೂರ್ಯನಿಗೂ ಗ್ರಹಣವಾಗುವುದು. (ಸುನನು ದಾರುಖುತ್ನಿ- ಸಂಪುಟ 2, ಪುಟ 65)

ಕ್ರಿಸ್ತ ಶಕ 1894ರಲ್ಲಿ ಹಿಜ್‌ರೀ ವರ್ಷ 1311ರಲ್ಲಿ ರಮಝಾನ್ ಮಾಸದ 13ನೇ ರಾತ್ರಿ ಚಂದ್ರ ಗ್ರಹಣವೂ 28ರಂದು ಹಗಲು ಸೂರ್ಯ ಗ್ರಹಣವೂ ಘಟಿಸಿದವು.

ಹೀಗೆ ಇಮಾಂ ಮಹ್‌ದಿಯ ಕುರಿತು ಮುಹಮ್ಮದ್ ಪೈಗಂಬರ್[ಸ] ನುಡಿದ ಕುರುಹುಗಳು ಅನೇಕ ಇವೆ. ಕೆಲವನ್ನು ಮಾತ್ರ ಇಲ್ಲಿ ಉದ್ಧರಿಸಲಾಗಿದೆ. ಈ ಎಲ್ಲ ಭವಿಷೋಕ್ತಿಗಳು ಈಡೇರುತ್ತಾ 1250 ಶವ್ವಾಲ್ 14ರಂದು ಕದಿಅ (ಖಾದಿಯಾನ್)ಎಂಬಲ್ಲಿ ಫಾರ್ಸಿ ವಂಶಜರಾಗಿ ಅಹ್ಮದ್ ಎಂಬ ಹೆಸರಿನೊಂದಿಗೆ ಆ ಮಹಾತ್ಮರು ಜನ್ಮ ತಾಳಿದರು. ಅವರ ಜಮಾಅತು "ಅಹ್ಮದಿಯಾ ಜಮಾಅತ್" ಎಂಬ ಹೆಸರಿನಲ್ಲಿ ಇಂದು ವಿಶ್ವವಿಖ್ಯಾತವಾಗಿದೆ.

ಯಾವ ವಿಶದೀಕರವೂ ಅವಶ್ಯವಿಲ್ಲದ ವಿಧದಲ್ಲಿ ಸೂರ್ಯ ಪ್ರಕಾಶದಂತೆ ಮುಹಮ್ಮದ್ ಪೈಗಂಬರ್[ಸ] ನುಡಿದ ಎಲ್ಲ ಕುರುಹುಗಳು ಸಹ ಗೋಚರಿಸಿವೆ. ಆ ಮಹಾ ಪುರುಷರು ಹೇಳಿದ ಅದೇ ರೂಪದಲ್ಲಿ ಎಲ್ಲ ಗುಣಗಳ ಸಮೇತ ಇಮಾಂ ಮಹ್‌ದಿ ಪ್ರತ್ಯಕ್ಷರಾಗಿರುತ್ತಾರೆ.

"ಶುದ್ಧ ಹೃದಯವುಳ್ಳವರಿಗೆ ಅದ್ಭುತ ದೃಷ್ಟಾಂತಗಳು ಅನೇಕ ಅವಶ್ಯವಿಲ್ಲ. ಹೃದಯದಲ್ಲಿ ದೇವಭಕ್ತಿಯುಳ್ಳವರಿಗೆ ಒಂದೇ ಒಂದು ದೃಷ್ಟಾಂತ ಮಾತ್ರ ಸಾಕು".

**"ಇನ್ಸಾನಿಯತ್ ಝಿಂದಾಬಾದ್"**
**"ಮಾನವೀಯತೆ ಚಿರಕಾಲ ಬಾಳಲಿ"**

# ಪ್ರವಾದಿತ್ವ ಸಮಾಪ್ತಿಯ ನಿಜಸ್ಥಿತಿ - 9

❖ಉರ್ದು ಮೂಲ : ಮಿರ್ಝಾ ಬಶೀರ್ ಅಹ್ಮದ್ ಎಂ. ಎ.

❖ಅನುವಾದ : ಎಂ. ಉಬೈದುಲ್ಲಾ

## ಹಝ್ರತ್ ಮೌಲಾನ ರೂಮಿಯವರ ಸಾಕ್ಷ್ಯ

ಇನ್ನೊಂದು ಸಾಕ್ಷ್ಯ ಹಝ್ರತ್ ಮೌಲಾನ ಜಲಾಲುದ್ದೀನ್ ರೂಮಿ ರಹ್ಮತುಲ್ಲಾಹಿ ಅಲೈಹಿರವರ (ನಿಧನ : 672 ಹಿಜರಿ) ಪದ್ಯದಿಂದ ದೊರಕುತ್ತದೆ. ನಾನು ಈ ಬಗ್ಗೆ ಇರುವ ಎಲ್ಲಾ ಸಾಕ್ಷ್ಯಾಧಾರಗಳನ್ನು ನಿಮ್ಮ ಮುಂದಿರಿಸಲು ಉದ್ದೇಶಿಸುವುದಿಲ್ಲ. ನಾನು ಕೆಲವೇ ಕೆಲವು ಸಾಕ್ಷ್ಯಾಧಾರಗಳನ್ನು ಮಾತ್ರ ಉದಾಹರಣೆಯ ರೂಪದಲ್ಲಿ ನಿಮ್ಮ ಮುಂದೆ ಇರಿಸುತ್ತೇನೆ. ಇದರ ಉದ್ದೇಶ, ಖತಮುನ್ನಬುವ್ವತ್ ಕುರಿತು ಅಹ್ಮದಿಯಾ ಜಮಾಅತಿನ ವಿಶ್ವಾಸ ಹೊಸದೇನೂ ಅಲ್ಲ; ಎಲ್ಲಾ ಕಾಲಗಳಲ್ಲಿ ಇಸ್ಲಾಮ್ ಧರ್ಮದ ಕೆಲವು ಹಿರಿಯ ವಿದ್ವಾಂಸರು ಮತ್ತು ಸೂಫಿಗಳು ನಮ್ಮ ಹಾಗೆಯೇ ಇರುವ ಅಭಿಪ್ರಾಯಗಳನ್ನು ಬಹಿರಂಗಪಡಿಸುತ್ತಾ ಇದ್ದರು ಎಂದು ಸಾಬೀತುಪಡಿಸುವುದಾಗಿದೆ. ಈ ಉದ್ದೇಶದಿಂದ ಕೆಲವು ಉಲ್ಲೇಖಗಳನ್ನು ಮುಂಚೆ ಬರೆದಿದ್ದೇವೆ. ಬೇರೆ ಉಲ್ಲೇಖಗಳನ್ನು ಇನ್ನು ಮುಂದೆ ಬರೆಯಲಿದ್ದೇವೆ.

ಮೌಲಾನ ರೂಮಿಯವರ "ಮಸ್ನವೀ" ಮುಸ್ಲಿಮರ ಎಲ್ಲಾ ವಿಭಾಗದವರು ಮೆಚ್ಚುವ ಗ್ರಂಥವಾಗಿದೆ. ಅದು ಜ್ಞಾನ ಮತ್ತು ತಸವ್ವುಫ್ (ಸೂಫೀ ಸಿದ್ಧಾಂತ) ಗಳಿಂದ ತುಂಬಿದೆ. ಅದರಲ್ಲಿ ಮೌಲಾನ ರೂಮಿ ಹೀಗೆ ಬರೆದಿದ್ದಾರೆ:

بہرِ ایں خاتم شُداست او کہ بجُود ÷ مثلِ اُو نَے بُود نَے خواہند بود

چونکہ در صنعت برد استاد دست ÷ نے تو گوئی ختم صنعت بر تو مست

(مثنوی مولانا رُوم دفتر ششم صفحہ ۸)

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರನ್ನು ಖಾತಮುನ್ನಬಿಯ್ಯೀನ್ ಎಂದು ಹೆಸರಿಸಿದುದು ಏಕೆಂದರೆ ಅವರ ಹಾಗೆ ಇರುವ ವ್ಯಕ್ತಿ ಹಿಂದಿನ ಕಾಲದ ಜನರಲ್ಲಿಯೂ ಉಂಟಾಗಲಿಲ್ಲ ಮತ್ತು ಇನ್ನು ಮುಂದೆ ಸಹ ಉಂಟಾಗಲಾರರು. ಯಾವುದಾದರೂ ವೃತ್ತಿಯಲ್ಲಿ ನಿಷ್ಣಾತನಾದವನು ಆ ವೃತ್ತಿಯಲ್ಲಿ ಎಲ್ಲರಿಗಿಂತಲೂ ಅತ್ಯಂತ ಹೆಚ್ಚು ನಿಷ್ಣಾತನಾದರೆ ಆತನ ಕುರಿತು ನೀವು ಹೇಳುವುದಿಲ್ಲವೇ ಆ ವೃತ್ತಿ ನಿನ್ನಲ್ಲಿ ಅಂತಿಮ ಸ್ಥಿತಿ ಪಡೆಯಿತು ಎಂದು? ನೀವು ತಿಳಿದುಕೊಳ್ಳಿರಿ. ಇದೇ ಅರ್ಥದಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಲ್ಲಿ ನುಬುವ್ವತ್ ಅಂತಿಮ ಸ್ಥಿತಿಯನ್ನು ಪಡೆಯಿತು."

(ಮಸ್‌ನವೀ - ಮೌಲಾನ ರೂಮಿ: ದಫ್ತರ್ - 6 ಪುಟ - 8)

ನೀವು ನೋಡಿರಿ. ಇದು ಎಷ್ಟು ಸ್ಪಷ್ಟವಾಗಿದೆ. ಹಝ್ರತ್ ಮೌಲಾನ ರೂಮಿ(ರ್‌ಹ್) ಹೇಳುತ್ತಾರೆ: ಖಾತಮುನ್ನಬಿಯ್ಯೀನ್ ಎಂಬ ಪದದ ಮೂಲಕ ನೀವು ಹಝ್ರತ್ ಮುಹಮ್ಮದ್ ರಸೂಲ್‌ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅಲ್ಲಾಹನ ಅನುಗ್ರಹಗಳ ಕಾಲುವೆಯನ್ನು ಮುಚ್ಚುವವರನ್ನಾಗಿ ಭಾವಿಸಬೇಡಿರಿ. ಈ ಶಬ್ದದ ಅರ್ಥ ಅಫ್‌ಝಲುರ್ರುಸುಲ್ ಎಂದರೆ ಅಲ್ಲಾಹನ ದೂತರಲ್ಲಿ ಅತ್ಯಂತ ಶ್ರೇಷ್ಠ ಎಂದು. ಅವರು ತನ್ನಲ್ಲಿ ನುಬುವ್ವತಿನ ಎಲ್ಲಾ ಶ್ರೇಷ್ಠತೆಗಳನ್ನು ಉತ್ತಮವಾದ ರೀತಿಯಲ್ಲಿ ಗಳಿಸಿರುವರು. ಅವರು ಉದಾಹರಣೆ ನೀಡಿ ಹೀಗೆ ಹೇಳುತ್ತಾರೆ: ಒಬ್ಬ ವ್ಯಕ್ತಿಯ ಅದ್ವಿತೀಯ ನಿಪುಣತೆಯ ಕುರಿತು ಅವನಲ್ಲಿ ಆ ವೃತ್ತಿ ಅಂತಿಮ ಸ್ಥಿತಿ ಪಡೆಯಿತು ಎಂದು ಹೇಳುವ ಹಾಗೆಯೇ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಖತ್‌ಮೆ ನುಬುವ್ವತ್ ಎಂಬುದರ ಅರ್ಥ ಅವರ ಅಸ್ತಿತ್ವದಲ್ಲಿ ನುಬುವ್ವತಿನ ಎಲ್ಲಾ ಶ್ರೇಷ್ಠತೆಗಳು ಅತ್ಯುನ್ನತ ಮಟ್ಟದಲ್ಲಿ ಅವರಲ್ಲಿ ಪರಿಪೂರ್ಣತೆಯನ್ನು ಪಡೆಯಿತು ಎಂದಾಗಿದೆ.

ಸ್ನೇಹಿತರೇ, ಬಂಧುಗಳೇ, ಖತಮುನ್ನುಬುವ್ವತ್ ಕುರಿತು ನಾವು ನೀಡುವ ವ್ಯಾಖ್ಯಾನದ ಕಾರಣದಿಂದ ನಮ್ಮನ್ನು ಕಾಫಿರ್‌ಗಳೆಂದು ಹೇಳುವವರೇ, ನೀವು ಯೋಚಿಸಿರಿ; ಗಾಢವಾಗಿ ಚಿಂತಿಸಿರಿ. ಹಝ್ರತ್ ಮೌಲಾನ ರೂಮಿ ರಹ್ಮತುಲ್ಲಾಹ್ ಅಲೈಹಿ ಖತಮುನ್ನುಬುವ್ವತ್‌ಗೆ ನೀಡಿರುವ ವಿವರಣೆ ನಾವು ನೀಡುವ ವ್ಯಾಖ್ಯಾನದ ಪ್ರಕಾರವೇ ಅಲ್ಲವೇ?

ನೀವು ಪುನಃ ಯೋಚಿಸಿರಿ; ಗಾಢವಾಗಿ ಚಿಂತಿಸಿರಿ. ನಾವು ನೀಡುವ ವ್ಯಾಖ್ಯಾನ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರ ಘನತೆಗೆ ತಕ್ಕುದಾಗಿದೆಯೋ ಅಥವಾ ನೀವು ನೀಡುವ ಅರ್ಥ ಅವರ ಘನತೆಗೆ ಯೋಗ್ಯವಾಗಿದೆಯೋ? ನೀವು ನೀಡುವ ಅರ್ಥ ಹರಿಯುತ್ತಿರುವ ಕಾಲುವೆಗಳನ್ನು ಮುಚ್ಚಿಬಿಡುವುದಾಗಿದೆ. ನಾವು ನಮ್ಮ ಪರವಾಗಿ ಏನೂ ಹೇಳುವುದಿಲ್ಲ. ಪ್ರತಿಯೊಬ್ಬ ಮುಸ್ಲಿಮನು ತನ್ನ ಹೃದಯದಿಂದ ತೀರ್ಮಾನವನ್ನು ಅಪೇಕ್ಷಿಸಲಿ. ಅಲ್ಲಾಹನು ಎಲ್ಲಾ ಕಡೆ ಇರುವವನೂ ಎಲ್ಲವನ್ನು ನೋಡುವವನೂ ಆಗಿರುವನೆಂಬುದನ್ನು ಅರಿತುಕೊಂಡು ಉತ್ತರ ಕೊಡಲಿ.

## ಹಝ್ರತ್ ಇಮಾಮ್ ಮುಹಮ್ಮದ್ ತಾಹಿರ್‌ರವರ ಸಾಕ್ಷ್ಯ

ಹಝ್ರತ್ ಇಮಾಮ್ ಮುಹಮ್ಮದ್ ತಾಹಿರ್ (ನಿಧನ: 986 ಹಿಜರಿ) ರಹ್ಮತುಲ್ಲಾಹಿ ಅಲೈಹಿರವರನ್ನು ಕೆಲವರು ಆ ಕಾಲಘಟ್ಟದ ಇಮಾಮರೆಂದು ಅಂಗೀಕರಿಸಿರುವರು. ಮಜ್‌ಮಉಲ್ ಬಿಹಾರ್ ಎಂಬ ಅವರ ಗ್ರಂಥ ಹದೀಸು ವ್ಯಾಖ್ಯಾನದಲ್ಲಿ ಉನ್ನತ ಮಟ್ಟದ ಗ್ರಂಥವೆಂದು ಗ್ರಹಿಸಲಾಗಿದೆ. ಅವರು ಹೀಗೆ ಬರೆಯುತ್ತಾರೆ:

عن عائشة رضی الله عنها قولوا انّهٗ خاتم الانبیاء ولا تقولوا

لانبیّ بعدهٗ وهٰذا ناظر الیٰ نزول عیسٰی وهٰذا ایضاً

لاینافی حدیث لانبیّ بعدی لانّهٗ اراد لانبیّ ینسخ

شرعهٗ۔ (دُرِّ منثور و تکملہ مجمع البحار صفحہ ۸۵)

"ಹಝ್ರತ್ ಆಯಿಷಾ ರಝಿಯಲ್ಲಾಹು ಅನ್‌ಹಾ ಹೇಳಿದ

'ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಖಾತಮುನ್ನ ಬಿಯ್ಯೀನ್ ಎಂದು ಹೇಳಿರಿ; ಆದರೆ ಲಾನಬಿಯ್ಯ ಬಅ್‌ದಹು (ಅವರ ನಂತರ ಪ್ರವಾದಿಯಿಲ್ಲ) ಎಂದು ಹೇಳಬೇಡಿರಿ' ಎಂಬ ಮಾತು ಈಸಾರ ಆಗಮನವನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳಿದುದಾಗಿದೆ. ಹಝ್ರತ್ ಆಯಿಷಾ ರಝಿಯಲ್ಲಾಹು ಅನ್‌ಹಾರವರ ಮಾತು 'ಲಾ ನಬಿಯ್ಯ ಬಅ್‌ದೀ (ನನ್ನ ನಂತರ ನಬಿ ಇಲ್ಲ) ಎಂಬ ಹದೀಸಿಗೆ ವಿರುದ್ಧವಾದುದಲ್ಲ. ಏಕೆಂದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರು ಉದ್ದೇಶಿಸಿದುದು ಏನೆಂದರೆ ತನ್ನ ಶರೀಅತನ್ನು ರದ್ದುಗೊಳಿಸುವ ಒಬ್ಬ ಪ್ರವಾದಿ ತನ್ನ ಅನಂತರ ಬರಲಾರರು ಎಂದಾಗಿದೆ."

(ತಕ್‌ಮಿಲ ಮಜ್‌ಮಉಲ್ ಬಿಹಾರ್ - ಪುಟ 85)

ಇಮಾಮ್ ಮುಹಮ್ಮದ್ ತಾಹಿರ್ ರಹ್ಮತುಲ್ಲಾಹಿ ಅಲೈಹಿರವರ ಹೇಳಿಕೆಯಿಂದ ಈ ಕೆಳಗಿನ ಎರಡು ಸಾಕ್ಷ್ಯಗಳು ದೊರೆಯುತ್ತವೆ:

1) ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರ ಆಗಮನದ ನಂತರ ಶರೀಅತ್ ತರುವ ನುಬುವ್ವತಿನ ಬಾಗಿಲು ಮಾತ್ರ ಮುಚ್ಚಲ್ಪಟ್ಟಿದೆ ಹೊರತು ಎಲ್ಲಾ ವಿಧಗಳ ನುಬುವ್ವತಿನ ಬಾಗಿಲು ಮುಚ್ಚಲ್ಪಟ್ಟಿಲ್ಲ.

2) ಮಸೀಹ್ ಮೌಊದ್ ಕುರಿತು ಇಸ್ಲಾಮ್ ಧರ್ಮದಲ್ಲಿರುವ ಭವಿಷ್ಯವಾಣಿಯ ಪ್ರಕಾರ ಆಗಮಿಸುವ ಮಹಾನುಭಾವರು ಅಲ್ಲಾಹನ ಪ್ರವಾದಿಯಾಗಿರುವರು. ಅವರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರ ಶರೀಅತನ್ನು ಅನುಸರಿಸುವವರಾದ ಕಾರಣ ಅವರ ಆಗಮನ "ಲಾ ನಬಿಯ್ಯ ಬಅ್‌ದೀ" ಎಂಬ ಹದೀಸಿಗೆ ವಿರುದ್ಧವಾಗಲಾರದು.

ಖತಮುನ್ನುಬುವ್ವತ್ ಕುರಿತು ಅಹ್ಮದಿಯಾ ಜಮಾಅತ್ ಸಹ ಹೇಳುವುದು ಇದನ್ನೇ ಆಗಿದೆ. ಮೇಲಿನ ಮಹಾನುಭಾವರು ನೀಡಿದ ಸಾಕ್ಷ್ಯಗಳು ಇದ್ದರೂ ಸಹ ಆ ಮಹಾನುಭಾವರ ಅಭಿಪ್ರಾಯಗಳ ಪ್ರಕಾರದ ನಿಲುವನ್ನು ಹೊಂದಿದ ನಮ್ಮನ್ನು ಕಾಫಿರ್‌ಗಳೆಂದೂ ಇಸ್ಲಾಮಿನ ವಲಯದಿಂದ ಹೊರಗೆ ಎಂದೂ ಘೋಷಿಸುವುದು ಖೇದಕರವಾಗಿದೆ.

ಈ ಉಲ್ಲೇಖದಲ್ಲಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಆರು ನೂರು ವರ್ಷಗಳ ಹಿಂದೆ ಬನೀ ಇಸ್ರಾಈಲ್ ಸಮುದಾಯದವರಿಗಾಗಿ ಆಗಮಿಸಿದ ಹಝ್ರತ್ ಈಸಾ ಅಲೈಹಿಸ್ಸಲಾಮರ ಕುರಿತು ಪ್ರಸ್ತಾಪಿಸಲಾಗಿದೆ ಎಂದು ಯಾರಾದರೂ ಯೋಚಿಸುವುದಾದರೆ ಅದು ಇಮ್ಮಡಿ ಪ್ರಮಾದವಾಗುವುದು. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ವಸಲ್ಲಮರ ದಾಸರಲ್ಲಿ, ಶಿಷ್ಯರಲ್ಲಿ ಮತ್ತು ಆಧ್ಯಾತ್ಮಿಕ ಪುತ್ರರಲ್ಲಿ ನುಬುವ್ವತನ್ನು ಜಾರಿಯಾಗುವುದನ್ನು ಅಲ್ಲಗಳೆಯುವ ಜನರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ದಾಸರಲ್ಲಿ, ಶಿಷ್ಯರಲ್ಲಿ ಮತ್ತು ಆಧ್ಯಾತ್ಮಿಕ ಪುತ್ರರಲ್ಲಿ ಸೇರದಂತಹ ಮತ್ತು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶರೀಅತಿನ ನೊಗವನ್ನು ತನ್ನ ಕುತ್ತಿಗೆಗೆ ಇರಿಸದೆ ಹಝ್ರತ್ ಮೂಸಾ ಅಲೈಹಿಸ್ಸಲಾಮರ ಶರೀಅತಿನ ನೊಗವನ್ನು ತನ್ನ ಕುತ್ತಿಗೆಗೆ ಇರಿಸಿದ ಹಝ್ರತ್ ಈಸಾ ಅಲೈಹಿಸ್ಸಲಾಮರನ್ನು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಆಗಮಿಸುವ ಪ್ರವಾದಿ ಎಂದು ಅಂಗೀಕರಿಸುತ್ತಾರೆ. ಏನು, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದಾಸರಿಗೆ, ಶಿಷ್ಯರಿಗೆ ಮತ್ತು ಆಧ್ಯಾತ್ಮಿಕ ಪುತ್ರರಿಗೆ ಈ ಗೌರವ ದೊರಕುವುದನ್ನು ಅಂಗೀಕರಿಸಲು ಆಗುವುದಿಲ್ಲವೇ?

ಸ್ನೇಹಿತರೇ, ನೀವು ಯೋಚಿಸಿರಿ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರ ನಂತರ ಬನೀ ಇಸ್ರಾಈಲ್ ಜನಾಂಗದಲ್ಲಿ ಹಿಂದೆ ಆಗಮಿಸಿದ ಒಬ್ಬ ನಬಿ (ಆ ನಬಿಗೆ ಪ್ರವಾದಿತ್ವ ದೊರೆತುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನುಬುವ್ವತಿನ ಕೃಪಾಕಟಾಕ್ಷಕ್ಕೆ ಒಳಗಾಗಿ ಅಲ್ಲ) ತನ್ನ ಹಿಂದಿನ ನುಬುವ್ವತಿನ ಸ್ಥಾನದಲ್ಲಿ ಆಸೀನನಾಗಿ ಮುಸ್ಲಿಮರಿಗೆ ಇಮಾಮ್ ಆಗಿ ಆಗಮಿಸಲು ಸಾಧ್ಯವಿದ್ದರೆ ಮತ್ತು ನಬಿ ಎಂದು ಕರೆಯಲ್ಪಡಬಹುದಾಗಿದ್ದರೆ ಓರ್ವ ವ್ಯಕ್ತಿ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತಿನಿಂದ ಅನುಗ್ರಹ ಪಡೆದು ಅವರ ಪ್ರಕಾಶದಿಂದ ಪ್ರಕಾಶ ಪಡೆದು ಏಕೆ ನಬಿಯಾಗಲಾರ?

ಅತ್ಯಂತ ಖೇದಕರ ಸಂಗತಿಯೇನೆಂದರೆ ದಾರಿ ತಪ್ಪಿದ ನಮ್ಮ ಸ್ನೇಹಿತರು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಘನತೆಯನ್ನು ಗುರುತಿಸಿಯೇ ಇಲ್ಲ. ಹಝ್ರತ್ ಮೂಸಾ ಅಲೈಹಿಸ್ಸಲಾಮ್ ಮತ್ತು ಬನೀ ಇಸ್ರಾಈಲ್ ಜನಾಂಗಕ್ಕೆ ಅವರು ಉಪಕಾರ ಸ್ಮರಣೆ ಮಾಡುವವರನ್ನಾಗಿ ಮಾಡಬೇಕೆಂದು ಈ ಜನರು ಬಯಸುತ್ತಾರೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದಾಸರಲ್ಲಿ ಮತ್ತು ಶಿಷ್ಯರಲ್ಲಿ ಯಾರಾದರೂ ಅವರ ಪ್ರಕಾಶದಿಂದ ಪ್ರಕಾಶ ಪಡೆದು ನುಬುವ್ವತ್ ಪಡೆಯುವುದನ್ನು ಅವರು ಇಷ್ಟಪಡುವುದಿಲ್ಲ.

ಯಾರೋ ಹೀಗೆ ಹೇಳಿದುದು ಸತ್ಯವಾಗಿದೆ:

من از بیگانگان هرگز نه نالم
که با من هرچه کرد آن آشنا کرد

"ನಾನು ಅನ್ಯರಿಂದ ಎಂದೂ ದುಃಖಿಕ್ಕೆ ಗುರಿಯಾಗಲಿಲ್ಲ. ನನಗೆ ಉಂಟಾದ ದುಃಖಗಳೆಲ್ಲ ನನ್ನ ಸ್ನೇಹಿತರಿಂದಲೇ ಆಗಿದೆ."

## ಹಝ್ರತ್ ಇಮಾಮ್ ಶಿಅರಾನಿ ಮತ್ತು ಇಮಾಮ್ ಅಲಿ ಬಿನ್ ಮುಹಮ್ಮದ್ ಅಲ್ ಖಾರಿ ಅವರ ಉಲ್ಲೇಖಗಳು

ಹಝ್ರತ್ ಇಮಾಮ್ ಶಿಅರಾನಿ (ನಿಧನ : 976 ಹಿಜರಿ) ಮತ್ತು ಹಝ್ರತ್ ಇಮಾಮ್ ಅಲಿ ಬಿನ್ ಮುಹಮ್ಮದ್ ಸುಲ್ತಾನುಲ್ ಖಾರಿ (ನಿಧನ : 1014 ಹಿಜರಿ) ಇವರಿಬ್ಬರು ಬರೆದುದು ಮುಂಚೆ ವಿವರಿಸಲಾಗಿದೆ. ಆದ್ದರಿಂದ ಅವುಗಳನ್ನು ನಾನು ಪುನಃ ಬರೆಯುವುದಿಲ್ಲ. ಓದುಗರು ಇಚ್ಛಿಸುವುದಾದರೆ, "ಲಾನಬಿಯ್ಯ ಬಅ್‌ದೀ" ಮತ್ತು "ಲೌ ಆಶ ಇಬ್ರಾಹೀಮ ಲ ಕಾನ ಸಿದ್ದೀಖನ್ ನಬಿಯ್ಯ" ಎಂಬ ಹದೀಸುಗಳ ಕುರಿತು ಈ ಹಿಂದೆ ಬರೆದ ವಿವರಣೆಗಳನ್ನು ಪುನಃ ಓದಿರಿ.

## ಮುಜದ್ದಿದ್ ಅಲ್‌ಫಿಸ್ಸಾನಿ ರಹ್ಮತುಲ್ಲಾಹಿ ಅಲೈಹಿ ಹೇಳಿಕೆ

ಹಝ್ರತ್ ಶೇಖ್ ಅಹ್ಮದ್ ಸರ್‌ಹಿಂದಿ ಮುಜದ್ದಿದೆ ಅಲ್‌ಫಿಸ್ಸಾನಿ (ನಿಧನ : 1034 ಹಿಜರಿ) ಅವರು ಅವರಿಗಿಂತ ಮೊದಲು ಆಗಮಿಸಿದ ಎಲ್ಲಾ ಮುಜದ್ದಿದರಿಗಿಂತ ಶ್ರೇಷ್ಠರೆಂದು ಗಣಿಸಲ್ಪಡುತ್ತಾರೆ.

ಅವರು ಹೀಗೆ ಹೇಳಿದರು:

"حصولِ کمالاتِ نبوّت مرتابعاں رابطریقِ تبعیت و وراثت بعداز بعثتِ خاتم الرسل علیہ وعلی جمیع الانبیاء الصلوٰۃ و التحیات منافی خاتمیتِ اُو نیست فلاتکن من الممترین"

ಅಂದರೆ, ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಯಾಯಿಗಳು ಅವರನ್ನು ಅನುಸರಿಸುವುದರ ಮೂಲಕ ಮತ್ತು ಅವರ ಆಧ್ಯಾತ್ಮಿಕ ವಾರೀಸುದಾರರಾಗಿ ನುಬುವ್ವತಿನ ಶ್ರೇಷ್ಠತೆಗಳನ್ನು ಗಳಿಸುವುದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಾತಮ್ ಪದವಿಗೆ ವಿರುದ್ಧವಾದುದು ಅಲ್ಲ. ನೀವು ಈ ಬಗ್ಗೆ ಶಂಕಿಸುವವರಾಗಬೇಡಿರಿ."

(ಮಕ್ತೂಬಾತೆ ಅಹ್ಮದಿಯ್ಯ ಸಂಪುಟ -1 ಮಕ್ತೂಬ್ 271)

ಏನು, ಹಝ್ರತ್ ಮುಜದ್ದಿದ್ ಅಲ್‌ಫಿಸ್ಸಾನಿಯವರು ಸೂಚಿಸಿದ ಅಭಿಪ್ರಾಯ ಅಹ್ಮದಿಯಾ ಜಮಾಅತಿನ ಅಭಿಪ್ರಾಯಕ್ಕೆ ಸರಿ ಹೋಲುವುದಿಲ್ಲವೇ? ನಾವು ಹೇಳುವುದು ಇಷ್ಟು ಮಾತ್ರವಾಗಿದೆ: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಆಗಮನದ ಬಳಿಕ ಶರೀಅತ್ ತರುವ ನುಬುವ್ವತ್ ಮತ್ತು ನೇರವಾಗಿ ದೊರಕುವ ನುಬುವ್ವತ್‌ಗಳ ಬಾಗಿಲು ಎಂದೆಂದಿಗೂ ಮುಚ್ಚಲ್ಪಟ್ಟಿದೆ. ಆದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶಿಷ್ಯತ್ವದ ಮೂಲಕ, ಅವರನ್ನು ಅನುಸರಿಸಿದುದರ ಅನುಗ್ರಹ ಮೂಲಕ, ಆಧ್ಯಾತ್ಮಿಕ ವಾರೀಸುದಾರಿಕೆಯ ಮೂಲಕ ದೊರಕುವ ನುಬುವ್ವತಿನ ಬಾಗಿಲು ಖಂಡಿತವಾಗಿಯೂ ಮುಚ್ಚಲ್ಪಟ್ಟಿಲ್ಲ. ಇದು ಎಂತಹ ನುಬುವ್ವತೆಂದರೆ ಅದರ ಮೂಲಕ ನಮ್ಮ ನೇತಾರರಾದ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದೊರೆತ ಶ್ರೇಷ್ಠ ಪದವಿಯು ಸಾಬೀತಾಗುತ್ತದೆ. ಅವರ ದಾಸರು ಮತ್ತು ಶಿಷ್ಯರು ನುಬುವ್ವತ್ ಪದವಿ ಪಡೆಯುವುದು ಅವರ ಶ್ರೇಷ್ಠತೆಯನ್ನು ಸಾಬೀತುಗೊಳಿಸುತ್ತದೆ.

ನಾವು ಸಹ ಮುಜದ್ದಿದ್ ಅಲ್‌ಫಿಸ್ಸಾನಿಯವರ ಹಾಗೆ ಇದನ್ನೇ ಹೇಳುತ್ತೇವೆ:

ಇದೇ ಸತ್ಯವಾಗಿದೆ. ನೀವು ಸಂದೇಹಪಡುವವರಾಗಬೇಡಿರಿ.

## ಹಝ್ರತ್ ಶಾಹ್ ವಲಿಯುಲ್ಲಾಹ್ ಮುಹದ್ದಿಸ್ ದೆಹ್ಲವಿ ಹೇಳಿಕೆ

ಹಝ್ರತ್ ಶಾಹ್ ವಲಿಯುಲ್ಲಾಹ್ ಮುಹದ್ದಿಸ್ ದೆಹ್ಲವಿ (ನಿಧನ : 1176 ಹಿಜರಿ) ಹನ್ನೆರಡನೆಯ ಶತಮಾನದ ಮುಜದ್ದಿದ್ ಆಗಿದ್ದರು. ಪಾಕಿಸ್ತಾನ ಮತ್ತು ಭಾರತದ ಮುಸ್ಲಿಮರು ಅವರ ಹಿರಿಮೆಯನ್ನು ಗುರುತಿಸಿರುವರು. ಅವರು ಹೀಗೆ ಹೇಳಿದ್ದಾರೆ:

خُتم بہ النّبیّون ' ے لا یوجد بعدہٗ ما بأمرہ اللہ سُبحانہٗ بالتشریع علی الناس - (تفہیماتِ الٰہیہ تفہیم ۵۳)

ಅಂದರೆ, "ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಲ್ಲಿ ನುಬುವ್ವತ್ ಕೊನೆಗೊಂಡಿದೆ ಎಂದು ಹೇಳಿದುದರ ತಾತ್ಪರ್ಯ: ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಅಲ್ಲಾಹನು ಯಾರನ್ನೂ ಹೊಸ ಶರೀಅತ್‌ನೊಂದಿಗೆ ಕಳುಹಿಸಲಾರನು ಎಂದಾಗಿದೆ." (ತಫ್‌ಹೀಮಾತೆ ಇಲಾಹಿಯ್ಯ - ತಫ್‌ಹೀಮ್ 53)

ಹಝ್ರತ್ ಶಾಹ್ ವಲಿಯುಲ್ಲಾಹ್(ರಹ್)ರವರ ಈ ಹೇಳಿಕೆಗೆ ಇನ್ನಷ್ಟು ವಿವರಣೆ ಅಗತ್ಯವಿಲ್ಲ. ಹಝ್ರತ್ ಶಾಹ್ ಸಾಹೇಬರು ಹೊಸ ಶರೀಅತಿನ ಅವತೀರ್ಣಗೊಳ್ಳುವಿಕೆಯ ಬಾಗಿಲು ಮಾತ್ರ ಮುಚ್ಚಲ್ಪಟ್ಟಿದೆ ಎಂದು ಹೇಳಿರುತ್ತಾರೆ. ನಮ್ಮ ವಿಶ್ವಾಸವೂ ಇದೇ ಆಗಿದೆ.

ಪ್ರತಿಯೊಬ್ಬ ಪ್ರವಾದಿ ಹೊಸ ಶರೀಅತನ್ನು ತರುವುದು ಆವಶ್ಯಕವಲ್ಲವೆಂದು ನಾವು ಈ ಮೊದಲು ಸಾಬೀತುಗೊಳಿಸಿದ್ದೇವೆ. ಹಝ್ರತ್ ಮುಹ್ಯುದ್ದೀನ್ ಇಬ್ನು ಅರಬಿ(ರಹ್) ಹೇಳುವ ಪ್ರಕಾರ ಶರೀಅತ್ ನುಬುವ್ವತಿನ ಒಂದು ಭಾಗ (ಜುಝ್ಉ) ಮಾತ್ರವಾಗಿದೆ. ಅದುವೇ ನುಬುವ್ವತ್ ಅಲ್ಲ. ಲೋಕದಲ್ಲಿ ಅನೇಕ ಪ್ರವಾದಿಗಳು ಯಾವುದೇ ಶರೀಅತಿನೊಂದಿಗೆ ಬಂದಿರಲಿಲ್ಲ ಎಂದು ಪವಿತ್ರ ಖುರ್‌ಆನ್ ಮತ್ತು ಚರಿತ್ರೆಯಿಂದ ತಿಳಿದು ಬರುತ್ತದೆ. ಅವರು ತಮಗಿಂತ ಮೊದಲು ಅವತೀರ್ಣವಾದ ಶರೀಅತಿನ ಸೇವೆಗಾಗಿ ಕಳುಹಿಸಲ್ಪಟ್ಟಿದ್ದರು. ಶಾಹ್ ವಲಿಯುಲ್ಲಾಹ್‌ರವರನ್ನು ಗೌರವ ಭಾವದಿಂದ ಕಾಣುವ ಪ್ರತಿಯೊಬ್ಬ ವ್ಯಕ್ತಿಗೆ ಅವರ ಮಾತು ನಿರ್ಣಾಯಕವಾಗಿದೆ. ಹಝ್ರತ್ ಶಾಹ್ ಸಾಹೇಬರು ಮತ್ತು ಅವರ ಕುಟುಂಬ ಭಾರತ-ಪಾಕಿಸ್ತಾನದ ಮುಸ್ಲಿಮರ ಆದರಕ್ಕೆ ಪಾತ್ರವಾಗಿದೆ. ನೀವು ಇಚ್ಛಿಸುವುದಾದರೆ ಅವರ ಸಾಕ್ಷ್ಯವನ್ನು ಅಂಗೀಕರಿಸಿರಿ.

## ಹಝ್ರತ್ ಮೌಲವಿ ಮುಹಮ್ಮದ್ ಖಾಸಿಮ್ ಸಾಹೇಬ್ ನಾನೂತ್‌ವೀ ಸಾಕ್ಷ್ಯ

ಹಝ್ರತ್ ಮೌಲವಿ ಮುಹಮ್ಮದ್ ಖಾಸಿಮ್ ಸಾಹೇಬ್ ನಾನೂತ್‌ವೀ (ನಿಧನ :1889 ಇಸವಿ) ಮದ್‌ರಸ ದಾರುಲ್ ಉಲೂಮ್ ದೇವ್ ಬಂದ್ ಇದರ ಸ್ಥಾಪಕರಾಗಿದ್ದರು. ಅವರು ಹೀಗೆ ಬರೆದಿದ್ದಾರೆ:

"ಸಾಮಾನ್ಯ ಜನರ ಅಭಿಪ್ರಾಯ ಪ್ರಕಾರ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಖಾತಮ್ ಆಗಿರುವುದು ಅವರ ಕಾಲ ಹಿಂದಿನ ಪ್ರವಾದಿಗಳ ಕಾಲದ ನಂತರದ್ದು ಹಾಗೂ ಅವರು ಎಲ್ಲರಿಗಿಂತಲೂ ಕೊನೆಗೆ ಬಂದ ಪ್ರವಾದಿ ಆಗಿದ್ದಾರೆ ಎಂಬ ಅರ್ಥದಲ್ಲಾಗಿದೆ. ಆದರೆ ಬುದ್ಧಿಶಾಲಿಗಳಿಗೆ ತೋರುವುದೇನೆಂದರೆ ಒಂದು ಕಾಲದ ಮುಂದೆ ಅಥವಾ ಹಿಂದೆ ಆಗಮಿಸುವುದರಲ್ಲಿ ಯಾವ ಶ್ರೇಷ್ಠತೆಯೂ ಇರುವುದಿಲ್ಲ. ವಲಾಕಿನ್ ರಸೂಲಲ್ಲಾಹಿ ವ ಖಾತಮನ್ನಬಿಯ್ಯೀನ ಎಂದು ಹೇಳಿದುದು ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಹೊಗಳಲಿಕ್ಕಾಗಿರುವಾಗ ಈ ಅರ್ಥ ಹೇಗೆ ತಾನೆ ಸರಿಯಾಗಬಹುದು? ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರನ್ನು ಹೊಗಳುವ ಉದ್ದೇಶದಿಂದ ಈ ಪದ ಬಳಸಲಾಗಿಲ್ಲವಾದರೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್ ಅಂತಿಮವಾಗಿ ಬಂದ ಪ್ರವಾದಿ ಎಂದು ಅರ್ಥ ಹೇಳುವುದು ಸರಿಯಾಗಬಹುದು. ಆದರೆ ನನಗೆ ತಿಳಿದಿರುವುದೇನೆಂದರೆ ಮುಸ್ಲಿಮರಲ್ಲಿ ಯಾರಿಗೂ ಈ ಸಂಗತಿ ಇಷ್ಟಕರವಾಗಲಾರದು."

(ತಹ್‌ಝೀರುನ್ನಾಸ್ - ಪುಟ 3)

ಅದೇ ಪುಸ್ತಕದಲ್ಲಿ ಅವರು ಮತ್ತೊಂದೆಡೆಯಲ್ಲಿ ಹೀಗೆ ಬರೆದಿದ್ದಾರೆ:

"ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ

ಸಲ್ಲಮ್‌ರವರ ನಂತರ ಯಾವುದಾದರೂ ಪ್ರವಾದಿ ಆಗಮಿಸುವುದಾಗಿ ಊಹಿಸುವುದಾದರೂ ಸಹ ಹಾಗೆ ಪ್ರವಾದಿ ಆಗಮಿಸುವುದರಿಂದ ಖಾತಮಿಯ್ಯತೆ ಮುಹಮ್ಮದೀಗೆ (ಮುಹಮ್ಮದ್‌ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಾತಮುನ್ನಬಿಯ್ಯೀನ್ ಪದವಿಗೆ) ಯಾವುದೇ ವ್ಯತ್ಯಾಸ ಉಂಟಾಗಲಾರದು." (ತಹ್‌ಝೀರುನ್ನಾಸ್ - ಪುಟ 28)

ದೇವ್‌ಬಂದ್ ಮದ್‌ರಸದ ವಿದ್ವಾಂಸರು ತಮ್ಮ ಮದ್‌ರಸದ ಆದರಣೀಯ ಸ್ಥಾಪಕರ ಈ ಉಲ್ಲೇಖದ ಬಗ್ಗೆ ಚಿಂತಿಸುವರೇ? ಅವರ ಗೌರವಾನ್ವಿತ ಹಿರಿಯರು ಖತಮುನ್ನುಬುವ್ವತ್ ಕುರಿತು ತೋರಿದ ಹೃದಯ ವೈಶಾಲ್ಯತೆ ಮತ್ತು ವಿಶಾಲ ದೃಷ್ಟಿಯನ್ನು ಅವರು ಸಹ ತೋರಿಸುವರೇ?

ಈ ಉಲ್ಲೇಖದಲ್ಲಿ ಮೌಲಾನ ನಾನೂತ್‌ವೀಯವರು ಸಂಶಯದ ರೂಪದಲ್ಲಿ ಮಾತ್ರ ಪ್ರಸ್ತಾಪಿಸಿದ್ದಾರೆ ಎಂದು ಯಾರಾದರೂ ಆಕ್ಷೇಪಿಸುವುದಾದರೆ ಮತ್ತು ಮೌಲಾನರವರು ಬೇರೆ ಕಡೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನಂತರ ಯಾವುದೇ ಪ್ರವಾದಿ ಬರಲಾರರೆಂದು ಹೇಳಿದ್ದಾರೆ ಎಂದು ಸಹ ಯಾರಾದರೂ ಹೇಳುವುದಾದರೆ ನಮ್ಮ ಉತ್ತರವೇನೆಂದರೆ:

ನಾವು ಈ ಉಲ್ಲೇಖವನ್ನು ನಿಮ್ಮ ಮುಂದೆ ಇರಿಸಿದುದರ ಉದ್ದೇಶ "ಪ್ರವಾದಿಯೊಬ್ಬರು ಬರಲಿದ್ದಾರೆ" ಎಂದು ಮೌಲಾನ ಹೇಳಿದ್ದಾರೆ ಎಂದು ಸೂಚಿಸಲಿಕ್ಕಲ್ಲ. "ಖಾತಮುನ್ನಬಿಯ್ಯೀನ್" ಎಂಬ ಖುರ್‌ಆನ್ ವಚನ ಮತ್ತು "ಲಾನಬಿಯ್ಯ ಬಅ್‌ದೀ" ಎಂಬ ಹದೀಸು ಇದ್ದರೂ ಮೌಲಾನರವರ ವೀಕ್ಷಣದಲ್ಲಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನಂತರ "ಪ್ರವಾದಿ ಬರುವ ಸಾಧ್ಯತೆ ಇದೆ" ಎಂದು ಸೂಚಿಸಲು ಮಾತ್ರ ನಾವು ಈ ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸಿದ್ದೇವೆ.

ನಾನು ಅಲ್ಲಾಹನ ಅನುಗ್ರಹದಿಂದ ಇಸ್ಲಾಮಿನ ವಿವಿಧ ಕಾಲ ಘಟ್ಟಗಳಿಗೆ ಸಂಬಂಧಿಸಿ ಸಾಕ್ಷ್ಯಾಧಾರಗಳನ್ನು ನೀಡಿದ್ದೇನೆ. ಇಸ್ಲಾಮಿನ ಆರಂಭದ ಕಾಲ ಘಟ್ಟದಿಂದ ಪ್ರಾರಂಭಿಸಿ ಆಧುನಿಕ ಕಾಲ ಘಟ್ಟದ ತನಕದ ಹಲವು ಮಹಾನುಭಾವರ ಅಭಿಪ್ರಾಯಗಳನ್ನು ನಾನು ಕ್ರೋಢೀಕರಿಸಿ ನಿಮ್ಮ ಮುಂದೆ ಇರಿಸಿದ್ದೇನೆ. ಪ್ರಥಮ ಉಲ್ಲೇಖ ಹಝ್‌ರತ್ ಅಲಿ ರಝಿಯಲ್ಲಾಹು ಅನ್‌ಹುರವರದ್ದಾಗಿದೆ. ಕೊನೆಯ ಉಲ್ಲೇಖದ ಕಾಲ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನ ಆಜ್ಞೆಯಂತೆ ಅಹ್ಮದಿಯಾ ಜಮಾಅತಿಗೆ ತಳಹದಿ ಹಾಕಿದ ಕಾಲವಾಗಿದೆ.

ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ಸಹಾಬಿಗಳ ಕಾಲದ ನಂತರ ಮುಸ್ಲಿಮರೆಲ್ಲರೂ ಶರಿಯತೇತರ ನುಬುವ್ವತಿನ ಬಾಗಿಲು ತೆರೆದಿದೆ ಎಂದು ನಂಬುತ್ತಾ ಇದ್ದರೆಂದು ನಾನು ಖಂಡಿತವಾಗಿಯೂ ವಾದಿಸುವುದಿಲ್ಲ. ಹೀಗೆ ನಂಬಿಕೆ ಇದ್ದುದಾದರೆ ಭಿನ್ನಾಭಿಪ್ರಾಯ ತಲೆದೋರುತ್ತಿರಲಿಲ್ಲ. ಆದರೆ ನಾನು ಖಂಡಿತವಾಗಿಯೂ ಹೇಳುವುದೇನೆಂದರೆ ಮತ್ತು ಬಲಿಷ್ಠ ಸಾಕ್ಷ್ಯಾಧಾರಗಳಿಂದ ಸ್ಪಷ್ಟಪಡಿಸಲು ಇಚ್ಛಿಸುವುದೇನೆಂದರೆ: ಇಸ್ಲಾಮ್ ಧರ್ಮದ ಚರಿತ್ರೆಯಲ್ಲಿ ಪ್ರತಿಯೊಂದು ಕಾಲಘಟ್ಟದಲ್ಲಿ ಯಾವುದಾದರೊಬ್ಬ ಮುಸ್ಲಿಮ್ ಮಹಾನುಭಾವರು ಈ ನಂಬಿಕೆಯನ್ನು ಬಹಿರಂಗವಾಗಿ ಸೂಚಿಸುತ್ತಾ ಇದ್ದರು. ಅದೇನೆಂದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು ಖಾತಮುನ್ನಬಿಯ್ಯೀನ್ ಆದುದು ಶರಿಯತೇತರ ನುಬುವ್ವತಿನ ಮಾರ್ಗದಲ್ಲಿ ತಡೆಯಾಗಿರುವುದಿಲ್ಲ. ವಾಸ್ತವಿಕ ಸಂಗತಿ ಏನೆಂದರೆ ಮಾನವರ ನಾಯಕರಾದ ಆ ಪ್ರವಾದಿವರ್ಯರ ಆಗಮನದ ನಂತರ ನುಬುವ್ವತಿನ ಪ್ರಕಾಶದ ಮಾರ್ಗ ಹೆಚ್ಚು ವಿಶಾಲವಾಗಿ ತೆರೆದಿದೆ.

## ಮುಸ್ಲಿಮರ ಒಮ್ಮತದ ಸಾಕ್ಷ್ಯ

ಮುಸ್ಲಿಮರೆಲ್ಲರ ನಂಬಿಕೆ ಏನೆಂದರೆ: ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈ ಹಿ ವ ಸಲ್ಲಮ್‌ರವರು ಖಾತಮುನ್ನಬಿಯ್ಯೀನ್ ಆಗಿದ್ದರೂ ಕನಿಷ್ಠ ಒಬ್ಬ ಶರಿಯತೇತರ ಪ್ರವಾದಿ ಮುಸ್ಲಿಮರಲ್ಲಿ ಆಗಮಿಸಲಿರುವರು. ಇದರ ವಿವರಣೆ ಹೀಗೆ: ಮುಸ್ಲಿಮರೆಲ್ಲರೂ ಒಂದು ಭವಿಷ್ಯವಾಣಿಯ ಕುರಿತು ಅರಿತಿದ್ದಾರೆ. ಲೋಕದ ಅಂತಿಮ ಕಾಲಘಟ್ಟದಲ್ಲಿ ಹಝ್‌ರತ್ ಈಸಾ ಅಲೈಹಿಸ್ಸಲಾಮ್ ಆಗಮಿಸುವರು. ಅವರ ಮೂಲಕ ಇಸ್ಲಾಮಿಗೆ ಅಸಾಧಾರಣ ಶಕ್ತಿ ಲಭಿಸುವುದು. ಇಸ್ಲಾಮ್ ಧರ್ಮ ಇತರ ಎಲ್ಲಾ ಧರ್ಮಗಳ ಮೇಲೆ ಜಯಗಳಿಸುವುದು. ದಜ್ಜಾಲ್ ಕೊಲ್ಲಲ್ಪಡುವನು. ಶಿಲುಬೆಯು ಮುರಿದು ಹಾಕಲ್ಪಡುವುದು. ಅವಿಶ್ವಾಸಿಗಳು ಪರಾಜಿತರೂ ಶಿಕ್ಷೆಗೊಳಪಟ್ಟವರೂ ಆಗುವರು. ಆಂತರಿಕ ಭಿನ್ನಾಭಿಪ್ರಾಯಗಳ ಕುರಿತು ಸತ್ಯಸಂಧವಾದ ತೀರ್ಪು ನೀಡಲ್ಪಡುವುದು, ಇತ್ಯಾದಿ ಇತ್ಯಾದಿ.

ಈ ಭವಿಷ್ಯವಾಣಿ ಸೂಚ್ಯವಾಗಿ ಪವಿತ್ರ ಖುರ್‌ಆನ್‌ನಲ್ಲಿ (ಸೂರತುನ್ನೂರ್: ವಚನ 56) ಮತ್ತು ಸವಿಸ್ತಾರವಾಗಿ ಹದೀಸಿನ ಪ್ರತಿಯೊಂದು ಗ್ರಂಥದಲ್ಲಿ ಇದೆ. ಈ ಭವಿಷ್ಯವಾಣಿಯನ್ನು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈ ಹಿ ವಸಲ್ಲಮ್ ಎಷ್ಟು ಒತ್ತಿ ಹೇಳಿದ್ದಾರೆಂದರೆ ಈ ಭವಿಷ್ಯವಾಣಿ ಪ್ರಥಮ ಸ್ಥಾನದಲ್ಲಿದೆ. ಮುಸ್ಲಿಮರಲ್ಲಿ ಆಬಾಲವೃದ್ಧರು ಇದರ ಕುರಿತು ಅರಿತಿದ್ದಾರೆ.

ಈ ಭವಿಷ್ಯವಾಣಿಯ ಕುರಿತು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರಿಗೆ ಎಷ್ಟು ದೃಢ ವಿಶ್ವಾಸ ಇದ್ದಿತೆಂದರೆ ಅವರು ಅಲ್ಲಾಹನ ಹೆಸರಲ್ಲಿ ಪ್ರಮಾಣ ಮಾಡಿ ಹೀಗೆ ಹೇಳಿದ್ದಾರೆ:

والذی نفسی بیدہ لیوشکن ان ینزل فیکم ابن مریم حکماً عدلا فیکسر الصلیب و یقتل الخنزیر و یضع الجزیۃ

(صحیح بخاری کتاب بدء الخلق باب نزول عیسی ابن مریم)

ಅಂದರೆ, "ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಆ ಅಲ್ಲಾಹನಾಣೆ, ನಿಮ್ಮಲ್ಲಿ ಖಂಡಿತವಾಗಿಯೂ ಇಬ್ನುಮರ್‌ಯಮ್ ಆಗಮಿಸುವರು. ಅವರು ನ್ಯಾಯ ಪೂರ್ಣವಾಗಿ ತೀರ್ಪುನೀಡುವ ನ್ಯಾಯಾಧೀಶರಾಗಿ ಆಗಮಿಸುವರು. ಅವರು ಶಿಲುಬೆಯನ್ನು ಮುರಿಯುವರು. ಅವರು ಹಂದಿಯನ್ನು ಕೊಲ್ಲುವರು. ಅವರು ಜಿಝ್‌ಯ ತೆರಿಗೆಯನ್ನು ಸ್ಥಗಿತಗೊಳಿಸುವರು."

## ಹಝ್‌ರತ್ ಈಸಾ ಅಲೈಹಿಸ್ಸಲಾಮ್ ತನ್ನ ನುಬುವ್ವತ್‌ನೊಂದಿಗೆ ಆಗಮಿಸುವರು

ಹಝ್‌ರತ್ ಈಸಾ ಅಲೈಹಿಸ್ಸಲಾಮರ ಆಗಮನದ ಕುರಿತು ಮಹತ್ವಪೂರ್ಣ ಭವಿಷ್ಯವಾಣಿ ಮೇಲೆ ವಿವರಿಸಲಾಗಿದೆ. ಅಹ್ಮದಿಯಾ ಜಮಾಅತ್ ನಂಬುವುದೇನೆಂದರೆ ಈ ಭವಿಷ್ಯವಾಣಿ ಇಸ್ರಾಈಲ್ ಸಮುದಾಯಕ್ಕೆ ಆಗಮಿಸಿದ್ದ ಹಝ್‌ರತ್ ಈಸಾ ಅಲೈಹಿಸ್ಸಲಾಮರ ಪುನರಾಗಮನವನ್ನು ಸೂಚಿಸುವುದಿಲ್ಲ. ಅದಕ್ಕೆ ಪ್ರತಿಯಾಗಿ ಹಝ್‌ರತ್ ಈಸಾ ಅಲೈಹಿಸ್ಸಲಾಮರ ಹೋಲಿಕೆಯನ್ನು ಹೊಂದಿದ ಒಬ್ಬ ಮಹಾನುಭಾವರು ಮುಸ್ಲಿಮ್ ಸಮುದಾಯದಿಂದಲೇ ಆಗಮಿಸುವರು ಎಂದು ಈ ಭವಿಷ್ಯವಾಣಿ ಸೂಚಿಸುತ್ತದೆ. ಈ ಕಾಲದ ಇತರ ಮುಸ್ಲಿಮ್ ಪಂಗಡಗಳು

ನಂಬುವುದೇನೆಂದರೆ: ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಆರು ನೂರು ವರ್ಷಗಳ ಮೊದಲು ಆಗಮಿಸಿದ ಹಝ್‌ರತ್ ಈಸಾ ಅಲೈಹಿಸ್ಸಲಾಮರೇ ಪುನಃ ಆಗಮಿಸುವರು. ಅವರು ತಮ್ಮ ನುಬುವ್ವತ್‌ನೊಂದಿಗೆ ಆಗಮಿಸುವರು. ಅವರು ನುಬುವ್ವತ್ ಪದವಿಯನ್ನು ಕಳೆದುಕೊಳ್ಳಲಾರರು.

ಈ ಬಗ್ಗೆ ಇಮಾಮ್ ಜಲಾಲುದ್ದೀನ್ ಸುಯೂತಿ ಹೀಗೆ ಹೇಳಿದ್ದಾರೆ:

من قال بسلب نبوته كفر حقًا فانه نبيٌّ لا يذهب عنه

وصف النبوة۔ (بحوالہ حجج الكرامہ صفحہ ۴۳۱)

"ಅವರು (ಹಝ್‌ರತ್ ಈಸಾ ಅಲೈಹಿಸ್ಸಲಾಮ್) ನುಬುವ್ವತ್ ಪದವಿಯನ್ನು ಕಳೆದುಕೊಳ್ಳುವರು ಎಂದು ಹೇಳುವವನು ನಿಜವಾಗಿಯೂ ಕಾಫಿರ್ ಆಗಿರುವನು. ಅವರು ನಿಶ್ಚಯವಾಗಿಯೂ ಪ್ರವಾದಿಯಾಗಿರುವರು. ಈ ನುಬುವ್ವತ್ ಪದವಿ ಅವರಿಂದ ಎಂದೂ ಬೇರ್ಪಟ್ಟು ಹೋಗಲಾರದು."

(ಹುಜಜುಲ್ ಕಿರಾಮ - ಪುಟ 431)

ಅಂತಿಮ ಕಾಲ ಘಟ್ಟದಲ್ಲಿ ಹಝ್‌ರತ್ ಈಸಾ ಅಲೈಹಿಸ್ಸಲಾಮ್ ಆಗಮಿಸುವರೆಂದೂ ಅವರು ನಬಿಯಾಗಿ ಆಗಮಿಸುವರೆಂದೂ ನಂಬುವ ಮುಸ್ಲಿಮರು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನಂತರ ಒಬ್ಬ ಪ್ರವಾದಿಯ ಆಗಮನವನ್ನು ಅಂಗೀಕರಿಸುತ್ತಾರೆ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರ ನಂತರ ನುಬುವ್ವತಿನ ಬಾಗಿಲು ತೆರೆದಿದೆ ಎಂದು ಮುಸ್ಲಿಮ್ ಸಮುದಾಯ ಅಂಗೀಕರಿಸುತ್ತದೆ.

ಇತರ ಮುಸ್ಲಿಮರು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಆಗಮನದ ನಂತರ ನಿಸ್ಸಂಶಯವಾಗಿ ಒಬ್ಬ ಪ್ರವಾದಿಯ ಆಗಮನವನ್ನು ಒಪ್ಪಿಕೊಳ್ಳುತ್ತಾರಾದರೂ ಹಾಗೆ ಆಗಮಿಸುವ ಪ್ರವಾದಿ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಆರು ನೂರು ವರ್ಷಗಳ ಮೊದಲೇ ನುಬುವ್ವತ್ ಪದವಿ ಪಡೆದಿರುವುದರಿಂದ ಅವರ ಆಗಮನದಿಂದ ಖತಮುನ್ನಬುವ್ವತ್ ಮೇಲೆ ಯಾವುದೇ ಕುಂದು ಉಂಟಾಗುವುದಿಲ್ಲವೆಂದೂ ಆದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಗಮನದ ನಂತರ ಯಾರಾದರೂ ಪ್ರವಾದಿಯಾಗುವುದು ಖತಮುನ್ನುಬುವ್ವತ್‌ಗೆ ಕುಂದನ್ನುಂಟು ಮಾಡುವುದೆಂದೂ ಯಾರಾದರೂ ಹೇಳುವುದಾದರೆ ಅದಕ್ಕೆ ನಮ್ಮ ಉತ್ತರವೇನೆಂದರೆ:

ಇಲ್ಲಿ ಮೊದಲು ಜನಿಸುವ ಅಥವಾ ನಂತರ ಜನಿಸುವ ಪ್ರಶ್ನೆ ಇಲ್ಲ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನಂತರ ನಬಿಯಾಗಿ ಪ್ರಕಟವಾಗುವುದು ಮತ್ತು ನಬಿಯ ಕರ್ತವ್ಯಗಳನ್ನು ನಿರ್ವಹಿಸುವುದು ಇಲ್ಲಿ ಪ್ರಶ್ನೆಯಾಗಿದೆ. ಹಝ್‌ರತ್ ಈಸಾ ಅಲೈಹಿಸ್ಸಲಾಮ್ ಹಿಂದೆ ಜನಿಸಿದ್ದರೂ ಅವರು ನಿಮ್ಮ ನಂಬಿಕೆ ಪ್ರಕಾರ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನಂತರ ನಬಿಯಾಗಿ ಆಗಮಿಸಿ ನುಬುವ್ವತಿನ ಕರ್ತವ್ಯಗಳನ್ನು ನಿರ್ವಹಿಸುವರು. ನುಬುವ್ವತ್‌ನ ಬಾಗಿಲು ಎಲ್ಲಾ ರೀತಿಗಳಲ್ಲೂ ಮುಚ್ಚಲ್ಪಟ್ಟಿದ್ದರೆ ಹಝ್‌ರತ್ ಈಸಾ ಅಲೈಹಿಸ್ಸಲಾಮರ ಆಗಮನ ಖತಮುನ್ನುಬುವ್ವತ್‌ಗೆ ವಿರುದ್ಧವಾಗುತ್ತದೆ. ನೀವು ಈ ಸಂಗತಿ ಮನವರಿಕೆ ಮಾಡುತ್ತಿದ್ದರೆ ಎಷ್ಟು ಚೆನ್ನಾಗಿತ್ತು!

ನಿಜವಾದ ಸಂಗತಿಯೇನೆಂದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮುದಾಯಕ್ಕೆ ಸೇರದ, ಅವರ ಶಿಷ್ಯತ್ವ ಪಡೆಯದ, ಅವರಿಂದ ನುಬುವ್ವತಿನ ಅನುಗ್ರಹಕ್ಕೆ ಪಾತ್ರರಾಗದ ಹಝ್‌ರತ್ ಈಸಾ ಅಲೈಹಿಸ್ಸಲಾಮರು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ನಂತರ ಆಗಮಿಸುವುದರಿಂದ ಇಸ್ಲಾಮ್ ಧರ್ಮವೇ ಅವ್ಯವಸ್ಥಿತವಾಗುವುದು. ಅವರು ಆಗಮಿಸುವುದರಿಂದ ಖತಮುನ್ನಬುವ್ವತ್ ಬಾಕಿಯಾಗಿ ಉಳಿಯಲಾರದು. ನಮ್ಮ ನೇತಾರರಾದ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರು "ಆಖಿರುಲ್ ಅಂಬಿಯಾ" (ಅಂತ್ಯ ಪ್ರವಾದಿ) ಎಂದು ಕರೆಯಲ್ಪಡುವುದು ಸರಿಯಾಗಲಾರದು. ಆದರೆ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರವರ ಶಿಷ್ಯರಲ್ಲಿ ಮತ್ತು ಆಧ್ಯಾತ್ಮಿಕ ಪುತ್ರರಲ್ಲಿ ಒಬ್ಬರು ಅವರಿಂದ ಆಶೀರ್ವಾದ ಪಡೆದು ಅವರ ಪ್ರಕಾಶದಿಂದ ಪ್ರಕಾಶ ಪಡೆದು ನುಬುವ್ವತ್ ಪದವಿ ಪಡೆದರೆ ಅದರಿಂದ ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಖತಮುನ್ನುಬುವ್ವತ್ ಪದವಿಗೆ ಖಂಡಿತವಾಗಿಯೂ ಕುಂದುಂಟಾಗಲಾರದು. ಹಾಗೆ ಯಾರಾದರೂ ಪ್ರವಾದಿಯಾಗುವುದಾದರೆ ಅದು ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಉನ್ನತ ವೈಭವವನ್ನು ಸೂಚಿಸುತ್ತದೆ. ಹಝ್‌ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮ್‌ರವರ ಆಧ್ಯಾತ್ಮಿಕ ಸೂರ್ಯ ಅವರ ನಂತರ ಒಂದು ಆಧ್ಯಾತ್ಮಿಕ ಚಂದ್ರನನ್ನು ಸೃಷ್ಟಿಸಿ ಲೋಕದ ಅಂಧಕಾರವನ್ನು ಹೋಗಲಾಡಿಸಲು ಪ್ರಕಾಶವನ್ನು ಹರಡಿತೆಂದು ಅದು ಸೂಚಿಸುವುದು.

ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್
ವ ಅಲಾ ಆಲಿ ಮುಹಮ್ಮದಿನ್ ವ ಬಾರಿಕ್ ವ ಸಲ್ಲಿಮ್

**"ಯುಗರಶ್ಮಿ" ಗೆ ಚಂದಾದಾರರಾಗಿರಿ.**
**ವಾರ್ಷಿಕ ಚಂದಾ : ಅಂಚೆ ಮೂಲಕ ರೂ.30/-**

ಅಹ್ಮದಿಯಾ ವಾರ್ತೆಗಳು

# ಅಹ್ಮದಿಯಾ ಮುಸ್ಲಿಂ ಜಮಾಅತಿನ ಪ್ರಗತಿ

ಜುಲಾಯಿ 29, 30 ಮತ್ತು 31 ರಂದು ಲಂಡನಿನ ರಶ್ಮೋರ್ ಅರೀನ ಎಂಬಲ್ಲಿ 31ನೇ ಯು.ಕೆ. ಅಹ್ಮದಿಯಾ ವಾರ್ಷಿಕ ಸಮ್ಮೇಳನ ಜರಗಿತು. ಅಹ್ಮದಿಯಾ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು ಜುಲಾಯಿ 30ರಂದು ಮಾಡಿದ ಭಾಷಣದ ಆಯ್ದ ಭಾಗಗಳನ್ನು ಇಲ್ಲಿ ಕೊಡಲಾಗಿದೆ.

## ಅಹ್ಮದಿಯತ್ ಹೊಸ ರಾಷ್ಟ್ರಗಳಲ್ಲಿ

ಇಷ್ಟರವರೆಗೆ 181 ರಾಷ್ಟ್ರಗಳಲ್ಲಿ ಅಹ್ಮದಿಯಾ ಜಮಾಅತ್ ವ್ಯಾಪಿಸಿಕೊಂಡಿದೆ. ಅಹ್ಮದಿಯಾ ಸಂಘಟನೆಯನ್ನು ನಿರ್ಮೂಲನ ಮಾಡುವ ಉದ್ದೇಶದಿಂದ ವಿರೋಧಿಗಳು ಪರಿಶ್ರಮಿಸಿದರೂ - ಅಂದರೆ 1984ರಿಂದ ಇಷ್ಟರವರೆಗೆ 90 ಹೊಸ ರಾಷ್ಟ್ರಗಳಲ್ಲಿ ಸಂದೇಶ ತಲಪಿಸಲು ಜಮಾಅತಿಗೆ ಅಲ್ಲಾಹನು ಸೌಭಾಗ್ಯ ನೀಡಿದನು. ಈ ವರ್ಷ ಮೂರು ರಾಷ್ಟ್ರಗಳು ನಮ್ಮೊಂದಿಗೆ ಸೇರಿದವು. 1. ಜಿಬ್ರಾಲ್ಟರ್ 2. ಹಮಾಸ್ 3. ಸೈಂಟ್ ವಿನ್‌ಸೆಂಟ್.

## ಹೊಸ ಜಮಾಅತ್ ಶಾಖೆಗಳು

ದೇವಾನುಗ್ರಹದಿಂದ ಪಾಕಿಸ್ಥಾನ ಬಿಟ್ಟು ಲೋಕದಲ್ಲಿ ಈ ವರ್ಷ ಸ್ಥಾಪಿಸಲ್ಪಟ್ಟ ಹೊಸ ಜಮಾಅತ್ ಶಾಖೆಗಳ ಸಂಖ್ಯೆ 488 ಆಗಿದೆ. ಇದರ ಹೊರತು 497 ಹೊಸ ಸ್ಥಳಗಳಲ್ಲಿ ಅಹ್ಮದಿಯತಿನ ಗಿಡ ನೆಡಲ್ಪಟ್ಟಿದೆ. ಈ ವರ್ಷ ಒಟ್ಟು 985 ಸ್ಥಳಗಳಲ್ಲಿ ಅಹ್ಮದಿಯತ್ ರೂಪುಗೊಂಡು ಕಾರ್ಯಶೀಲವಾಗಿದೆ. ಕಳೆದ ವರ್ಷ ಇದು 542 ಆಗಿತ್ತು.

## ಮಸೀದಿಗಳು

ಈ ವರ್ಷ 319 ಮಸೀದಿಗಳನ್ನು ಅಲ್ಲಾಹನು ನಮಗೆ ದಯಪಾಲಿಸಿದನು. ಇದರಲ್ಲಿ 184 ಮಸೀದಿಗಳನ್ನು ಹೊಸತಾಗಿ ನಿರ್ಮಿಸಲಾಗಿದೆ. 135 ಮಸೀದಿಗಳು ನಮಗೆ ಲಭಿಸಿದವು. ಕಳೆದ ವರ್ಷ 74 ಮಸೀದಿಗಳು ನಿರ್ಮಿಸಲ್ಪಟ್ಟಿದ್ದವು. 88 ಮಸೀದಿಗಳು ನಮಗೆ ಲಭಿಸಿದ್ದವು. 1984ರಿಂದ ಇಷ್ಟರ ತನಕ ಒಟ್ಟು 13,476 ಮಸೀದಿಗಳ ಹೆಚ್ಚಳವುಂಟಾಗಿದೆ. ಇದರಲ್ಲಿ ಹೇಳಬೇಕಾದ ವಿಚಾರವೇನೆಂದರೆ 13,476 ಮಸೀದಿಗಳಲ್ಲಿ 11,695 ಮಸೀದಿಗಳನ್ನು ಇಮಾಂ ಮತ್ತು ಮುಖ್‌ತ್‌ದಿಗಳ ಸಮೇತ ಅಲ್ಲಾಹನು ಅಹ್ಮದಿಯಾ ಜಮಾಅತಿಗೆ ನೀಡಿದ್ದಾನೆ.

ಅಮೇರಿಕದಲ್ಲಿ ವೆಲ್ಲಿಂಗ್ರೋ ನಗರದಲ್ಲಿ ಒಂದು ಮಸೀದಿಯನ್ನು ನಿರ್ಮಿಸಲಾಗುತ್ತದೆ. ಅದರ ಕೆಲಸ ಕೊನೆಯ ಹಂತದಲ್ಲಿದೆ. ಇದು ಸೇರಿ ಅಮೇರಿಕದಲ್ಲಿ ನಮ್ಮ ಮಸೀದಿಗಳ ಸಂಖ್ಯೆ ದೇವಾನುಗ್ರಹದಿಂದ 16 ಆಗುವುದು. ಡೆಟ್ರೋಯಿಟ್‌ನಲ್ಲಿ ಸಹ ಮಸೀದಿ ನಿರ್ಮಾಣ ಕಾರ್ಯ ನಡೆಯುತ್ತಿದೆ. ವೆರ್ಜಿನಿಯಾದಲ್ಲಿ ಸಹ ಮಸೀದಿ ನಿರ್ಮಾಣ ಕಾರ್ಯ ಶೀಘ್ರದಲ್ಲೇ ಆರಂಭವಾಗುವುದು.

ಕೆನಡದಲ್ಲಿ ಖಲೀಫರು ತನ್ನ ಪರ್ಯಟನ ವೇಳೆಯಲ್ಲಿ ಮೂರು ಮಸೀದಿಗಳಿಗೆ ಶಂಕು ಸ್ಥಾಪನೆ ಮಾಡಿದ್ದರು. ವೆಂಕೋವರ್‌ನಲ್ಲಿ ಬೈತುರ್ರಹ್ಮಾನ್ ಮಸೀದಿಯ ಪಕ್ಕದಲ್ಲಿ ಮಿಶನ್ ಹೌಸ್ ನಿರ್ಮಿಸಲಾಗುವುದು. ಆಫೀಸುಗಳೂ ಗೆಸ್ಟ್‌ಹೌಸ್‌ಗಳೂ ನಿರ್ಮಿಸಲ್ಪಡುವುವು. ಮೂರೂ ಮುಕ್ಕಾಲು ಎಕರೆ ಸ್ಥಳದಲ್ಲಿ ಈ ನಿರ್ಮಾಣಕಾರ್ಯ ನಡೆಯುವುದು. ಮಸೀದಿಯ ವಿಸ್ತೀರ್ಣ 20,000 ಚದರ ಅಡಿಗಳಾಗಿವೆ. ಇನ್ನೊಂದು ಮಸೀದಿ ಕಲ್ಗರಿಯ ಬೈತುನ್ನೂರ್ ಆಗಿದೆ. ಅಲ್ಲಿಯೂ ಮಸೀದಿಯ ಹತ್ತಿರ ಮಿಶನ್ ಹೌಸ್, ಗೆಸ್ಟ್‌ಹೌಸ್ ಮತ್ತು ಹಾಲ್ ನಿರ್ಮಿಸಲಾಗುತ್ತದೆ. ಅದರ ವಿಸ್ತೀರ್ಣ 40,000 ಚದರ ಅಡಿಗಳು. ಕೆನಡದಲ್ಲಿ ಈಗ ಇರುವ ಮಸೀದಿಗಳಲ್ಲಿ ಈ ಮಸೀದಿ ಅತಿ ದೊಡ್ಡದಾಗಿರುವುದು. ಬ್ರಾಂಟನಿಯಲ್ಲಿ ಮೂರನೇ ಮಸೀದಿಗೆ ಶಿಲಾಸ್ಥಾಪನೆ ಮಾಡಲಾಯಿತು. ಇದು ಟೊರೆಂಟೋದ ಸಮೀಪದಲ್ಲಿದೆ. ಇದರ ವಿಸ್ತೀರ್ಣ 12,000 ಚದರ ಅಡಿಗಳಾಗಿವೆ. ಈ ವರ್ಷ ಕೆನಡ ಜಮಾಅತ್ ಡೊರ್‌ಹಂ ಎಂಬಲ್ಲಿ 13,000 ಚದರ ಅಡಿ ವಿಸ್ತೀರ್ಣವಿರುವ ಕಟ್ಟಡ ಸಹಿತ 18 ಎಕರೆ ಸ್ಥಳವನ್ನು ಖರೀದಿಸಿದೆ. ಒಂದು ಕುಟುಂಬ ಇದರ ಖರ್ಚನ್ನು ವಹಿಸಿಕೊಂಡಿದೆ. ಲೈನಿಸ್ಟರ್ ಎಂಬಲ್ಲಿ ಮಸೀದಿಗೋಸ್ಕರ ಎರಡು ಎಕರೆ ಸ್ಥಳ ಖರೀದಿಸಲಾಗಿದೆ. ಇದನ್ನು ಒಬ್ಬ ವ್ಯಕ್ತಿ ಖರೀದಿಸಿ ಜಮಾಅತಿಗೆ ವಕ್ಫ್ ಮಾಡಿದ್ದಾರೆ. ಅವರೇ ಇಲ್ಲಿ ಒಂದು ಮಸೀದಿಯನ್ನೂ ನಿರ್ಮಿಸುವರು. ಎಡ್‌ಮೆಂಟ್‌ನಲ್ಲಿ 33 ಎಕರೆ ಸ್ಥಳವನ್ನೂ ಸಿಸ್‌ಕಾಟ್ಬೋನಲ್ಲಿ 16 ಎಕರೆ ಸ್ಥಳವನ್ನೂ ಖರೀದಿಸಲಾಗಿದೆ.

ಯುರೋಪ್ಯನ್ ರಾಷ್ಟ್ರಗಳಲ್ಲಿ ಜರ್ಮನಿ ಜಮಾಅತ್ ನೂರು ಮಸೀದಿಗಳನ್ನು ನಿರ್ಮಿಸುವ ಯೋಜನೆಯ ಅಂಗವಾಗಿ 5 ಮಸೀದಿಗಳ ನಿರ್ಮಾಣ ಪೂರ್ಣಗೊಂಡಿದೆ. 8 ಮಸೀದಿಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ. ಬ್ರಿಟನಿನಲ್ಲಿ ಈ ವರ್ಷ ಬರ್ಮಿಂಗ್‌ಹಾಮಿನಲ್ಲಿ ಮಸ್ಜಿದ್ ದಾರುಲ್‌ಬರಕಾತಿನ ಉದ್ಘಾಟನೆಯಾಯಿತು. ಬ್ರೆಡ್‌ಫೋರ್ಟ್ ಮತ್ತು ಹಾಡ್ಲೆಪೂಲ್‌ನಲ್ಲಿ ಮಸೀದಿಗಳಿಗೆ ಶಂಕುಸ್ಥಾಪನೆ ಮಾಡಲಾಯಿತು.

ಭಾರತದಲ್ಲಿ ಈ ವರ್ಷ 45 ಮಸೀದಿಗಳ ಹೆಚ್ಚಳವಾಯಿತು. ಬಂಗ್ಲಾದೇಶದಲ್ಲಿ ಮೂರು ಮಸೀದಿಗಳ ನಿರ್ಮಾಣ ಪೂರ್ಣಗೊಂಡಿದೆ. ಇಲ್ಲಿ ನಮ್ಮ ಮಸೀದಿಗಳ ಸಂಖ್ಯೆ 92 ಆಯಿತು. ಇಂಡೋನೇಶ್ಯದಲ್ಲಿ 10 ಮಸೀದಿಗಳು ನಿರ್ಮಿಸಲ್ಪಟ್ಟವು. ಇಲ್ಲಿ ಈಗ ನಮ್ಮ ಒಟ್ಟು 377 ಮಸೀದಿಗಳಿವೆ.

ಘಾನದಲ್ಲಿ 14 ಮಸೀದಿಗಳ ಹೆಚ್ಚಳವಾಯಿತು. ಅಲ್ಲಿ ಮಿಸೆಸ್ ಜಮೀಲ ಕೋಟ್ಟೇ ಸಾಹಿಬ ಎರಡು ಮಿಲಿಯನ್ ಸೆಡಿ ವ್ಯಯಮಾಡಿ ಎರಡಂತಸ್ತಿನ ಒಂದು ಮನೋಹರವಾದ ಮಸೀದಿಯನ್ನು ನಿರ್ಮಿಸಿ ಜಮಾಅತಿಗೆ ನೀಡಿದ್ದಾರೆ. ಮಾದಾ ಉಮ್ಮು ಹಬೀಬ ಸಾಹಿಬ ಒಂದು ಮಿಶನ್ ಹೌಸ್ ನಿರ್ಮಿಸಿ ಜಮಾಅತಿಗೆ ನೀಡಿದ್ದಾರೆ.

ನೈಜೀರಿಯಾದಲ್ಲಿ ಈ ವರ್ಷ 23 ಹೊಸ ಮಸೀದಿಗಳನ್ನು ನಿರ್ಮಿಸಲಾಯಿತು. 21 ಮಸೀದಿಗಳು ನಮಗೆ ಲಭಿಸಿವೆ. ಇಲ್ಲಿ ನಮ್ಮ ಒಟ್ಟು ಮಸೀದಿಗಳು 660 ಇವೆ.

ಸಿರಾಲಿಯೋನ್‌ನಲ್ಲಿ 62 ಮಸೀದಿಗಳ ಹೆಚ್ಚಳವಾಗಿದೆ. ಸೆನಗಲ್, ಐವರಿಕೋಸ್ಟ್ ಎಂಬಲ್ಲಿ 6 ಮಸೀದಿಗಳ ಹೆಚ್ಚಳವಾಗಿದೆ. ಸೆನಗಲ್‌ನಲ್ಲಿ ನಮ್ಮ ಒಟ್ಟು 88 ಮಸೀದಿಗಳಿವೆ. ಗಾಂಬಿಯಾದಲ್ಲಿ 2 ಮಸೀದಿ ನಿರ್ಮಿಸಲಾಗಿದೆ. ಅಲ್ಲಿ ಒಟ್ಟು 85 ಮಸೀದಿಗಳಿವೆ. ಮೆಡ್ಗಾಸ್ಕರ್‌ನಲ್ಲಿ 6 ಮಸೀದಿಗಳನ್ನು ನಿರ್ಮಿಸಲಾಗಿದೆ. ಕೆನ್ಯಾದಲ್ಲಿ 100 ಮಸೀದಿಗಳ ಯೋಜನೆಯಡಿಯಲ್ಲಿ 54 ಮಸೀದಿಗಳು ಪೂರ್ಣಗೊಂಡಿವೆ. ತನ್‌ಝಾನಿಯದಲ್ಲಿ 100 ಮಸೀದಿಗಳ ಯೋಜನೆಯಡಿಯಲ್ಲಿ 47 ಮಸೀದಿಗಳು ನಿರ್ಮಿಸಲ್ಪಟ್ಟಿವೆ.

ಬುರ್ಕಿನಫಾಸೋದಲ್ಲಿ ಈ ವರ್ಷ 33 ಮಸೀದಿಗಳ ಹೆಚ್ಚಳವಾಗಿದೆ. ಮಾಲಿಯಲ್ಲಿ ನಮಗೆ 55 ಮಸೀದಿಗಳು ಲಭಿಸಿವೆ. ಬೆನಿನ್‌ನಲ್ಲಿ ಈ ವರ್ಷ 26 ಹೊಸ ಮಸೀದಿಗಳನ್ನು ನಿರ್ಮಿಸಲಾಗಿದೆ. 6 ಮಸೀದಿಗಳು ನಮಗೆ ಲಭಿಸಿವೆ. ಬೆನಿನ್‌ನಲ್ಲಿ ನಮ್ಮ ಒಟ್ಟು ಮಸೀದಿಗಳ ಸಂಖ್ಯೇ 230.

ಸ್ಪೆಯಿನ್ ಜಮಾಅತ್ ವೆಲನ್ಸಿಯಾ ಎಂಬಲ್ಲಿ ಮಸೀದಿ ನಿರ್ಮಾಣಕ್ಕಾಗಿ 2,800 ಚದರ ಮೀಟರ್ ವಿಸ್ತೀರ್ಣದ ಸ್ಥಳವನ್ನು ಖರೀದಿಸಿದೆ.

ಕಳೆದ 21 ವರ್ಷಗಳಲ್ಲಿ ನಮ್ಮ ಕೆಲವು ಮಸೀದಿಗಳನ್ನು ದುಷ್ಕರ್ಮಿಗಳು ನಾಶಮಾಡಿದರು. ಕೆಲವು ಮಸೀದಿಗಳಿಗೆ ಪಾಕಿಸ್ತಾನ ಸರಕಾರ ಬೀಗಮುದ್ರೆ ಹಾಕಿತು. ಅವರು ಇಸ್ಲಾಮಿಗೋಸ್ಕರ ದೊಡ್ಡ 'ಸೇವೆ' ಮಾಡಿದ್ದರು. ಅದಕ್ಕೆ ಬದಲಾಗಿ ಅಲ್ಲಾಹನ ಅನುಗ್ರಹದಿಂದ ನಮಗೆ 13,476 ಮಸೀದಿಗಳು ದೊರೆತವು. ಈ ವರ್ಷ 199 ಪ್ರಚಾರ ಕೇಂದ್ರಗಳ ಹೆಚ್ಚಳವಾಯಿತು. ಕಳೆದ ವರ್ಷವನ್ನು ಸೇರಿಸಿಕೊಂಡು 85 ರಾಷ್ಟ್ರಗಳಲ್ಲಿ ಪ್ರಚಾರ ಕೇಂದ್ರಗಳ ಸಂಖ್ಯೆ 1,587 ಆಗಿದೆ.

## ಪವಿತ್ರ ಖುರ್‌ಆನ್ ಅನುವಾದ

ಕಳೆದ ವರ್ಷದ ವರೆಗೆ 58 ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಅನುವಾದಗಳು ಪ್ರಕಟಗೊಂಡಿವೆ - ಈ ವರ್ಷ ಎರಡು ಹೊಸ ಭಾಷೆಗಳಲ್ಲಿ ತರ್ಜುಮೆ ಪ್ರಕಟಗೊಂಡಿವೆ–ಮಾರಿಷ್ಯಸ್‌ನ ತರ್‌ಯೋ ಮತ್ತು ಉಸ್‌ಬಕ್ ಭಾಷೆಗಳಲ್ಲಿ. ಹಾಗೆ ಒಟ್ಟು 60 ಭಾಷೆಗಳಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಖುರ್‌ಆನ್ ಅನುವಾದ ಪ್ರಕಾಶಿಸಲ್ಪಟ್ಟಿತು. ಬೇರೆ 21 ಭಾಷೆಗಳಲ್ಲಿ ಖುರ್‌ಆನ್ ಭಾಷಾಂತರ ಪೂರ್ಣಗೊಂಡು ಪರಿಶೀಲನೆಯ ಹಂತದಲ್ಲಿದೆ.

## ಸಾಹಿತ್ಯಗಳು

ಬಹಳ ಪ್ರಧಾನವಾದ ಒಂದು ಗ್ರಂಥ "ಇಸ್ಲಾಂ ಧರ್ಮ ತತ್ವಜ್ಞಾನ" 53 ಭಾಷೆಗಳಲ್ಲಿ ಈಗಾಗಲೇ ಭಾಷಾಂತರಗೊಂಡು ಪ್ರಕಾಶಿತವಾಗಿದೆ. ಈಗ ಬೇರೆ 4 ಭಾಷೆಗಳಲ್ಲಿ ಭಾಷಾಂತರಿಸಲ್ಪಡುತ್ತಿದೆ.

ಒಂಭತ್ತು ಭಾಷೆಗಳಲ್ಲಿ "ಅಲ್‌ವಸಿಯ್ಯತ್" ಅನುವಾದ ಪ್ರಕಟಗೊಂಡಿದೆ. ಇನ್ನು 21 ಭಾಷೆಗಳಲ್ಲಿ ಅನುವಾದವನ್ನು ಪ್ರಕಟಿಸುವ ಯೋಜನೆ ಇದೆ.

ಮಕ್ಕಳಿಗೋಸ್ಕರ 8 ಚಿಕ್ಕ ಪುಸ್ತಕಗಳನ್ನು ಪ್ರಕಟಿಸಲಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಅವರ ಹೋಮಿಯೋ ಉರ್ದು ಪುಸ್ತಕ ಇಂಗ್ಲಿಷ್‌ಗೆ ಭಾಷಾಂತರಿಸಲ್ಪಟ್ಟು ಪ್ರಕಟಗೊಂಡಿದೆ. "ಇಸ್ಲಾಮಿನಲ್ಲಿ ಧರ್ಮತ್ಯಾಗಿಯ ವಧೆ" ಎಂಬ ಪುಸ್ತಕದ ಭಾಷಾಂತರ ಪ್ರಕಾಶಿತವಾಗಿದೆ.

ಮೌಲವಿ ಗುಲಾಂ ಫರೀದ್ ಸಾಹೇಬರ ಖುರ್‌ಆನ್ ವ್ಯಾಖ್ಯಾನ, ಖಾರೀ ಆಶಿಖ್ ಸಾಹೇಬರ ಸ್ವರದೊಂದಿಗೆ ಸಿ.ಡಿ. ತಯಾರಿಸಿ ಬಿಡುಗಡೆ ಮಾಡಲಾಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರ ಎಲ್ಲ ಗ್ರಂಥಗಳ ಸಿ.ಡಿ.ಗಳು ತಯಾರಾಗಿವೆ.

15 ವಿವಿಧ ಭಾಷೆಗಳಲ್ಲಿ ಜಮಾಅತಿನ 288 ಪುಸ್ತಕಗಳೂ ಕಿರುಕೃತಿಗಳೂ ಕರಪತ್ರಗಳೂ ಸೇರಿ ಒಟ್ಟು 9,71,000 ಪ್ರತಿಗಳು ಈ ವರ್ಷದಲ್ಲಿ ಪ್ರಕಟಗೊಂಡಿವೆ.

ಅರಬಿ ಭಾಷೆಯಲ್ಲಿ 40 ಕಿರುಕೃತಿಗಳನ್ನು ಪ್ರಕಟಿಸಲಾಗಿದೆ. 9 ಹೊಸ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. 7 ಪುಸ್ತಕಗಳು ಪರಿಶೀಲನೆಯ ಹಂತದಲ್ಲಿದೆ. 13 ಪುಸ್ತಕಗಳನ್ನೂ ಕಿರುಕೃತಿಗಳನ್ನೂ ಇಂಟರ್‌ನೆಟ್‌ನಲ್ಲಿ ಕೊಡಲಾಗಿದೆ. 2001 ರಿಂದ "ಅತ್ತಖ್‌ವ" ಮಾಸಪತ್ರಿಕೆ ಇಂಟರ್‌ನೆಟ್‌ನಲ್ಲಿ ಲಭ್ಯ. ಜಮಾಅತಿನ ಅರಬಿ ವೆಬ್‌ಸೈಟ್ ಆರಂಭಗೊಂಡಿದೆ.

ಈ ವರ್ಷದಲ್ಲಿ ಬೇರೆ ಬೇರೆ ದೇಶಗಳಲ್ಲಿ ಒಟ್ಟು 257 ಪುಸ್ತಕ-ಫಲಕ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. ಈ ವರ್ಷ 2755 ಪುಸ್ತಕ ಮೇಳಗಳಲ್ಲಿ ಜಮಾಅತ್ ಭಾಗವಹಿಸಿತು.

## ವಕ್ಫೆನೌ

ಈ ವರ್ಷ ವಕ್ಫೆನೌ ಯೋಜನೆಯಡಿಯಲ್ಲಿ 3699 ಮಕ್ಕಳು ಸೇರಿದ್ದಾರೆ. ಈಗ ವಕ್ಫೆನೌ ಮಕ್ಕಳ ಒಟ್ಟು ಸಂಖ್ಯೆ 30,000. ಗಂಡು ಮಕ್ಕಳು 19,700 ಮತ್ತು ಹೆಣ್ಣು ಮಕ್ಕಳು 10,300.

## ರೋಗಿಗಳ ಶುಶ್ರೂಷೆ

ಆಫ್ರಿಕದಲ್ಲಿ ವೈದ್ಯಕೀಯ ಶಿಬಿರಗಳಲ್ಲಿ ಸುಮಾರು 40 ಸಾವಿರ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. ಮೂರೂವರೆ ಲಕ್ಷ ಮಂದಿಗೆ ಆಹಾರ ನೀಡಲಾಯಿತು. ಸೆರೆಮನೆಗಳನ್ನು ಸಂದರ್ಶಿಸಿ ಸಹಾಯ ನೀಡಲಾಗುತ್ತದೆ. ರಕ್ತದಾನ ಶಿಬಿರಗಳನ್ನು ನಡೆಸಲಾಗುತ್ತದೆ.

55 ರಾಷ್ಟ್ರಗಳಲ್ಲಿ 650 ಹೋಮಿಯೋ ಕ್ಲಿನಿಕ್‌ಗಳು ಸ್ಥಾಪಿಸಲ್ಪಟ್ಟಿವೆ. ರಬ್‌ವದ 'ತಾಹಿರ್ ಹೋಮಿಯೋಪಥಿಕ್ ಇನ್‌ಸ್ಟಿಟ್ಯೂಟ್' ಮೂಲಕ ಒಂದು ಲಕ್ಷದ ಎರಡು ಸಾವಿರ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು.

## ಹ್ಯೂಮನಿಟಿ ಫಸ್ಟ್

ಇದು ಜನಸೇವೆಯ ಒಂದು ಸಂಸ್ಥೆಯಾಗಿದೆ. ಸುನಾಮಿ ದುರಂತ ಪ್ರದೇಶಗಳಲ್ಲಿ ಇವರ ಚಟುವಟಿಕೆ ಶ್ಲಾಘನೀಯವಾಗಿತ್ತು. 9 ಲಕ್ಷ ಡಾಲರ್ ಅಲ್ಲಿ ವ್ಯಯಿಸಲಾಯಿತು. ಇಂಡೋನೇಶ್ಯಾ, ಭಾರತ ಮತ್ತು ಶ್ರೀಲಂಕಾದಲ್ಲಿ ಜರ್ಮನಿ ಜಮಾಅತ್ 4251 ರೋಗಿಗಳಿಗೆ ಚಿಕಿತ್ಸೆ ನೀಡಿತು. ಸುಮಾರು ಎರಡು ಸಾವಿರ ಮಂದಿಗೆ ಅತ್ಯಾವಶ್ಯಕ ಕಾರ್ಯಗಳನ್ನು ನೆರವೇರಿಸಿ ಕೊಡಲಾಯಿತು. ಸುನಾಮಿ ದುರಂತದ ಒಂದು ವಾರ ಬಳಿಕ ಭೋಜನ ಶಾಲೆ ಆರಂಭಿಸಲಾಯಿತು. ಇದರಲ್ಲಿ 40 ಯುವಕರು ಒಂದೂವರೆ ಮಾಸ ಕಾಲ ದಿನನಿತ್ಯ 850 ಮಂದಿಗೆ ಮೂರು ಹೊತ್ತು ಆಹಾರ ವಿತರಣೆ ಮಾಡಿದರು. ಯು.ಕೆ.ಯಿಂದ

(24ನೇ ಪುಟಕ್ಕೆ)

# ಖುರ್‌ಆನ್ ಕನ್ನಡ ಅನುವಾದ ಬಿಡುಗಡೆ



**ರಾಜಭವನದಲ್ಲಿ ರಾಜ್ಯಪಾಲ ಟಿ.ಎನ್. ಚತುರ್ವೇದಿಯವರು ಖುರ್‌ಆನ್ ಕನ್ನಡ ಅನುವಾದವನ್ನು ಬಿಡುಗಡೆ ಮಾಡುತ್ತಿದ್ದಾರೆ. ಚಿತ್ರದಲ್ಲಿ ರಾಜ್ಯಪಾಲರೊಂದಿಗೆ ಎಡದಿಂದ ಬಲಕ್ಕೆ: ಪ್ರೊಫೆಸರ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್, ಮೌಲಾನಾ ಕರೀಮುದ್ದೀನ್, ಮುಹಮ್ಮದ್ ಶಫೀಉಲ್ಲಾಹ್ (ಅಮೀರ್ ಕರ್ನಾಟಕ) ಮತ್ತು ಅನುವಾದಕ ಮುಹಮ್ಮದ್ ಯೂಸುಫ್ ಇದ್ದಾರೆ.**

ಜಾಗತಿಕ ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಪ್ರಕಟಿಸಲ್ಪಟ್ಟ ಖುರ್‌ಆನಿನ ಅರಬಿ ಮೂಲ ಸಹಿತ ಕನ್ನಡ ಅನುವಾದ ಕೃತಿಯನ್ನು ರಾಜ್ಯಪಾಲ ಟಿ.ಎನ್. ಚತುರ್ವೇದಿ ಅವರು ಮೇ 16 ರಂದು ರಾಜಭವನದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಬಿಡುಗಡೆಗೊಳಿಸಿದರು. ಧಾರ್ಮಿಕ ವಿಚಾರಗಳಲ್ಲಿ ಪರಸ್ಪರ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಲಿಕ್ಕೋಸ್ಕರ ಎಲ್ಲ ಧರ್ಮ ಗ್ರಂಥಗಳು ಮೂಲಪಾಠ ಸಹಿತ ಇತರ ಭಾಷೆಗಳಿಗೆ ಭಾಷಾಂತರವಾಗಬೇಕೆಂದು ಅವರು ಸಲಹೆ ನೀಡಿದರು. ಸಮಾಜದಲ್ಲಿರುವ ತಪ್ಪುಗ್ರಹಿಕೆಗಳನ್ನು ನಿವಾರಿಸಲು ಖುರ್‌ಆನ್ ಧರ್ಮಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿರುವುದು ನಿಜವಾಗಿಯೂ ಶ್ಲಾಘನೀಯ ಸಂಗತಿ ಎಂದು ಅವರು ಹೇಳಿದರು. ನಾವು ಮೊದಲು ಪರಧರ್ಮ ಸಹನೆಯನ್ನು ಕಲಿಯಬೇಕಾಗಿದೆ. ಪ್ರತಿಯೊಂದು ಧರ್ಮದವರು ಪರಧರ್ಮ ಸಹಿಷ್ಣುತೆಯನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಮೌಲಾನಾ ಕರೀಮುದ್ದೀನ್ ಸಾಹೇಬ್ ಮಾತನಾಡಿ, ಖುರ್‌ಆನ್ ಶಾಂತಿ ಮತ್ತು ಸಹಬಾಳ್ವೆಯನ್ನು ಬಯಸುತ್ತದೆ ಎಂದರು. ಪ್ರಕೃತಿಯಲ್ಲಿ ಇಲ್ಲದ ಭೇದಭಾವ ನಮ್ಮಿಂದ ದೂರವಾಗಬೇಕು. ಎಲ್ಲ ಧರ್ಮಗಳನ್ನೂ ಧರ್ಮಗ್ರಂಥಗಳನ್ನೂ ಸಹಿಸಿಕೊಳ್ಳಲಿಕ್ಕೂ ಗೌರವಿಸಲಿಕ್ಕೂ ನಾವು ಕಲಿಯಬೇಕಾಗಿದೆ ಎಂದರು.

ಅನುವಾದಕ "ಯುಗರಶ್ಮಿ" ಸಂಪಾದಕ ಮುಹಮ್ಮದ್ ಯೂಸುಫ್ ಮಾತನಾಡಿ, "ಇಸ್ಲಾಂ" ಅಂದರೆ ಶಾಂತಿ ಎಂದು ಅರ್ಥ. ಇಸ್ಲಾಂ ಒಂದು ಪ್ರಾದೇಶಿಕ ಧರ್ಮವಲ್ಲ. ಅದು ಸರ್ವ ಜನರಿಗೂ ಇರುವ ಧರ್ಮವಾಗಿದೆ. ಮನುಷ್ಯರೆಲ್ಲರನ್ನೂ ಒಂದೇ ಕುಟುಂಬವೆಂಬಂತೆ ಮತ್ತು ಎಲ್ಲರನ್ನೂ ಸಮಾನವಾಗಿ ಖುರ್‌ಆನ್ ಕಾಣುತ್ತದೆ. ಜಗತ್ತಿನ ಎಲ್ಲ ಕಡೆಗಳಲ್ಲಿಯೂ ದೇವನಿಯುಕ್ತರು ಅಥವಾ ದೇವಸಂದೇಶ ವಾಹಕರು ಆಗಮಿಸಿದ್ದಾರೆಂದು ಖುರ್‌ಆನ್ ಸಾರುತ್ತದೆ. ಎಲ್ಲ ದೇವ ನಿಯುಕ್ತರನ್ನು ನಂಬಬೇಕೆಂದೂ ಅವರ ಮಧ್ಯೆ ಏನೂ ತಾರತಮ್ಯ ಕಲ್ಪಿಸಬಾರದೆಂದೂ ಖುರ್‌ಆನ್ ಬೋಧಿಸುತ್ತದೆ. ಖುರ್‌ಆನಿನ ಪಾಠವನ್ನನುಸರಿಸಿ, ದೇವಪ್ರೋಕ್ತವಾದ ಎಲ್ಲ ಧರ್ಮಗ್ರಂಥಗಳನ್ನು ಅಂಗೀಕರಿಸಬೇಕಾದುದು ಮುಸ್ಲಿಮನಿಗೆ ಕಡ್ಡಾಯವಾಗಿದೆ. ಭಯೋತ್ಪಾದನೆ ಅಥವಾ ಶಾಂತಿಭಂಗ ಕೃತ್ಯವನ್ನು ಖುರ್‌ಆನ್ ಸುತರಾಂ ಒಪ್ಪುವುದಿಲ್ಲ. ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ. ಧರ್ಮದ ವಿಚಾರದಲ್ಲಿ ಬಲಾತ್ಕಾರ ಸಲ್ಲದು ಎಂದು ಖುರ್‌ಆನ್ ಬೋಧಿಸುತ್ತದೆ. ಸರ್ವಜನರ ವೈಯಕ್ತಿಕ, ಸಾಮಾಜಿಕ, ಆರ್ಥಿಕ, ಆಧ್ಯಾತ್ಮಿಕ, ರಾಷ್ಟ್ರೀಯ, ಅಂತರ್ರಾಷ್ಟ್ರೀಯ ಸಮಸ್ಯೆಗಳಿಗೆ ಪವಿತ್ರ ಖುರ್‌ಆನಿನಲ್ಲಿ ಪರಿಹಾರವಿದೆ ಎಂದರು.

ಮುಹಮ್ಮದ್ ಶಫೀಉಲ್ಲಾಹ್ ಸಾಹೇಬ್, ಅಮೀರ್ ಕರ್ನಾಟಕ ಸ್ವಾಗತಿಸಿದರು. ಮೌಲಾನಾ ಮುಹಮ್ಮದ್ ಕಲೀಂ ಖಾನ್ ಸಾಹೇಬ್ ವೇದಿಕೆಯ ಮೇಲಿದ್ದ ಗಣ್ಯರಿಗೆ ಹಾರಾರ್ಪಣೆ ಮಾಡಿದರು.

ಜಗತ್ತಿನ 100 ಪ್ರಮುಖ ಭಾಷೆಗಳಲ್ಲಿ ಪವಿತ್ರ ಖುರ್‌ಆನಿನ ಭಾಷಾಂತರವನ್ನು ಪ್ರಕಟಿಸುವ ಮಹತ್ಕಾರ್ಯವನ್ನು ಹಮ್ಮಿಕೊಂಡಿರುವ ಅಹ್ಮದಿಯಾ ಮುಸ್ಲಿಂ ಜಮಾಅತ್ ಈ ಕನ್ನಡ ಅನುವಾದ ಸೇರಿ ಈಗಾಗಲೇ 60 ಭಾಷೆಗಳಲ್ಲಿ ಖುರ್‌ಆನ್ ಅನುವಾದಗಳನ್ನು ಹೊರತಂದಿದೆ.



**ರಾಜ್ಯಪಾಲ ಟಿ.ಎನ್. ಚತುರ್ವೇದಿಯವರು ಖುರ್‌ಆನ್ ಕನ್ನಡ ಅನುವಾದಕ ಮುಹಮ್ಮದ್ ಯೂಸುಫ್ ಅವರನ್ನು ಅಭಿನಂದಿಸುತ್ತಿದ್ದಾರೆ.**

# ತ್ಸುನಾಮಿ ಸಂತ್ರಸ್ತರ ಪರಿಹಾರ ನಿಧಿಗೆ ದೇಣಿಗೆ



ನವದೆಹಲಿ: ಭಾರತದ ತ್ಸುನಾಮಿ ಸಂತ್ರಸ್ತರ ಪರಿಹಾರ ನಿಧಿಗೋಸ್ಕರ ಅಹ್ಮದಿಯಾ ಮುಸ್ಲಿಂ ಸಂಘಟನೆ ಸಂಗ್ರಹಿಸಿದ ದೇಣಿಗೆಯನ್ನು **ಚೆಕ್** ಮೂಲಕ ಅಹ್ಮದಿಯಾ ಪ್ರತಿನಿಧಿಗಳು ಮುಹಮ್ಮದ್ ನಸೀಂ ಖಾನ್ ಸಾಹೇಬರ ನೇತೃತ್ವದಲ್ಲಿ ಪ್ರಧಾನ ಮಂತ್ರಿ ಡಾ| ಮನಮೋಹನ್ ಸಿಂಗ್‌ರಿಗೆ ನೀಡಿದರು.

(ಚಿತ್ರದಲ್ಲಿ ಪ್ರಧಾನಿಯವರೊಂದಿಗೆ ಬಲಭಾಗದಿಂದ : ದಾವೂದ್ ಅಹ್ಮದ್, ಎಸ್. ತನ್ವೀರ್ ಅಹ್ಮದ್, ಮುಹಮ್ಮದ್ ನಸೀಂ ಖಾನ್, ಮುನೀರ್ ಅಹ್ಮದ್ ಹಾಫಿರ್ಝಾಬಾದಿ ಮತ್ತು ಸಯ್ಯದ್ ಕಲೀಮುದ್ದೀನ್ ಇದ್ದಾರೆ.)

# ಸವಿ ನೆನಪು

## ಮೌಲಾನಾ ಬಶೀರ್ ಅಹ್ಮದ್ ತಾಹಿರ್ ಸಾಹೇಬ್



ಖಾದಿಯಾನಿನ ಜಾಮಿಅ ಅಹ್ಮದಿಯಾದ ಮಾಜಿ ಪ್ರಿನ್ಸಿಪಾಲ್ ಹಾಗೂ ಬೋರ್ಡಿಂಗ್ ಅಹ್ಮದಿಯಾದ ದೀರ್ಘಕಾಲ ಮೇಲ್ವಿಚಾರಕರಾಗಿದ್ದ ಮೌಲಾನಾ ಬಶೀರ್ ಅಹ್ಮದ್ ತಾಹಿರ್ ಸಾಹೇಬ್ ತನ್ನ 65ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್")

ಉತ್ತರ ಪ್ರದೇಶದ ಗೋಂಡ ಜಿಲ್ಲೆಯಲ್ಲಿ ಹಿಂದೂ ಸಮುದಾಯದಲ್ಲಿ ಜನಿಸಿದ ಇವರು 1957ರಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿದರು. ಅವರ ಮೊದಲ ಹೆಸರು ಪಂಡಿತ್ ರಾಧಾಶ್ಯಾಂ ದುಬೆ ಎಂದಾಗಿತ್ತು. ಇಸ್ಲಾಂ ಧರ್ಮ ಸ್ವೀಕರಿಸಿದ ಬಳಿಕ ಅವರು ಖಾದಿಯಾನಿನ ಮದ್ರಸ ಅಹ್ಮದಿಯಾದಲ್ಲಿ ಕಲಿತು 1966ರಲ್ಲಿ ಪಂಜಾಬ್ ವಿಶ್ವವಿದ್ಯಾಲಯದ ಎಚ್.ಎ. ಪದವಿ ಗಳಿಸಿದರು. ಹಿಂದಿ ಭಾಷೆಯಲ್ಲಿ ಪವಿತ್ರ ಖುರ್‌ಆನಿನ ಅನುವಾದವನ್ನು ಇವರು ಮಾಡಿದ್ದಾರೆ.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

## ಎಂ.ಎಂ. ಮೊಹಿದಿನ್ ಸಾಹೇಬ್

ಮಡಿಕೇರಿ ಜಮಾಅತಿನ ಜನಾಬ್ ಎಂ.ಎಂ.ಮೊಹಿದಿನ್ ಸಾಹೇಬ್ 8-2-2005ರಂದು ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್") ಅವರಿಗೆ ಸುಮಾರು 76 ವರ್ಷ ವಯಸ್ಸಾಗಿತ್ತು.

ಮಡಿಕೇರಿಯಲ್ಲಿ 1951ರಲ್ಲಿ ಹಝ್ರತ್ ಮೌಲಾನಾ ಬಿ. ಅಬ್ದುಲ್ಲಾ ಸಾಹೇಬ್ ಎಚ್.ಎ. ಮತ್ತು ಪದಿ ಅಬ್ದುಲ್ ಖಾದರ್ ಮುಸಲಿಮಾರ್ ಮಧ್ಯೆ ನಡೆದ ವಾದ-ಪ್ರತಿವಾದದ ನಂತರ ಅಹ್ಮದಿಯಾ ಜಮಾಅತಿಗೆ ಸೇರಿದ ಅಹ್ಮದಿಯರಲ್ಲಿ ಅವರೂ ಒಬ್ಬರಾಗಿದ್ದರು. ಕನ್ನಡಕ ವ್ಯಾಪಾರಿಯಾಗಿದ್ದ ಅವರು ಅಹ್ಮದಿಯಾ ಸಂದೇಶವನ್ನು ಪ್ರಚಾರ ಮಾಡುವ ಬಹಳ ಆಸಕ್ತಿ ಹೊಂದಿದ್ದರು. ಅವರು ಸುಶ್ರಾವ್ಯವಾಗಿ ಹಾಡಬಲ್ಲವರಾಗಿದ್ದರು. ಅವರು ಅನ್‌ಸಾರುಲ್ಲಾಹ್ ಝುಈಮ್ ಆಗಿ ಜಮಾಅತಿಗೆ ಸೇವೆ ಸಲ್ಲಿಸಿದ್ದರು.

ಅವರು ಪತ್ನಿ, ಪುತ್ರರು ಮತ್ತು ಪುತ್ರಿಯರನ್ನು ಅಗಲಿ ಹೋಗಿದ್ದಾರೆ.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

## ಎಂ.ಇ. ಮೊಹಿದಿನ್ ಸಾಹೇಬ್



ಮಡಿಕೇರಿ ಜಮಾಅತಿನ ಎಂ.ಇ. ಮೊಹಿದಿನ್ ಸಾಹೇಬ್ 27-3-2005 ರಂದು ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್") ಅವರಿಗೆ ಸುಮಾರು 67 ವರ್ಷ ವಯಸ್ಸಾಗಿತ್ತು. ಮಡಿಕೇರಿಯಲ್ಲಿ ಅಹ್ಮದಿಯಾ ಜಮಾಅತನ್ನು ಪ್ರವೇಶಿಸಿದ ಎರಡನೆಯ ಗುಂಪಿಗೆ ಅವರು ಸೇರಿದ್ದರು. ಅವರು ವಿರಾಜಪೇಟೆಯಲ್ಲಿ ದೀರ್ಘಕಾಲ ಫೋಟೋ ಸ್ಟುಡಿಯೋ ನಡೆಸುತ್ತಾ ಇದ್ದರು. ಅವರ ಮೂಲಕ ಕೆಲವು ಅಹ್ಮದಿ ಯುವಕರು ಫೋಟೋಗ್ರಫಿ ಕಲಿತಿದ್ದರು. ಅವರು ತಬ್ಲೀಗ್ ಸೆಕ್ರೆಟರಿಯಾಗಿಯೂ ಜಮಾಅತಿನ ಸೇವೆ ಮಾಡಿದ್ದರು. ಅವರ ಪತ್ನಿ ಒಂದು ವರ್ಷ ಮೊದಲು ಮೃತರಾದರು. ಅವರು ಒಬ್ಬ ಪುತ್ರ ಮತ್ತು ನಾಲ್ವರು ಪುತ್ರಿಯರನ್ನು ಅಗಲಿ ಹೋಗಿದ್ದಾರೆ.

ಅಲ್ಲಾಹನು ದಿವಂಗತರಿಗೆ ಮಗ್ಫಿರತ್ ಮತ್ತು ಜನ್ನತ್ ದಯಪಾಲಿಸಲಿ - ಆಮೀನ್.

(21 ನೇ ಪುಟದಿಂದ) **ಅಹ್ಮದಿಯಾ ಜಮಾಅತಿನ ಪ್ರಗತಿ**

2,85,000 ಕಿಲೋ ಗ್ರಾಂ ಸಾಮಗ್ರಿಗಳನ್ನು ರವಾನಿಸಲಾಯಿತು. ಅದರಲ್ಲಿ ಆಹಾರ, ಔಷಧಿ, ಬಟ್ಟೆಬರೆ ಮತ್ತು ಡೇರೆಗಳಿದ್ದವು. ಇಂಡೋನೇಶ್ಯಾದಲ್ಲಿ 28 ಡಾಕ್ಟರ್‌ಗಳೂ 9 ಸಹಾಯಕರೂ ಸೇವೆ ಗೈದರು. 7 ಡಾಕ್ಟರ್‌ಗಳು ಶ್ರೀಲಂಕಾದಲ್ಲಿ ಸೇವೆಗೆ ಹೋದರು. 43 ಬೆಸ್ತರಿಗೆ ದೋಣಿಗಳನ್ನು ನೀಡಲಾಯಿತು. ಆಫ್ರಿಕದಲ್ಲಿ ಬರಗಾಲ ಪೀಡಿತ ಪ್ರದೇಶದಲ್ಲಿ 150 ಟನ್ ಆಹಾರ ವಸ್ತುಗಳನ್ನು ತಲಪಿಸಲಾಯಿತು. ಮಾಲಿಯಲ್ಲಿ 30 ಟನ್ ಆಹಾರ ಸಾಮಗ್ರಿಗಳನ್ನು ಒದಗಿಸಲಾಯಿತು. ಉಗಾಂಡದ ಬರಗಾಲ ಪೀಡಿತ ಪ್ರದೇಶದಲ್ಲಿ 10 ಟನ್ ಆಹಾರ ವಸ್ತುಗಳನ್ನು ವಿತರಿಸಲಾಯಿತು. ನಳ್ಳಿ ಮೂಲಕ ಮತ್ತು ಬಾವಿಗಳನ್ನು ತೋಡಿ ನೀರಿನ ಏರ್ಪಾಡು ಮಾಡಲಾಗುತ್ತದೆ.

### ಬೈಅತ್

ಈ ವರ್ಷ ಎರಡು ಲಕ್ಷದ ಒಂಭತ್ತು ಸಾವಿರದ ಏಳು ನೂರ ತೊಂಭತ್ತ ಒಂಭತ್ತು ಮಂದಿ ಬೈಅತ್ ಪ್ರತಿಜ್ಞೆ ಮಾಡಿ ಅಹ್ಮದಿಯಾ ಜಮಾಅತಿಗೆ ಸೇರಿದ್ದಾರೆ.

### ಅಲ್‌ವಸಿಯ್ಯತ್

ಈ ವರ್ಷ 16,148 ಮಂದಿ ಜಮಾಅತಿನ ವಸಿಯ್ಯತ್ ವ್ಯವಸ್ಥೆಯಲ್ಲಿ ಸೇರಿದ್ದಾರೆ.

### ಹೊಸ ನಿವೇಶನ

ಬ್ರಿಟನಿನಲ್ಲಿ ವಾರ್ಷಿಕ ಸಮ್ಮೇಳನ ಸೇರಲಿಕ್ಕಾಗಿ 208 ಎಕರೆ ಸ್ಥಳವನ್ನು ಖರೀದಿಸುವ ಏರ್ಪಾಡು ಮಾಡಲಾಗಿದೆ. ಇದರ ಬೆಲೆ 25 ಲಕ್ಷ ಪೌಂಡಾಗಿದೆ. ಟಿಲ್‌ಫೋರ್ಡ್‌ನಲ್ಲಿರುವ ಅಹ್ಮದಿಯಾ ಕೇಂದ್ರ "ಇಸ್ಲಾಮಾಬಾದ್"ನಿಂದ ಈ ನಿವೇಶನ 12 ಮೈಲು ದೂರದಲ್ಲಿದೆ.

ಪುಸ್ತಕ ವಿಭಾಗ

# ಧರ್ಮದ ನಾಮದಲ್ಲಿ ರಕ್ತಪಾತ

❖ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್

## ಅಧ್ಯಾಯ - 1

## ರಕ್ತದಿಂದ ತೊಯ್ದು ಧರ್ಮ

ಸಹೋದರನ ಹತ್ಯೆಗಾಗಿ ದೇವಶಾಪಕ್ಕೊಳಗಾದ ಕಾಯಿನನ* ಪ್ರಕರಣದಿಂದ ಮನುಷ್ಯ ಚರಿತ್ರೆಯು ಆರಂಭಗೊಂಡಿದೆಯೋ? ಗತ ಕಾಲದ ಚಾರಿತ್ರಿಕ ಕಾಲಘಟ್ಟದಲ್ಲಿ ಎಷ್ಟು ರಕ್ತ ಹರಿಸಲಾಗಿದೆಯೆಂದರೆ ಭೂಮಿಯನ್ನೇ ರಕ್ತದ ಮೂಲಕ ಬಣ್ಣ ಹಚ್ಚಿ ಮುಗಿಸಿ ಧಾರಾಳ ಬಾಕಿಯಾಗುವಷ್ಟು. ಮನುಷ್ಯನು ತನ್ನ ಸಮನಾಗಿರುವ ಮನುಷ್ಯನನ್ನು ಕೊಲ್ಲುವುದನ್ನು ನಿಲ್ಲಿಸುವುದಾದರೂ ಎಂದು? ರಕ್ತಕ್ಕಾಗಿರುವ ಅವನ ದಾಹ ಶಮನವಾಗುವುದಾದರೂ ಯಾವಾಗ?

ಹೇಬಲನು ತನ್ನ ಸಹೋದರನಾದ ಕಾಯಿನನಿಂದ ನಿಷ್ಕಾರಣವಾಗಿ ಕೊಲ್ಲಲ್ಪಟ್ಟ ಪ್ರಥಮ ಮನುಷ್ಯನಾಗಿದ್ದನು. ಆ ಕೊಲೆಯ ಕಥೆಯು ಪವಿತ್ರ ಖುರ್‌ಆನ್‌ನಲ್ಲಿಯೂ ಬೈಬಲಿನಲ್ಲಿಯೂ ನಮಗೆಲ್ಲರಿಗೂ ಒಂದು ನೀತಿ ಪಾಠವಾಗುವಂತೆ ಬರೆಯಲ್ಪಟ್ಟು ಸುರಕ್ಷಿತವಾಗಿಡಲಾಗಿದೆ. ಅದು ಲೋಕಾಂತ್ಯದವರೆಗೆ ಒಂದು ಉದಾಹರಣೆಯಾಗಿ ಉಳಿಯುವುದು. ನೀವು ಚರಿತ್ರೆಯನ್ನು ಅಧ್ಯಯನ ಮಾಡಿದರೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಮನುಷ್ಯನು ಅಕಾರಣವಾಗಿ ಆಕ್ರಮಣ ಮಾಡುವ ಜೀವಿಯಾಗಿದ್ದಾನೆ. ನಾಗರಿಕತೆಯ ಪುರೋಗತಿಯೊಂದಿಗೆ ಅವನ ಆಕ್ರಮಣ ಶೀಲತೆಯು ಕುಗ್ಗಿಲ್ಲ. ಮನುಷ್ಯನು ಸಾವಿರಾರು ವರ್ಷಗಳ ಹಿಂದೆ ಕ್ರೂರಿಯಾಗಿದ್ದ ಹಾಗೆಯೇ ಇಂದು ಸಹ ಕ್ರೂರಿಯಾಗಿದ್ದಾನೆ. ಅವನ ನಿಷ್ಕರುಣೆ, ನಿರಂಕುಶ ಕ್ರೌರ್ಯ ಮತ್ತು ಅಕಾರಣವಾದ ಆಕ್ರಮಣ ಇವುಗಳ ಚರಿತ್ರೆ ದೀರ್ಘವೂ ನೋವನ್ನುಂಟು ಮಾಡುವುದೂ ಆಗಿದೆ. ಸಾವಿರಾರು ವರ್ಷಗಳ ಕ್ರೌರ್ಯ ಮತ್ತು ಹಿಂಸಾಚಾರದ ನಂತರವೂ ಮಾನವನ ಅತಿಕ್ರಮಣಗಳ ಅಗ್ನಿ ನಂದಿ ಹೋಗಿಲ್ಲ.

ವ್ಯಕ್ತಿಗಳನ್ನು ಮೋಸದಿಂದ ಕೊಲ್ಲುವುದು ಮತ್ತು ಜನಸಮೂಹಗಳನ್ನು ನಿಶ್ಶೇಷವಾಗಿ ಹತ್ಯೆಮಾಡುವುದು ಪದೇ ಪದೇ ಪುನರಾವರ್ತಿಸಲ್ಪಡುವ ಚಾರಿತ್ರಿಕ ಘಟನೆಗಳಾಗಿವೆ. ರಾಜ್ಯಗಳು ಬೇರೆ ರಾಜ್ಯಗಳನ್ನು ಆಕ್ರಮಣ ಮಾಡಿವೆ. ದೇಶಗಳು ತಮ್ಮ ನೆರೆ ದೇಶಗಳೊಂದಿಗೆ ಮಾತ್ರವಲ್ಲ ತಮ್ಮ ದೇಶದ ಗಡಿಗಳಿಂದ ಬಹಳ ದೂರವಿರುವ ಜನಾಂಗಗಳ ವಿರುದ್ಧವೂ ಯುದ್ಧ ಹೂಡಿವೆ. ವೃಕ್ಷರಹಿತ ಬಯಲು ಪ್ರದೇಶಗಳಲ್ಲಿಯೂ ಮರುಭೂಮಿಗಳಲ್ಲಿಯೂ ವಾಸಿಸುತ್ತಿದ್ದ ಅಲೆಮಾರಿ ಜನರ ತಂಡಗಳು ಪುರಾತನ ನಾಗರಿಕತೆಯಿಂದ ಶೋಭಿಸಲ್ಪಡುತ್ತಿದ್ದ ಜನಾಂಗಗಳನ್ನು ಯುದ್ಧಗಳಲ್ಲಿ ಸೋಲಿಸಿವೆ. ಸೀಝರನೂ ಅಲೆಕ್ಸಾಂಡರನೂ ರಕ್ತಪಾತ ಮಾಡಿದ್ದರು. ಬಗ್ದಾದ್ ನಗರವು ಹುಲಗು ಮತ್ತು ಚೆಂಗೀಝನಿಂದ ನಾಶಗೊಳಿಸಲ್ಪಟ್ಟಿತು. ಕುರುಕ್ಷೇತ್ರದ ರಣರಂಗವು ಪಾಂಡವರ ಮತ್ತು ಕೌರವರ ರಕ್ತಸಿಂಚನದಿಂದ ಕೆಂಪಗಾಯಿತು.

ಕೆಲವು ಸಾರಿ ಕುಟುಂಬ ಗೌರವ ಅಥವಾ ಬುಡಕಟ್ಟಿನ ಗೌರವದ ಹೆಸರಿನಲ್ಲಿ ರಕ್ತ ಹರಿಸಲಾಯಿತು. ಕೆಲವು ಸಾರಿ ಶಂಕಿತ ಅನ್ಯಾಯಗಳ ವಿರುದ್ಧ ಸೇಡು ತೀರಿಸಲು ಹೀಗೆ ಮಾಡಲಾಯಿತು. ಕೆಲವು ಸಾರಿ ರೋಷಾಕುಲರಾದ ಅಲೆಮಾರಿ ತಂಡಗಳು ಆಹಾರಕ್ಕಾಗಿ ಶಾಂತಮಯ ದೇಶಗಳನ್ನು ಆಕ್ರಮಣಮಾಡಿದವು. ಕೆಲವು ಸಾರಿ ಲೋಕವನ್ನು ಅಧೀನಕ್ಕೊಳಪಡಿಸಲು ಹಾಗೆ ಮಾಡಿದುವು. ಆದರೆ ಹೆಚ್ಚು ಹೆಚ್ಚಾಗಿ ಚೆಲ್ಲಲ್ಪಟ್ಟದ್ದು ಮನುಷ್ಯನ ರಕ್ತವಾಗಿದೆ. ಅದು ಸಹ ದೇವನ ಪ್ರತಿಕೃತಿಯಲ್ಲಿ ಸೃಷ್ಟಿಸಲ್ಪಟ್ಟ ಮನುಷ್ಯನ ರಕ್ತವನ್ನು ಅವನ ಸೃಷ್ಟಿಕರ್ತನಾದ ದೇವನ ಹೆಸರಿನಲ್ಲಿ. ಸಾಮೂಹಿಕ ಹತ್ಯೆಗಾಗಿ ಧರ್ಮವನ್ನು ಒಂದು ನೆವನವನ್ನಾಗಿ ಮಾಡಲಾಯಿತು. ಮನುಷ್ಯನ ಈ ರೀತಿಯ ಪ್ರಕೃತಿಯನ್ನು ನೋಡುವಾಗ ಈ ಲೋಕದಲ್ಲಿ ವಾಸಿಸುವ ಜೀವಿಗಳಲ್ಲಿ ಅತ್ಯಂತ ನೀಚ ಮತ್ತು ನಿರ್ದಯಿ ಮನುಷ್ಯನೋ ಎಂದು ಆಶ್ಚರ್ಯಚಕಿತವಾಗಬಹುದು. ಧರ್ಮವು ಮನುಷ್ಯನನ್ನು ಹೆಚ್ಚು ಸುಸಂಸ್ಕೃತನನ್ನಾಗಿ ಮಾಡಬಹುದೆಂದು ನಿರೀಕ್ಷಿಸಲಾಗುತ್ತಿರುವಾಗ ಧರ್ಮವೇ ರಕ್ತದಿಂದ ತೊಯ್ದಿದೆ.

ಆದಮ್ (ಅಲೈಹಿಸ್ಸಲಾಂ) ರವರನ್ನು ಸೃಷ್ಟಿಸುವ ಸಂದರ್ಭದಲ್ಲಿ ನಡೆದ ಘಟನೆ ಈ ವಾಸ್ತವಿಕತೆಯನ್ನು ನೆನಪಿಸುವಂತೆ ಮಾಡುತ್ತದೆ. ಈ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಮತ್ತು ಬೈಬಲ್‌ನಲ್ಲಿ ಉಲ್ಲೇಖಗಳಿವೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ :

> **"ನಾನು ಭೂಮಿಯಲ್ಲಿ ಒಬ್ಬ ಪ್ರತಿನಿಧಿಯನ್ನು ನೇಮಿಸಲಿದ್ದೇನೆ" ಎಂದು ದೇವದೂತರೊಡನೆ ನಿನ್ನ ಪ್ರಭು ಹೇಳಿದ ಸಂದರ್ಭ - ಆಗ ಅವರು, 'ಅಲ್ಲಿ ಕ್ರಮ ಭಂಗ ಮಾಡುವವರನ್ನೂ ರಕ್ತ ಹರಿಸುವವರನ್ನೂ ನೀನು ಉಂಟು ಮಾಡುವೆಯೋ? ನಾವಾದರೋ ನಿನ್ನ ಸ್ತುತಿ ಕೀರ್ತನೆ ಮಾಡುವವರೂ ನಿನ್ನ ಪಾವಿತ್ರ್ಯವನ್ನು ಕೊಂಡಾಡುವವರೂ ಆಗಿದ್ದೇವೆ' ಎಂದು ಹೇಳಿದರು. ಆಗ ಅವನು, 'ನೀವು ತಿಳಿಯದೆ ಇದ್ದುದನ್ನು ನಾನು ತಿಳಿದಿರುತ್ತೇನೆ' ಎಂದು ನುಡಿದನು." (ಪವಿತ್ರ ಖುರ್‌ಆನ್ 2:31)**

ದೇವದೂತರ ಮತ್ತು ದೇವನ ಮಧ್ಯೆ ನಡೆದ ಮಾತುಕತೆ ದಿಗ್ಭ್ರಮೆಗೊಳಿಸುವುದಾಗಿದೆ. ಏಕೆಂದರೆ ಧಾರ್ಮಿಕ ಚರಿತ್ರೆಯ ಯಾವುದೇ ಪುಸ್ತಕವನ್ನು ಅಧ್ಯಯನ ಮಾಡಿದರೂ ಸಹ ದೇವದೂತರು ಹೇಳಿದ ಸಂಗತಿ ಸರಿಯಾದುದೆಂದು ತೋರುತ್ತದೆ. ದೇವದೂತರು ಹೇಳಿದುದು ಸರಿಯಾದ ಮಾತೇ ಆಗಿದ್ದರೆ ದೇವನು ಅವರ 'ಸಲಹೆ'ಯನ್ನು ತಿರಸ್ಕರಿಸಲು ಅಥವಾ ಅವನ ಯೋಜನೆಗೆ ವಿರುದ್ಧವಾದ ಅವರ ಆಕ್ಷೇಪವನ್ನು ನಿರಾಕರಿಸಲು ಕಾರಣವೇನು? ವಾಸ್ತವಿಕವಾಗಿ ಅವರ ಆಕ್ಷೇಪವು ಪ್ರವಾದಿಗಳ ಶೃಂಖಲೆಯ ಕುರಿತು ಮತ್ತು ಕಡೆಯದಾಗಿ ಪ್ರವಾದಿಗಳ ಮುದ್ರೆಯಾದ ಹಝ್ರತ್ ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ರವರ ಪ್ರವಾದಿತ್ವದ ಕುರಿತು ಆಗಿತ್ತು.

ಲೋಕದ ಯಾವುದೇ ಭಾಗದ ಯಾವುದೇ ಕಾಲದ ಚರಿತ್ರೆಯನ್ನು ಓದುವುದಾದರೆ ಅದು ಚಿತ್ರಹಿಂಸೆ, ದಮನ, ಹತ್ಯೆ ಮತ್ತು ಶಿಲುಬೆಗೇರಿಸುವಿಕೆಯ ಚರಿತ್ರೆಯೇ ಆಗಿರುತ್ತದೆ. ಯುದ್ಧ ಮತ್ತು

* ಆದಮ್ ಮತ್ತು ಹವ್ವರ ಹಿರಿಯ ಪುತ್ರ (ಆದಿಕಾಂಡ 4:1)

ಸಂಘರ್ಷಭರಿತ ಲೋಕದಲ್ಲಿ ಶಾಂತಿ ಸಮಾಧಾನಗಳ ಅಂತಿಮ ಆಶ್ರಯ ಧಾಮವಾಗಿದೆಯೆಂದು ಭಾವಿಸಲಾಗುವ ಧರ್ಮವು ನಾಶ ಮತ್ತು ರಕ್ತ ಚೆಲ್ಲುವಿಕೆಗೆ ಕಾರಣವಾಗಿ ಕಂಡು ಬರುವುದು ಅತ್ಯಂತ ನಿರಾಶೆಯನ್ನು ಉಂಟುಮಾಡುತ್ತದೆ. ಆದರೆ ಸಾಮೂಹಿಕ ಹತ್ಯೆಗಳಿಗೆ ನಿಜವಾದ ಕಾರಣವು ಧರ್ಮವಾಗಿರುವುದಿಲ್ಲ. ಧರ್ಮವು ಹಿಂಸಾಚಾರಗಳಿಗೆ ಹೇತುವೆಂದು ಯೋಚಿಸುವುದು ತಪ್ಪಾಗಿದೆ. ದೇವನು ಮನುಷ್ಯನಿಗೆ ಧರ್ಮವನ್ನು ನೀಡಿದುದು ಕೊಲೆಯನ್ನು ಪ್ರೋತ್ಸಾಹಿಸಲಿಕ್ಕಾಗಿ ಅಲ್ಲ.

ದೇವನು ಧರ್ಮವನ್ನು ಈ ಉದ್ದೇಶಕ್ಕಾಗಿ ಮಾಡಿರಲಿಲ್ಲ ಎಂದು ಕಂಡುಕೊಂಡಾಗ ಆಶ್ಚರ್ಯಚಕಿತರಾಗುತ್ತೇವೆ ಮತ್ತು ಅದರೊಂದಿಗೆ ಸಮಾಧಾನವೂ ಉಂಟಾಗುತ್ತದೆ. ಶುಭ ಪ್ರತೀಕ್ಷೆಯ ಕಿರಣವು ನಮಗೆ ಕಾಣಿಸಿಕೊಳ್ಳುತ್ತದೆ. ದೇವದೂತರು ಯಾರ ಸೃಷ್ಟಿಯನ್ನು ಆಕ್ಷೇಪಿಸಿದರೋ ದೇವ ಪ್ರತಿನಿಧಿಯಾದ ಅವರು ವಾಸ್ತವಿಕವಾಗಿ ಓರ್ವ ಮಹಾ ಸುಧಾರಕರಾಗಿದ್ದರು. ಅವರು ಪ್ರಚಾರ ಮಾಡಿದ ಧರ್ಮವು ಇಸ್ಲಾಮ್ ಎಂದು ಹೆಸರಿಸಲ್ಪಟ್ಟಿತ್ತು. ಶಾಂತಿಯ ಧರ್ಮ. ಒಂದು ಪ್ರಶ್ನೆ ಬಾಕಿಯಾಗುತ್ತದೆ: ಚರಿತ್ರೆಯನ್ನು ಪ್ರಥಮವಾಗಿ ದೃಷ್ಟಿಸಿದಾಗ ಧರ್ಮವು ಶಾಂತಿಯ ಹೆಸರಿನಲ್ಲಿ ರಕ್ತಪಾತವನ್ನೂ ಹತ್ಯೆಯನ್ನೂ ಅನುಮತಿಸುತ್ತದೆ ಎಂಬ ಭಾವನೆಯನ್ನು ಉಂಟುಮಾಡಲು ಕಾರಣವೇನು? ಚರಿತ್ರೆಯನ್ನು ಮೇಲಿಂದ ಮೇಲೆ ಅವಲೋಕಿಸುವಾಗ ಈ ರೀತಿಯ ತೀರ್ಮಾನಕ್ಕೆ ತಲುಪುವ ಕಾರಣವನ್ನು ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಉಲ್ಲೇಖಿಸಿದೆ. ಧರ್ಮದ ಹೆಸರಿನಲ್ಲಿ ಹಿಂಸಾಚಾರವನ್ನು ಮುಂದುವರಿಸಿದವರು ವಾಸ್ತವಿಕವಾಗಿ ಧರ್ಮವಿರೋಧಿಗಳಾಗಿದ್ದರು ಅಥವಾ ಅವರ ಧರ್ಮವು ಭ್ರಷ್ಟಾಚಾರಗಳಿಗೆ ಒಳಗಾಗಿತ್ತೆಂದು ಪವಿತ್ರ ಖುರ್‌ಆನ್ ಪುರಾತನ ಜನಾಂಗಗಳ ಉದಾಹರಣೆಗಳನ್ನು ನೀಡಿ ಸ್ಪಷ್ಟಪಡಿಸುತ್ತದೆ. ಆಧ್ಯಾತ್ಮಿಕತೆ, ಸಹಾನುಭೂತಿ, ದಯೆ ಮತ್ತು ಸಾತ್ವಿಕತೆ ಇಲ್ಲದ ಎಷ್ಟೋ ಧಾರ್ಮಿಕ ನಾಯಕರಿದ್ದಾರೆ. ಪ್ರಾಮಾಣಿಕವಾಗಿ ಹೇಳುವುದಾದರೆ ಅವರು ಕಪಟ ವಿಶ್ವಾಸಿಗಳಾಗಿದ್ದಾರೆ. ಅವರು ಅಧಿಕಾರದ ಮೋಹದಿಂದ ಕೂಡಿದವರಾಗಿದ್ದು ಅವರನ್ನು ನಿಯಂತ್ರಿಸುವ ತೀವ್ರವಾದ ಮನೋವಿಕಾರ ಹಿಂಸಾಚಾರವಾಗಿದೆ. ಅಂತಹ ಜನರ ಕೃತ್ಯಗಳನ್ನು ಧರ್ಮದೊಂದಿಗೆ ಸೇರಿಸಿ ಹೇಳುವುದು ಬಹಳ ದೊಡ್ಡ ತಪ್ಪಾಗಿದೆ. ಅಪ್ಪಟ ಸತ್ಯವೇನೆಂದರೆ, ದಯೆಯ ಕಾರಂಜಿಯಾಗಿರುವ ದೇವನು ಯಾವುದೇ ಧರ್ಮದ ಅನುಯಾಯಿಗಳು ತನ್ನದೇ ಸೃಷ್ಟಿಯಾದ ತನ್ನ ಜನರನ್ನು ಹಿಂಸಿಸಲು ಬಿಡಲಾರನು.

ಈ ಅಂಶವನ್ನು ಸಾದರಪಡಿಸಲು ಪವಿತ್ರ ಖುರ್‌ಆನ್ ಹಲವಾರು ಚಾರಿತ್ರಿಕ ಉದಾಹರಣೆಗಳನ್ನು ಉಲ್ಲೇಖಿಸಿದೆ. ಪ್ರವಾದಿಗಳ ವಾದಕ್ಕೆ ಪೂರ್ವಕಾಲದ ಜೀವಿತವನ್ನು ಧಾರ್ಮಿಕ ಸುಧಾರಣೆಗೆ ಮತ್ತು ಧರ್ಮಪ್ರಚಾರಕ್ಕೆ ಮಾನದಂಡವಾಗಿ ಪ್ರಸ್ತಾಪಿಸಲಾಗಿದೆ. ದೇವನು ಬಲ ಪ್ರಯೋಗಿಸುವುದನ್ನು ಅನುಮತಿಸಿರುತ್ತಿದ್ದರೆ ಧರ್ಮಗಳ ಸ್ಥಾಪಕರು ತಮ್ಮ ಧರ್ಮ ಸಂಸ್ಥಾಪನೆಗಾಗಿ ಅದನ್ನು ಉಪಯೋಗಿಸಲು ಅನುಮತಿಸುತ್ತಿದ್ದರು. ಆದರೆ ಬಲಪ್ರಯೋಗವು ನಿಷಿದ್ಧಗೊಳಿಸಲಾಗಿದೆ ಎಂಬುದು ಸ್ಪಷ್ಟವಾದ ಸಂಗತಿಯಾಗಿದೆ. ಪ್ರವಾದಿಗಳು ಆಗಮಿಸಿ ದೀರ್ಘಕಾಲ ದಾಟಿಹೋದ ನಂತರ ಬಲಪ್ರಯೋಗದ ಮೂಲಕ ಧರ್ಮ ಪ್ರಚಾರ ಮಾಡಿದ ಅವರ ಅನುಯಾಯಿಗಳು ಧರ್ಮದ ಆಗಮನದ ನಂತರ ದೀರ್ಘ ಕಾಲ ಕಳೆದ ಕಾರಣ ಭ್ರಷ್ಟವಾಗಿರುವ ಧರ್ಮದ ಅನುಯಾಯಿಗಳು ಆಗಿದ್ದಾರೆ ಅಥವಾ ಅವರು ಸ್ವತಃ ಭ್ರಷ್ಟರಾದವರಾಗಿದ್ದಾರೆ. ಅವರು ಧರ್ಮದ ಹೆಸರಿನಲ್ಲಿ ಬಲಪ್ರಯೋಗಿಸಿದರು. ಹೀಗಿದ್ದರೂ ಅವರ ಧರ್ಮ ಬಲಾತ್ಕಾರವನ್ನು ವಿರೋಧಿಸುತ್ತಿತ್ತು.

ಪವಿತ್ರ ಖುರ್‌ಆನಿನಲ್ಲಿರುವ ಧಾರ್ಮಿಕ ಚರಿತ್ರೆಯು ಯಾವುದೇ ಧರ್ಮವನ್ನು ಅವಲಂಬಿಸಿರದ ಜನರು ಧರ್ಮದ ಹೆಸರಿನಲ್ಲಿ ಹಿಂಸೆಯನ್ನು ಮಾಡುತ್ತಾ ಇದ್ದುದರ ಕುರಿತು ಉದಾಹರಣೆಗಳಿಂದ ತುಂಬಿದೆ. ದೇವನ ಕುರಿತು ತೀರಾ ಜ್ಞಾನವಿಲ್ಲದ ಜನರು ದೇವನ ಹೆಸರಿನಲ್ಲಿ ಜನರಿಗೆ ಚಿತ್ರಹಿಂಸೆ ನೀಡಿದರು. ಪ್ರವಾದಿ ನೂಹ್(ಅ) ಜನರನ್ನು ಸಾತ್ವಿಕತೆ ಮತ್ತು ಭಕ್ತಿಯ ಕಡೆಗೆ ಕರೆಯುತ್ತಿದ್ದರು. ಅವರು ಬಲಾತ್ಕಾರ ಮಾಡುತ್ತಿರಲಿಲ್ಲ. ಅವರ ಧ್ವನಿಯ ಸದ್ದನ್ನಡಗಿಸಲು ಬಯಸಿದವರು ತಪ್ಪುಗಾರರಾಗಿದ್ದರು. ಪ್ರವಾದಿ ನೂಹ್(ಅ)ರವರ ಸಂದೇಶ ಆಲಿಸಿದಾಗ ಅವರು ಹೇಳಿದರು:

> "ಓ ನೂಹ್, ನೀನು (ಉಪದೇಶಿಸುವುದನ್ನು) ನಿಲ್ಲಿಸದಿದ್ದರೆ ನೀನು ನಿಶ್ಚಯವಾಗಿಯೂ ಕಲ್ಲೆಸೆಯಲ್ಪಟ್ಟು ಕೊಲ್ಲಲ್ಪಡುವವರೊಂದಿಗೆ ಸೇರಿಹೋಗುವೆ." (ಪವಿತ್ರ ಖುರ್‌ಆನ್ 26:117)

ಪವಿತ್ರ ಖುರ್‌ಆನ್ ವಿವರಿಸಿರುವ ಧಾರ್ಮಿಕ ದೌರ್ಜನ್ಯಗಳ ಚರಿತ್ರೆಯು ಸತ್ಯವಾದ ಧರ್ಮದ ಅನುಯಾಯಿಗಳು ಹಿಂಸಾಚಾರಗಳಿಗೆ ಗುರಿಯಾಗುತ್ತಾರೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಪವಿತ್ರ ಖುರ್‌ಆನ್ ಪ್ರವಾದಿ ಇಬ್ರಾಹೀಮ್(ಅ)ರವರ ಉದಾಹರಣೆಯನ್ನೂ ನೀಡಿದೆ. ಅವರು ಜನರನ್ನು ಏಕದೇವನ ಆರಾಧನೆಯ ಕಡೆಗೆ ಪ್ರೀತಿ, ಸಹಾನುಭೂತಿ ಮತ್ತು ನಮ್ರತೆಯಿಂದ ಕರೆದರು. ಅವರಲ್ಲಿ ಖಡ್ಗವಾಗಲಿ ಬೇರೆ ಯಾವುದಾದರೊಂದು ಆಯುಧವಾಗಲಿ ಇರಲಿಲ್ಲ. ಆದರೆ ಅವರ ಜನಾಂಗದ ಹಿರಿಯರು ಪ್ರವಾದಿ ನೂಹ್(ಅ)ರವರ ವಿರೋಧಿಗಳಾಗಿದ್ದ ಧರ್ಮರಹಿತ ಜನರು ವರ್ತಿಸಿದ ಹಾಗೆಯೇ ಅವರ ವಿರುದ್ಧ ಸಹ ವರ್ತಿಸಿದರು. ಪ್ರವಾದಿ ಇಬ್ರಾಹೀಮ್(ಅ)ರವರ ಪಿತ ಆಝುರ್ ಹೇಳಿದರು: "ನೀನು ನಿನ್ನ ವಿಶ್ವಾಸದಿಂದ ಹಿಂದೆ ಸರಿಯದೆ ಇದ್ದರೆ ನಾನು ನಿನ್ನನ್ನು ಕಲ್ಲೆಸೆದು ಕೊಲ್ಲುವೆನು" (ಪ.ಖು. 19:47). ಆಝುರ್ ಪ್ರಯೋಗಿಸಿದ ಪದಗಳು ಪ್ರವಾದಿ ನೂಹ್(ಅ)ರವರ ವಿರೋಧಿಗಳು ಉಪಯೋಗಿಸಿದ ಶಬ್ದಗಳಿಗೆ ಸರಿಹೋಲುವವುಗಳಾಗಿದ್ದುವು. ಪ್ರವಾದಿ ನೂಹ್(ಅ) ಮತ್ತು ಪ್ರವಾದಿ ಇಬ್ರಾಹೀಮ್(ಅ) ಇವರಿಬ್ಬರೂ ಅವಮಾನಗೊಳಿಸಲ್ಪಟ್ಟರು ಮತ್ತು ಹೀನೈಸಲ್ಪಟ್ಟರು. ಅವರಿಬ್ಬರನ್ನೂ ಶತ್ರುಗಳು ದೌರ್ಜನ್ಯ ಮತ್ತು ಚಿತ್ರ ಹಿಂಸೆಗೆ ಗುರಿ ಮಾಡಿದರು. ಅವರಿಬ್ಬರೂ ಶತ್ರುಗಳ ಹಿಂಸೆಯನ್ನು ಸಹನೆಯಿಂದಲೂ ಧೃಢಚಿತ್ತರಾಗಿಯೂ ಸ್ವೀಕರಿಸಿದರು. ಪ್ರವಾದಿ ಇಬ್ರಾಹೀಮ್(ಅ)ರವರ ವಿರೋಧಿಗಳು ದೌರ್ಜನ್ಯ ಮತ್ತು ಕಿರುಕುಳದ ಅಗ್ನಿಯನ್ನು ಹೊತ್ತಿಸಿದ ನಂತರ ಅವರನ್ನು ಜೀವಂತವಾಗಿ ಸುಡಲು ಪ್ರಯತ್ನಿಸಿದರು.

ಪ್ರವಾದಿ ಲೂತ್(ಅ)ರವರನ್ನು ವಿರೋಧಿಸಿದವರಿಗೆ ಧರ್ಮದ ಕುರಿತು ಏನೂ ತಿಳಿದಿರಲಿಲ್ಲ. ಹೀಗಿದ್ದರೂ ಜನರು ಪ್ರವಾದಿ ಲೂತ್(ಅ)ರವರ ಶತ್ರುಗಳಾದರು ಮತ್ತು ಅವರನ್ನು ಮತ್ತು ಅವರ ಅನುಯಾಯಿಗಳನ್ನು ಧರ್ಮದ ಹೆಸರಿನಲ್ಲಿ ವಿರೋಧಿಸಿದರು. ಅವರು ಬೆದರಿಕೆ ಹಾಕಿದರು. ಪ್ರವಾದಿ ಲೂತ್(ಅ)ರವರನ್ನು ಮತ್ತು ಅನುಯಾಯಿಗಳನ್ನು ದೇಶದಿಂದ ಹೊರಅಟ್ಟುವುದಾಗಿ ಮುನ್ನೆಚ್ಚರಿಕೆ ನೀಡಿದರು. ಅವರು ತಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಪ್ರಯೋಗಿಸಿ ಪ್ರವಾದಿ ಲೂತ್(ಅ) ಧರ್ಮ ಪ್ರಚಾರ ಮಾಡದಂತೆ ತಡೆದರು.

ಪ್ರವಾದಿ ಶುಐಬ್(ಅ)ರವರ ಶತ್ರುಗಳು ಸಹ ಅದೇ ರೀತಿ ವರ್ತಿಸಿದರು. ಅವರು ಹೇಳಿದರು:

> "ಎಲೈ ಶುಐಬ್, ನಿಶ್ಚಯವಾಗಿಯೂ ನಾವು ನಿನ್ನನ್ನು ಮತ್ತು ನಿನ್ನನ್ನು ನಂಬಿದವರನ್ನು ನಮ್ಮ ನಗರದಿಂದ ಹೊರಕ್ಕಟ್ಟುವೆವು ಅಥವಾ ನೀವು ನಮ್ಮ ಧರ್ಮಕ್ಕೆ ಮರಳಿ ಬರಬೇಕು."
>
> (ಪವಿತ್ರ ಖುರ್‌ಆನ್ 7:89)

ಮೇಲೆ ವಿವರಿಸಿದ ಈ ಉದಾಹರಣೆಗಳನ್ನು ಉಲ್ಲೇಖಿಸಿ ಪವಿತ್ರ ಖುರ್‌ಆನ್ ಹೀಗೆ ಸಾಬೀತುಗೊಳಿಸುತ್ತದೆ: ಸತ್ಯಧರ್ಮಕ್ಕೆ ಜನರು ಪರಿವರ್ತನೆಗೊಳ್ಳುವ ಒಂದು ವಿಧಾನವು ಪ್ರವಾದಿಗಳ ಕಾಲದಲ್ಲಿ ಜಾರಿಗೆ

ಬರುತ್ತದೆ. ಅದರೊಂದಿಗೆ ಸತ್ಯದ ವಿರೋಧಿಗಳು ಅದನ್ನು ಬಲಾತ್ಕಾರದಿಂದ ತಡೆಯಲೆತ್ನಿಸುವುದು ಸಹ ಕಂಡುಬರುತ್ತದೆ. ಬೆದರಿಕೆಗಳಿಗೆ ಪ್ರವಾದಿ ಶುಐಬ್[ಅ] ನೀಡಿದ ಉತ್ತರವು ದೇವ ನಿಯುಕ್ತರಾದ ಎಲ್ಲಾ ಪ್ರವಾದಿಗಳ ನಿಲುವನ್ನು ಪ್ರತಿನಿಧೀಕರಿಸುತ್ತದೆ. ಪ್ರವಾದಿ ಶುಐಬ್[ಅ] ಹೇಳಿದರು: **"ನಾವು ಅದನ್ನು ಇಷ್ಟಪಡುವುದಿಲ್ಲವಾದರೂ (ನಿಮ್ಮ ಧರ್ಮಕ್ಕೆ ನಾವು ಮರಳಬೇಕೇ?)"**(ಪ.ಖು. 7:89). ಮನುಷ್ಯನ ಹೃದಯವನ್ನು ಬಲಾತ್ಕಾರದಿಂದ ಬದಲಾಯಿಸಲು ಸಾಧ್ಯವೇ? ಒಂದು ಧರ್ಮವು ಮಿಥ್ಯೆಯೆಂದು ತಿಳಿದು ಅದನ್ನು ತ್ಯಜಿಸಿರುವಾಗ ಅದೇ ಧರ್ಮಕ್ಕೆ ಪುನಃ ಹಿಂದಿರುಗಲು ಸಾಧ್ಯವೇ? ಹೊಸ ಧರ್ಮದ ಸತ್ಯವನ್ನು ಮನವರಿಕೆ ಮಾಡಿದ ನಂತರ ತನ್ನ ಹಿಂದಿನ ಧರ್ಮಕ್ಕೆ ಮರಳಲು ಸಾಧ್ಯವೇ?

ಈ ತರ್ಕದಿಂದ ಪಾರಾಗಲು ಯಾವ ನಿರಂಕುಶ ಪ್ರಭುವಿಗೂ ಸಾಧ್ಯವಾಗಿಲ್ಲ. ಖಡ್ಗ ಎಂದೂ ಮಾನವ ಹೃದಯಗಳ ಮೇಲೆ ಅಧಿಕಾರ ನಡೆಸಲಿಲ್ಲ ಎನ್ನುವುದು ಚಾರಿತ್ರಿಕ ಸತ್ಯವಾಗಿದೆ. ಇನ್ನು ಮುಂದೆಯೂ ಅಧಿಕಾರ ನಡೆಸಲು ಅದಕ್ಕೆ ಸಾಧ್ಯವಾಗಲಾರದು. ಮನುಷ್ಯನ ಶರೀರವನ್ನು ಬಲಪ್ರಯೋಗಿಸಿ ಸ್ವಾಧೀನಪಡಿಸಬಹುದಾದರೂ ಮನುಷ್ಯನ ಆತ್ಮವನ್ನು ಬಲಪ್ರಯೋಗಿಸಿ ಸ್ವಾಧೀನಪಡಿಸಲು ಸಾಧ್ಯವಾಗಲಾರದು. ವಿಶ್ವಾಸವು ಹೃದಯಕ್ಕೆ ಸಂಬಂಧಿಸಿದೆ. ಮನುಷ್ಯನ ಪ್ರಕೃತಿ ಎಂದೂ ಬದಲಾವಣೆಗೊಳ್ಳಲಾರದು.

ಧರ್ಮದ ಹೆಸರಿನಲ್ಲಿ ಮರಣದಂಡನೆಗೆ ಗುರಿ ಮಾಡಿ ನಿರಪರಾಧಿಗಳನ್ನು ಶಿಕ್ಷಿಸಿದ ಜನರು ಈ ಸತ್ಯವನ್ನು ಅರಿತಿಲ್ಲ. ಈ ಅನ್ಯಾಯದ ವಿರುದ್ಧ ನಿಷ್ಕಳಂಕರಾದ ಜನರು ಯಾವಾಗಲೂ ಪ್ರತಿಭಟನೆ ಮಾಡುವರು. ಅವರು ಯಾವಾಗಲೂ ಈ ಪ್ರಶ್ನೆಯನ್ನು ಕೇಳುತ್ತಾ ಇರುವರು: "ನಮ್ಮ ಬುದ್ಧಿಯು ತಿರಸ್ಕರಿಸಿದ ವಿಶ್ವಾಸಕ್ಕೆ ನಾವು ಅಂಟಿರಬೇಕೆಂದು ನೀವು ಬಯಸುವಿರೇನು?" ಈ ಪ್ರಶ್ನೆಯನ್ನು ಕೇಳಿದಾಗಲೆಲ್ಲಾ ಧರ್ಮದ ಶತ್ರುಗಳು ಲೋಕದಾದ್ಯಂತ ಪ್ರವಾದಿಗಳನ್ನು ಧರ್ಮಭ್ರಷ್ಟರೆಂದು ಘೋಷಿಸಿ ಮರಣದಂಡನೆಯನ್ನು ವಿಧಿಸಿದರು. ಚಿತ್ರ ಹಿಂಸೆಯ ಮತ್ತು ಶಿಕ್ಷೆಯ ಅವಮಾನವೀಯ ವಿಧಾನಗಳು ಕಂಡುಹಿಡಿಯಲ್ಪಟ್ಟವು. ಹಿಂಸಾಚಾರದ ಕಥೆಯು ಎಂದೂ ಮುಗಿಯದಂತಹದು ಆಗಿರುತ್ತದೆ.

ಪ್ರವಾದಿ ಮೂಸಾ[ಅ] ಮತ್ತು ಅವರ ಅನುಯಾಯಿಗಳು ಅವರ ಕಾಲದ ಫರೋವ, ಹಾಮಾನ್ ಮತ್ತು ಖಾರೂನ್ ಎಂಬ ಧಾರ್ಮಿಕ ಮುಖಂಡರಿಂದ ಹಿಂದಿನ ಪ್ರವಾದಿಗಳು ಅನುಭವಿಸಿದಂತಹ ಹಿಂಸೆಯನ್ನು ಅನುಭವಿಸಿದರು. ಆ ಧಾರ್ಮಿಕ ಮುಖಂಡರು ಹೇಳಿದರು:

> **"ಅವನೊಂದಿಗೆ ವಿಶ್ವಾಸವನ್ನು ಹೊಂದಿದವರ ಪುತ್ರರನ್ನು ಕೊಲ್ಲಿರಿ ಮತ್ತು ಅವರ ಸ್ತ್ರೀಯರನ್ನು ಜೀವಂತವಾಗಿರಲು ಬಿಡಿರಿ."**
> **(ಪವಿತ್ರ ಖುರ್‌ಆನ್ 40:26)**

ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಪರಿವರ್ತನೆ ಹೊಂದಿದವರನ್ನು ಪ್ರವಾದಿಗಳು ಶಿಕ್ಷಿಸಿರಲಿಲ್ಲ. ಹೀಗಿದ್ದರೂ ಪ್ರವಾದಿಗಳನ್ನೂ ಅವರ ಅನುಯಾಯಿಗಳನ್ನೂ ತಥಾಕಥಿತ ಧರ್ಮಭ್ರಷ್ಟತೆಗಾಗಿ ಶಿಕ್ಷಿಸಲಾಯಿತು. ಪ್ರವಾದಿ ಮೂಸಾ[ಅ]ರವರ ನಂತರ ಪ್ರವಾದಿ ಈಸಾ[ಅ] ಚಿತ್ರ ಹಿಂಸೆಗೆ ಅದೇ ರೀತಿ ಗುರಿಯಾದರು. ಕೊನೆಗೆ ಅವರನ್ನು ಶಿಲುಬೆಗೆ ಜಡಿದು ಕೊಲ್ಲಲು ಪ್ರಯತ್ನಿಸಲಾಯಿತು. ರಕ್ತಪಾತ ಮತ್ತು ಹಿಂಸೆ ಯಾವಾಗಲೂ ಧರ್ಮದ ಹೆಸರಿನಲ್ಲಿ ನಡೆಸಲಾಯಿತು. ಅವುಗಳಿಗೆ ಗುರಿಯಾದವರ ಮೇಲೆ ಅವರ ಶತ್ರುಗಳು ಧರ್ಮ ಭ್ರಷ್ಟತೆಯ ವಿಧಿಯನ್ನು ಯಾವಾಗಲೂ ಜಾರಿಗೊಳಿಸುತ್ತಿದ್ದರು. ಹೀಗಿದ್ದರೂ ದೇವನಿಂದ ಅವತೀರ್ಣವಾದ ಯಾವುದೇ ಗ್ರಂಥವು ಒಂದು ಧರ್ಮವನ್ನು ತ್ಯಜಿಸಿ ಇನ್ನೊಂದು ಧರ್ಮವನ್ನು ಸ್ವೀಕರಿಸುವವನಿಗೆ ಯಾವುದೇ ಶಿಕ್ಷೆಯನ್ನು ವಿಧಿಸಿರುವುದಿಲ್ಲ. ಅಪ್ರಾಮಾಣಿಕರಾದ ಜನರು ಧಾರ್ಮಿಕ ಗ್ರಂಥಗಳ ಮೂಲ ಪಾಠವನ್ನು ಬದಲಾಯಿಸಿದ್ದರೆ ಆ ಧಾರ್ಮಿಕ ಗ್ರಂಥಗಳನ್ನು ಆಕ್ಷೇಪಿಸಲು ಸಾಧ್ಯವಿಲ್ಲ. ದೇವನಿಂದ ಪ್ರವಾದಿಗಳಿಗೆ ಅವತೀರ್ಣವಾದ ಗ್ರಂಥಗಳು ಸಹಜವಾಗಿಯೇ ಹಿಂಸಾಚಾರವನ್ನು ಉಪದೇಶಿಸಲಾರವು.

ಧರ್ಮಗಳ ಚರಿತ್ರೆಯನ್ನು ಉಲ್ಲೇಖಿಸಿ ಪವಿತ್ರ ಖುರ್‌ಆನ್ ಸಾಬೀತು ಪಡಿಸುವುದೇನೆಂದರೆ, ಪ್ರವಾದಿಗಳು ಮತ್ತು ಅವರ ಅನುಯಾಯಿಗಳು ಹಿಂಸಾಚಾರಗಳಿಗೆ ಬಲಿಯಾದವರಾಗಿದ್ದರು. ಅವರು ದೌರ್ಜನ್ಯವನ್ನು ಸಹನೆಯಿಂದ ಸ್ವೀಕರಿಸಿದರು. ಧರ್ಮವನ್ನು ಪರಿವರ್ತಿಸುವವರು ಧರ್ಮದ ಹೆಸರಿನಲ್ಲಿ ಜನರನ್ನು ಚಿತ್ರ ಹಿಂಸೆಗೆ ಗುರಿಮಾಡುವುದು ನಂಬಲು ಅಸಾಧ್ಯವಾದ ಸಂಗತಿಯಾಗಿದೆ. ದೇವನಿಂದ ಕಳುಹಿಸಲ್ಪಟ್ಟ ಪ್ರವಾದಿಗಳು ನಮ್ಮ ಧರ್ಮ ಪರಿವರ್ತನೆಗೆ ಆಗಮಿಸಿದವರಾದ ಕಾರಣ ಇದನ್ನು ಅಂಗೀಕರಿಸಲು ಸಾಧ್ಯವಿಲ್ಲ. ಅವರ ಆಗಮನೋದ್ದೇಶವನ್ನೇ ಇದು ನಿರರ್ಥಕಗೊಳಿಸುತ್ತದೆ. ಒಬ್ಬ ಪ್ರವಾದಿಯ ಅನುಯಾಯಿಗಳನ್ನು ಆ ಪ್ರವಾದಿಯ ಜೀವಿತ ಕಾಲದಲ್ಲಿ ಮಾತ್ರವಲ್ಲ ಅವರು ನಿಧನ ಹೊಂದಿದ ನಂತರ ನೂರಾರು ವರ್ಷಗಳ ಕಾಲ ಹಿಂಸೆಗೆ ಗುರಿ ಮಾಡಿದುದರ ಕುರಿತು ಪವಿತ್ರ ಖುರ್‌ಆನ್ ಪ್ರಸ್ತಾಪಿಸುತ್ತದೆ. ಅಂತಹ ಹಿಂಸಾಚಾರಗಳಿಗೆ ದೇವ ಸಮ್ಮತಿ ಇಲ್ಲ.

ಪವಿತ್ರ ಖುರ್‌ಆನ್ ಗುಹಾ ನಿವಾಸಿಗಳಾದ ಜನರ ಕಥೆಯನ್ನು ವಿವರಿಸಿದೆ. ಕ್ರೈಸ್ತ ಧರ್ಮೀಯರಾದ ಅವರನ್ನು ಮುನ್ನೂರು ವರ್ಷಗಳ ಕಾಲ ಹಿಂಸಿಸಲಾಯಿತು. ಆ ಬಡ ಜನರನ್ನು ಚಿತ್ರ ಹಿಂಸೆಗಳಿಗೆ ಗುರಿ ಮಾಡಲಾದ ಸ್ಥಳಗಳನ್ನು ನಾನು ಸಹ ನೋಡಿದ್ದೇನೆ. ಗೂಳಿಗಳೊಂದಿಗೆ ಮತ್ತು ಸಿಂಹಗಳೊಂದಿಗೆ ಹೋರಾಡಲು ಬಿಟ್ಟು, ಆ ಹೋರಾಟವನ್ನು ವೀಕ್ಷಿಸಲು ರಚಿಸಲಾದ ವರ್ತುಲಾಕಾರದ ಕಟ್ಟಡಗಳನ್ನು ನೋಡಿದೆ. ಈ ಸ್ಥಳಗಳಲ್ಲಿ ನಗ್ನ ಕ್ರೈಸ್ತರನ್ನು ಹಸಿದ ಕ್ರೂರ ಮೃಗಗಳ ಮುಂದೆ ಎಸೆಯಲಾಗುತ್ತಿತ್ತು. ಕಾಡು ಮೃಗಗಳು ಭಯಾನಕವಾಗಿ ಅರಚಿ ನಿಸ್ಸಹಾಯಕರಾಗಿದ್ದ ಕ್ರೈಸ್ತರನ್ನು ಆಕ್ರಮಿಸಿ ಕೊಲ್ಲುತ್ತಿದ್ದುವು. ಈ ತಥಾಕಥಿತ 'ಧರ್ಮಭ್ರಷ್ಟ'ರನ್ನು ಹಲವಾರು ದಿವಸ ಆಹಾರ ನೀಡದೆ ಇರಿಸಲಾದ ಗೂಳಿಗಳ ಮುಂದೆ ಎಸೆಯಲಾಗುತ್ತಿತ್ತು. ಹಸಿದ ಗೂಳಿಗಳು ಗುಟುರು ಹಾಕುತ್ತಾ, ಬುಸುಗುಟ್ಟುತ್ತಾ ಭಯಾನಕವಾಗಿ ಶಬ್ದ ಮಾಡುತ್ತಾ ಆಕ್ರಮಿಸುತ್ತಿದ್ದುವು.

ಆ ಬಡ ಕ್ರೈಸ್ತರು ಕೋಡುಗಳಿಂದ ತಿವಿಯಲ್ಪಟ್ಟು ಅಥವಾ ತುಳಿಯಲ್ಪಟ್ಟು ಕೊಲ್ಲಲ್ಪಡುತ್ತಿದ್ದರು. ಈ ರಕ್ತರಂಜಿತ ಕೇಳಿಯ ನಂತರ ನಗುತ್ತಾ ರೋಮನ್ನರು ತಮ್ಮ ಮನೆಗಳಿಗೆ ಹರ್ಷಚಿತ್ತರಾಗಿ ಮರಳುತ್ತಿದ್ದರು. 'ಧರ್ಮ ಭ್ರಷ್ಟರು' ಅರ್ಹವಾದ ರೀತಿಯಲ್ಲಿ ಶಿಕ್ಷಿಸಲ್ಪಟ್ಟರು ಎಂದು ಅವರು ಭಾವಿಸುತ್ತಿದ್ದರು. ಆದರೆ ಆ ಕ್ರೈಸ್ತರ ಕಾಲುಗಳು ನಡುಗುತ್ತಾ ಇದ್ದರೂ ಅವರ ಹೃದಯಗಳು ದೇವ ವಿಶ್ವಾಸದಿಂದ ತುಂಬಿ ತುಡಿಯುತ್ತಿದ್ದುವು.

ಅವರ ವಿರುದ್ಧ ಹಿಂಸಾಚಾರವು ನಿರಂತರವಾಗಿ ಮೂರು ಶತಮಾನಗಳ ಕಾಲ ಮುಂದುವರಿಯಿತು. ಅವರಿಗೆ ಅವಿತಿರಲು ಸ್ಥಳ ದೊರೆಯದಿದ್ದಾಗ ಅವರು ಭೂಗತರಾಗಿ ಕ್ಯಾಟಕೋಮ್‌ಗಳೆಂದು(Catacombs) ಆ ಮೇಲೆ ಹೆಸರಿಸಲಾದ ಗುಹೆಗಳಲ್ಲಿ ವಾಸಿಸಲು ತೊಡಗಿದರು. ಚಕ್ರವ್ಯೂಹದಂತೆ ನಿರ್ಮಿಸಲಾದ ಈ ನೀಳವಾದ ಗುಹೆಗಳು ಇಂದು ಸಹ ಇವೆ. ಆ ಕ್ರೈಸ್ತರಿಗೆ ಕ್ರಿಮಿ ಕೀಟಗಳ, ಚೇಳುಗಳ ಮತ್ತು ಹಾವುಗಳ ಸಹವಾಸದೊಂದಿಗೆ ಜೀವಿಸಲು ಸಾಧ್ಯವಿದ್ದಿತು. ಆದರೆ ಅಂದವಾದ ವಸ್ತ್ರಧಾರಣೆ ಮಾಡುತ್ತಿದ್ದ ಧಾರ್ಮಿಕ ನಾಯಕರೊಂದಿಗೆ ಜೀವಿಸಲು ಸಾಧ್ಯವಿರಲಿಲ್ಲ.

ಭೂಗತರಾಗಿ ಜೀವಿಸಿದ ಅಸ್‌ಹಾಬುಲ್ ಕಹ್‌ಫ್ (ಗುಹೆಯ

ನಿವಾಸಿಗಳು) ಇವರ ಕುರಿತು ಪವಿತ್ರ ಖುರ್‌ಆನ್ ಪ್ರಸ್ತಾಪಿಸುವುದರೊಂದಿಗೆ ಏಕದೇವ ವಿಶ್ವಾಸಿಗಳಾಗಿದ್ದ ಕ್ರೈಸ್ತರ ಕುರಿತು ಸಹ ವಿವರಿಸಿದೆ. ಅವರನ್ನು ಜೀವಂತವಾಗಿ ಶತ್ರುಗಳು ಸುಡುತ್ತಿದ್ದರು. ಪವಿತ್ರ ಖುರ್‌ಆನ್‌ನಲ್ಲಿ ದೇವನು ಹೀಗೆನ್ನುತ್ತಾನೆ:

**"ನಕ್ಷತ್ರ ರಾಶಿಗಳನ್ನು ಹೊಂದಿರುವ ಆಕಾಶದಾಣೆ, ವಾಗ್ದಾನ ಮಾಡಲ್ಪಟ್ಟ ದಿನದಾಣೆ, ಸಾಕ್ಷಿಯಾಣೆ ಮತ್ತು ಯಾರ ಬಗ್ಗೆ ಸಾಕ್ಷಿ ಹೇಳಲಾಯಿತೋ ಅವನಾಣೆ. ಕಂದಕದ ಜನರು ನಾಶ ಹೊಂದಲಿ- ಇಂಧನದಿಂದ ಅಗ್ನಿಯನ್ನು ಪ್ರಜ್ವಲಗೊಳಿಸುವವರು. ಅವರು ಅದರ ಸಮೀಪ ಕುಳಿತುಕೊಂಡಿರುವಾಗ, ಅವರು ಸತ್ಯವಿಶ್ವಾಸಿಗಳಿಗೆ ಏನು ಮಾಡುತ್ತಿದ್ದಾರೆಂಬುದಕ್ಕೆ ಅವರೇ ಸಾಕ್ಷಿಗಳಾಗಿದ್ದರು. ಅವರು ಸತ್ಯ ವಿಶ್ವಾಸಿಗಳನ್ನು ದ್ವೇಷಿಸುತ್ತಾ ಇದ್ದುದು ಸತ್ಯ ವಿಶ್ವಾಸಿಗಳು ಪ್ರತಾಪಶಾಲಿಯೂ ಸ್ತುತ್ಯರ್ಹನೂ ಆಗಿರುವ ಅಲ್ಲಾಹನನ್ನು ನಂಬುತ್ತಾರೆ ಎಂಬುದಕ್ಕಾಗಿದೆ. ಅವನಿಗೆ ಆಕಾಶಗಳ ಮತ್ತು ಭೂಮಿಯ ಅರಸೊತ್ತಿಗೆ ಇದೆ. ಅಲ್ಲಾಹನು ಸರ್ವಸಂಗತಿಗಳಿಗೂ ಸಾಕ್ಷಿಯಾಗಿದ್ದಾನೆ." (ಪವಿತ್ರ ಖುರ್‌ಆನ್ 85:2-10)**

ಈ ದೌರ್ಜನ್ಯಗಳು ಅತಿರೇಕವಾದುದು ತಥಾಕಥಿತ 'ಧಾರ್ಮಿಕ ಸಂರಕ್ಷರು' ಎಂದು ತಮ್ಮನ್ನು ಕರೆಸಿಕೊಳ್ಳುವವರ ಕಾರಣದಿಂದಾಗಿದೆ. ಅವರು ವಾಸ್ತವಿಕವಾಗಿ ಅಲ್ಲಾಹನ ಆರಾಧನೆಯನ್ನು ತಡೆಯುತ್ತಾರೆ. ಅವರಿಂದ ಹಿಂಸಿಸಲ್ಪಡುವವರು ತಾವು ಗುರಿಯಾದ ಹಿಂಸೆಗಿಂತ ಹೆಚ್ಚಾಗಿ ತಾವು ದೇವಾರಾಧನೆಯಿಂದ ತಡೆಯಲ್ಪಟ್ಟುದರ ಬಗ್ಗೆ ನೋವನ್ನು ಅನುಭವಿಸುತ್ತಾರೆ. ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

**"ಅಲ್ಲಾಹನ ಮಸ್‌ಜಿದ್‌ಗಳಲ್ಲಿ ಅವನ ನಾಮ ಸ್ಮರಣೆ ಮಾಡುವುದನ್ನು ತಡೆಯಲು ಹಾಗೂ ಅವುಗಳನ್ನು ಹಾಗೆ ನಾಶಪಡಿಸಲು ಶ್ರಮಿಸುವವನಿಗಿಂತ ದೊಡ್ಡ ಅತಿಕರ್ಮಿ ಯಾರು?" (ಪವಿತ್ರ ಖುರ್‌ಆನ್ 2:115)**

ಧಾರ್ಮಿಕ ಸ್ವಾತಂತ್ರ್ಯವನ್ನು ದಮನ ಮಾಡಲು ಬಲಪ್ರಯೋಗ ನಡೆಸುವುದನ್ನು ಪವಿತ್ರ ಖುರ್‌ಆನ್ ಸಂಪೂರ್ಣವಾಗಿ ತಿರಸ್ಕರಿಸುತ್ತದೆ. ಇಂತಹ ಬಲಾತ್ಕಾರಗಳು ನಡೆಯುತ್ತಿವೆಯಾದರೂ ಸತ್ಯ ವಿಶ್ವಾಸಿಗಳು ಅಲ್ಲಾಹನ ಹೆಸರನ್ನು ಪ್ರಚಾರ ಮಾಡಲು ಬಲಾತ್ಕಾರವನ್ನು ಎಂದೂ ಪ್ರಯೋಗಿಸಲಾರರೆಂದು ಪವಿತ್ರ ಖುರ್‌ಆನ್ ಘೋಷಿಸುತ್ತದೆ.

ಅಲ್ಲಾಹನ ದಿವ್ಯ ಪ್ರಕಾಶವು ಲೋಕವನ್ನು ಬೆಳಗಿಸುವ ಮೊದಲು ಸಂಭವಿಸಿದ ಹಿಂಸಾಚಾರಗಳ ಚರಿತ್ರೆಯನ್ನು ನಾವು ಇದುವರೆಗೆ ವಿವರಿಸಿದೆವು. ಕೊನೆಗೆ ಸತ್ಯದ ಸೂರ್ಯನು ಅರಬ್ ದೇಶದ ದಿಗಂತದಲ್ಲಿ ಉದಿಸಿದನು. ಲೋಕದಾದ್ಯಂತ ಪ್ರವಾದಿ ಮುಹಮ್ಮದ್(ಸ)ರವರ ಸಂದೇಶದ ಬೆಳಕು ಹಬ್ಬಿತು.

ಲೋಕವು ಸಾವಿರಾರು ವರ್ಷಗಳಿಂದ ಅತ್ಯಂತ ಶ್ರೇಷ್ಠ ಪ್ರವಾದಿಯನ್ನು ಪ್ರತೀಕ್ಷಿಸುತ್ತಾ ಇತ್ತು. ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳು ಈ ಪ್ರವಾದಿಯ ಆಗಮನವನ್ನು ಎದುರು ನೋಡುತ್ತಾ ಜೀವಿಸಿ ಮೃತರಾದರು. ಪ್ರವಾದಿಗಳ ಕುಲ ಶ್ರೇಷ್ಠರಾಗಿ, ಪ್ರವಾದಿಗಳ ಅಂಗೀಕಾರದ ಮುದ್ರೆಯಾಗಿ ಆಗಮಿಸಲಿದ್ದ ಈ ಪ್ರವಾದಿಗಾಗಿಯೇ ವಿಶ್ವವು ಸೃಷ್ಟಿಸಲ್ಪಟ್ಟಿತು. ಅವರು ತಮ್ಮ ಸೃಷ್ಟಿಕರ್ತನ ಹಿರಿಮೆಯನ್ನು ಪ್ರತಿಬಿಂಬಿಸುತ್ತಾ ಆಗಮಿಸಿದರು. ಅವರು ಇತರ ಎಲ್ಲಾ ಪ್ರವಾದಿಗಳಿಗಿಂತ ಶ್ರೇಷ್ಠರಾಗಿದ್ದರು. ಅವರು ತಂದ ಧರ್ಮವು ಪರಿಪೂರ್ಣವಾಗಿತ್ತು.

ಆದರೆ ಅವರು ಸಹ ದೌರ್ಜನ್ಯಗಳಿಗೆ ಗುರಿಯಾದರು. ಹಿಂದಿನ ಯಾವುದೇ ಉದಾಹರಣೆಗೆ ಸರಿ ಹೋಲದ ರೀತಿಯಲ್ಲಿ ಕಠಿಣವಾಗಿ ಅವರನ್ನು ಪೀಡಿಸಲಾಯಿತು. ನಮ್ಮ ನೇತಾರರಾದ ಪ್ರವಾದಿ ಮುಹಮ್ಮದ್(ಸ)ರವರು ಎಲ್ಲಾ ರೀತಿಯ ಹಿಂಸಾಚಾರಗಳನ್ನೂ ಹಿಂದಿನ ಪ್ರವಾದಿಗಳು ಮತ್ತು ಅನುಯಾಯಿಗಳು ಅನುಭವಿಸಿದಂತಹ ಚಿತ್ರ ಹಿಂಸೆಗಳನ್ನೂ ಸಹಿಸಿದರು.

ಇಸ್ಲಾಮ್ ಧರ್ಮವನ್ನು ಅವಲಂಬಿಸಿದ ಆರಂಭ ಕಾಲದ ಮುಸ್ಲಿಮರನ್ನು ಮರುಭೂಮಿಯ ಸುಡು ಬಿಸಿಲಲ್ಲಿ ಮಲಗಿಸಲಾಯಿತು. ಸುಟ್ಟ ಕಲ್ಲುಗಳನ್ನು ಅವರ ಎದೆಗಳ ಮೇಲೆ ಇಡಲಾಯಿತು. ಸತ್ತ ಮೃಗಗಳ ಹಾಗೆ ಅವರನ್ನು ಮಕ್ಕದ ಮಾರ್ಗಗಳಲ್ಲಿ ಎಳೆದುಕೊಂಡೊಯ್ಯಲಾಯಿತು. ಅವರನ್ನು ಬಹಿಷ್ಕರಿಸಲಾಯಿತು. ಅವರು ಹಸಿವು ಮತ್ತು ದಾಹದಿಂದ ಬಳಲುವಂತೆ ಮಾಡಲಾಯಿತು. ಅವರನ್ನು ಸೆರೆಮನೆಗಳಿಗೆ ತಳ್ಳಲಾಯಿತು. ಅವರ ಸ್ವತ್ತುಗಳನ್ನು ಅಪಹರಿಸಲಾಯಿತು. ಅವರ ಕುಟುಂಬ ಸಂಬಂಧಗಳನ್ನು ಮುರಿಯಲಾಯಿತು. ಗರ್ಭಿಣಿ ಸ್ತ್ರೀಯರನ್ನು ಒಂಟೆಗಳ ಮೇಲಿಂದ ಕೆಳಗೆ ದೂಡಲಾಯಿತು. ಹೀಗೆ ಕೆಳಗೆ ಹಾಕಲ್ಪಟ್ಟು ಮೃತರಾದವರನ್ನು ನೋಡಿ ವಿರೋಧಿಗಳು ಹರ್ಷಗೊಳ್ಳುತ್ತಿದ್ದರು. ಮೃತ ದೇಹಗಳನ್ನು ಎರಡು ತುಂಡುಗಳಾಗಿ ಸೀಳಲಾಯಿತು. ಪ್ರವಾದಿವರ್ಯ(ಸ)ರವರ ಪಿತೃ ಸಹೋದರರ ಯಕೃತ್ತನ್ನು ಜಗಿದು ತಿನ್ನಲಾಯಿತು. ಅವರನ್ನು ಖಡ್ಗದಿಂದ ಕೊಲ್ಲಲಾಯಿತು ಮತ್ತು ಬಾಣ ಹಾಯಿಸಿ ತಿವಿಯಲಾಯಿತು. ಪ್ರವಾದಿಯವರನ್ನು(ಸ) ತಾಯಿಫ್ ನಗರದ ದುಷ್ಕರ್ಮಿಗಳು ಕಲ್ಲೆಸೆದು ಓಡಿಸಿದರು. ಅವರನ್ನು ಬೆನ್ನಟ್ಟಿದ ಪುಂಡು ಹುಡುಗರು ಎಸೆದ ಕಲ್ಲುಗಳು ಅವರ ಮೈಗೆ ತಗಲಿ ಸುರಿದ ರಕ್ತದಿಂದ ಮಾರ್ಗಕ್ಕೆ ಹಾಸಿದ ಕಲ್ಲುಗಳು ಕೆಂಪಗಾದುವು. ಉಹುದ್ ರಣರಂಗದಲ್ಲಿ ಪ್ರವಾದಿ(ಸ) ಬಹಳ ತೀವ್ರವಾಗಿ ಗಾಯಗೊಂಡರು.

ಈ ಹಿಂಸಾಚಾರ ನಡೆದುದು ಧರ್ಮದ ಹೆಸರಿನಲ್ಲಿ. ಮುಸ್ಲಿಮರು "ರಬ್ಬುನಲ್ಲಾಹು"- ನಮ್ಮ ಪ್ರಭು ಅಲ್ಲಾಹನು ಎಂದು ಹೇಳುತ್ತಿದ್ದರು. ಅವರು ಚಿತ್ರ ಹಿಂಸೆಗೂ ದೌರ್ಜನ್ಯಕ್ಕೂ ಗುರಿಯಾದುದು ಧಾರ್ಮಿಕ ಕಾರಣದಿಂದಾಗಿದೆ. ಮಕ್ಕದ ಬಹು ದೈವಾರಾಧಕರ ದೃಷ್ಟಿಯಲ್ಲಿ ಮುಸ್ಲಿಮರು ಧರ್ಮಭ್ರಷ್ಟರಾಗಿದ್ದರು. ಬಹುದೇವಾರಾಧಕರು ಪ್ರವಾದಿಯವರನ್ನೂ(ಸ) ಅನುಯಾಯಿಗಳನ್ನೂ "ಸಾಬಿ" ಎಂದು ಕರೆಯುತ್ತಿದ್ದರು. ತಮ್ಮ ಪುರಾತನ ಧರ್ಮವನ್ನು ತ್ಯಜಿಸಿ ಹೊಸ ಧರ್ಮವನ್ನು ಸ್ವೀಕರಿಸುವವರನ್ನು ಸಾಬಿಗಳೆಂದು ಅವರು ಕರೆಯುತ್ತಿದ್ದರು. ಈ 'ಕೆಡುಕ'ನ್ನು ನಿವಾರಿಸಲು ಅವರು ತಮ್ಮ ಹಿಂದಿನ ಕಾಲದವರು ಅವಲಂಬಿಸಿದ ಹಿಂಸಾಚಾರ ಮತ್ತು ದೌರ್ಜನ್ಯಗಳ ವಿಧಾನಗಳನ್ನು ಕೃತಿ ರೂಪಕ್ಕೆ ತಂದರು. ಪ್ರವಾದಿ ಮುಹಮ್ಮದ್(ಸ) ಮತ್ತು ಅವರ ಅನುಯಾಯಿಗಳು ದೀರ್ಘಕಾಲ ಹಿಂಸೆಯನ್ನು ದೃಢ ಚಿತ್ತರಾಗಿ ಸಹಿಸಿ, ಧರ್ಮ ವಿರೋಧಿಗಳಾದ ಜನರಿಂದಲೇ ಕೆಡುಕುಗಳು ಸಂಭವಿಸುತ್ತವೆ; ಸತ್ಯದ ಅನುಯಾಯಿಗಳಿಂದ ಅದು ಸಂಭವಿಸುವುದಿಲ್ಲ ಎಂದು ಸಾಬೀತುಗೊಳಿಸಿದರು.

ಅಲ್ಲಾಹನಿಂದ ಅತುಲ್ಯವಾದ ಪದವಿಗೇರಿಸಲ್ಪಟ್ಟ ಪ್ರವಾದಿಯವರು(ಸ) ತನ್ನನ್ನು ಪೀಡಿಸಿದವರಿಗೆ ಎಂತಹ ಪ್ರೀತಿ ಭರಿತ ಕ್ಷಮಾದಾನ ನೀಡಿದರೆಂದರೆ ಅದಕ್ಕೆ ಸಮಾನವಾದ ಸಂಭವ ಚರಿತ್ರೆಯಲ್ಲಿ ಎಂದೂ ನಡೆದಿಲ್ಲ. ವಿಜಯವು ದೊರಕಿ ಮಕ್ಕದ ಬಹುದೇವಾರಾಧಕರು ಪ್ರವಾದಿಯವರ(ಸ) ಅಧೀನಕ್ಕೆ ಬಂದಾಗ ಅವರು ಸಾಮೂಹಿಕ ಕ್ಷಮಾದಾನವನ್ನು ಘೋಷಿಸಿದರು. ಅಲ್ಲಿ ಸಾಮೂಹಿಕ ನರಹತ್ಯೆ ನಡೆಯಲಿಲ್ಲ. ದೌರ್ಜನ್ಯಗಾರರಿಗೆ ಯಾವ ಶಿಕ್ಷೆಯನ್ನೂ ವಿಧಿಸಲಿಲ್ಲ. ಯಾರನ್ನೂ ಸೆರೆಹಿಡಿಯಲಿಲ್ಲ. ಯಾರನ್ನೂ ಮರಣದದಂಡನೆಗೆ ಗುರಿ ಮಾಡಲಿಲ್ಲ. ಸೇಡು ತೀರಿಸುವಿಕೆಗೆ ಬದಲಾಗಿ ಪವಿತ್ರ ಖುರ್‌ಆನಿನ ಒಂದು ಘೋಷಣೆ ಮೊಳಗಿಸಲ್ಪಟ್ಟಿತು:

**"ಈ ದಿನ ನಿಮ್ಮ ಮೇಲೆ ಯಾವ ದೋಷಾರೋಪವೂ ಇಲ್ಲ. ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ. ಅವನು ಕಾರುಣ್ಯವಂತರ ಪೈಕಿ ಅತ್ಯಂತ ಕಾರುಣ್ಯವಂತನಾಗಿದ್ದಾನೆ." (12:93)**

4

ಆ ದಿನ ಕ್ರೂರಿಗಳಲ್ಲಿ ಅತ್ಯಂತ ಕ್ರೂರಿಗಳಾಗಿದ್ದವರನ್ನು ಕ್ಷಮಿಸಲಾಯಿತು. ನಿಸ್ಸಹಾಯಕರಾಗಿದ್ದ ಗುಲಾಮರನ್ನು ಸುಡುವ ಮರಳಲ್ಲಿ ಮಲಗಿಸಿ ಪೀಡಿಸಿದವರನ್ನು ಕ್ಷಮಿಸಲಾಯಿತು. ಮುಸ್ಲಿಮರನ್ನು ಮಾರ್ಗಗಳಲ್ಲಿ ಮಲಗಿಸಿ ಮೃಗಗಳ ಹಾಗೆ ಎಳೆದುಕೊಂಡು ಹೋದವರನ್ನು ಕ್ಷಮಿಸಲಾಯಿತು. ಶಾಂತಿ ಭಂಗ ಮಾಡಿದವರನ್ನೂ ನಿಸ್ಸಹಾಯಕರಾಗಿದ್ದ ಮುಸ್ಲಿಮರಿಗೆ ಕಲ್ಲೆಸೆದವರನ್ನೂ ಪ್ರವಾದಿಯವರ[ಸ] ಪಿತೃ ಸಹೋದರರ ಯಕೃತ್ತನ್ನು ತಿಂದ ಮಹಿಳೆಯನ್ನೂ ಕ್ಷಮಿಸಲಾಯಿತು.

ಆದಮ್[ಅ] ಮೊದಲುಗೊಂಡು ಇಂದಿನ ತನಕದ ಚರಿತ್ರೆಯು ಎಂದಾದರೂ ನಷ್ಟವಾದರೆ, ಅದರೊಂದಿಗೆ ಎಲ್ಲಾ ಹಿಂಸಾಚಾರಗಳ ಮತ್ತು ಮಾನವ ಹಕ್ಕುಗಳ ಕೊಡುಗೆಗಳ ದಾಖಲೆಗಳು ನಾಶವಾದರೂ ಪ್ರವಾದಿ ಮುಹಮ್ಮದ್‌ರವರ[ಸ] ಜೀವಿತ ಚರಿತ್ರೆಯ ಕಡೆಗೆ ಒಮ್ಮೆ ದೃಷ್ಟಿ ಹಾಯಿಸಿದರೆ ಸಾಬೀತಾಗುವುದೇನೆಂದರೆ, ಸತ್ಯ ಧರ್ಮವು ದ್ವೇಷವನ್ನು, ಹಿಂಸೆಯನ್ನು ಧ್ವಂಸನವನ್ನು ಮತ್ತು ಅಭಿಪ್ರಾಯಗಳ ದಮನವನ್ನು ಪ್ರತಿಪಾದಿಸುವುದಿಲ್ಲ.

ಪ್ರವಾದಿ ಮುಹಮ್ಮದ್‌ರವರು[ಸ] ತನ್ನ ಉಪದೇಶಗಳನ್ನು ಧಾರ್ಮಿಕ ಸಹಿಷ್ಣುತೆಗೆ ಕರೆನೀಡುವುದಕ್ಕೆ ಮಾತ್ರ ಸೀಮಿತಗೊಳಿಸಲಿಲ್ಲ. ಇಸ್ಲಾಮಿನ ಪ್ರವಾದಿ "ವಿಶ್ವದ ಎಲ್ಲರಿಗೂ ಒಂದು ಅನುಗ್ರಹ" (ಪವಿತ್ರ ಖುರ್‌ಆನ್ 21:108) ಆಗಿರುವ ಕಾರಣ ಪವಿತ್ರ ಖುರ್‌ಆನ್ ಸಾರ್ವತ್ರಿಕವಾದೊಂದು ಘೋಷಣೆ ಮಾಡಿತು: "ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ." ಬಲಾತ್ಕಾರವು ಅನಗತ್ಯವಾಗಿದೆ ಏಕೆಂದರೆ "ಸನ್ಮಾರ್ಗ ಮತ್ತು ದುರ್ಮಾರ್ಗ ಸ್ಪಷ್ಟವಾಗಿಯೂ ಭಿನ್ನವಾಗಿವೆ." (ಪವಿತ್ರ ಖುರ್‌ಆನ್ 2:257). ಅವುಗಳೆರಡರಲ್ಲಿ ಒಂದನ್ನು ಮತ್ತೊಂದು ಎಂದು ಗುರುತಿಸುವ ಸಾಧ್ಯತೆಯಿಲ್ಲ. ಮೇಲಿಂದ ಮೇಲೆ ನೋಡಿದರೆ ಈ ಘೋಷಣೆ ಅಸಾಧಾರಣವಾದುದೆಂದೂ ಅಸಂಬದ್ಧವಾದುದೆಂದೂ ತೋರಬಹುದು. ಒಂದು ಕಡೆಯಲ್ಲಿ, ಜನರ ಚಿಕ್ಕದಾದೊಂದು ಗುಂಪನ್ನು ಅವರ ತಥಾಕಥಿತ 'ಧರ್ಮಭ್ರಷ್ಟತೆ'ಗಾಗಿ ತಮಗೆ ಸಾಧ್ಯವಿರುವ ಎಲ್ಲಾ ಮಾರ್ಗಗಳನ್ನು ಬಳಸಿ ನಾಶ ಮಾಡಲು ನಿರಂಕುಶ ಅಧಿಕಾರ ಹೊಂದಿದವರು ಬಯಸುತ್ತಾರೆ. ತಥಾಕಥಿತ ಧರ್ಮಭ್ರಷ್ಟವಾದ ಈ ಗುಂಪು ಅಧಿಕಾರ ಪಡೆದಾಗ ಹೀಗೆ ಘೋಷಿಸಲು ಪವಿತ್ರ ಖುರ್‌ಆನ್ ಆದೇಶಿಸುತ್ತದೆ:

> **"ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ. ಯಾವಾತನು ದುಷ್ಟ ಶಕ್ತಿಗಳನ್ನು ತಿರಸ್ಕರಿಸಿ ಅಲ್ಲಾಹನನ್ನು ನಂಬುತ್ತಾನೋ ಖಂಡಿತವಾಗಿಯೂ ಆತನು ಬಲಿಷ್ಠವಾದ, ಎಂದಿಗೂ ಮುರಿದು ಹೋಗಲಾರದ ಕೈಯಾಸರೆಯನ್ನು ಹಿಡಿದಿದ್ದಾನೆ."**
>
> **(ಪವಿತ್ರ ಖುರ್‌ಆನ್ 2:257)**

ಇಲ್ಲಿ ಒಂದು ಸಂಗತಿ ಗಮನಾರ್ಹವಾಗಿದೆ. ಈ ವಚನ ಪವಿತ್ರ ಖುರ್‌ಆನಿನ ಎರಡನೆಯ ಅಧ್ಯಾಯವಾದ ಅಲ್‌ಬಖರದ ಒಂದು ಭಾಗವಾಗಿದೆ. ಈ ಅಧ್ಯಾಯವು ಪ್ರವಾದಿ ಮುಹಮ್ಮದ್‌ರವರು[ಸ] ಮದೀನಕ್ಕೆ ತಲಪಿದ ನಂತರ ಆರಂಭದ ಎರಡು ಅಥವಾ ಮೂರು ವರ್ಷಗಳಲ್ಲಿ ಅವತೀರ್ಣಗೊಂಡಿತು. ಮದೀನದಲ್ಲಿ ಮುಸ್ಲಿಮರು ಮಕ್ಕದಲ್ಲಿ ಅನುಭವಿಸಿದ ಹಿಂಸಾಚಾರಗಳಿಂದ ಮುಕ್ತರಾಗಿದ್ದರು ಮಾತ್ರವಲ್ಲ ಅಧಿಕಾರವನ್ನು ಸಹ ಹೊಂದಿದ್ದರು. ಒಂದೆರಡು ವರ್ಷಗಳ ಹಿಂದೆ 'ತನ್ನ ಧರ್ಮತ್ಯಾಗಕ್ಕಾಗಿ' ಹಿಂಸಾಚಾರಗಳಿಗೆ ಗುರಿಯಾದ ಪ್ರವಾದಿಯಿಂದ ಇದಕ್ಕಿಂತಲೂ ಹೆಚ್ಚು ಮಾನವೀಯವಾದ ಮತ್ತು ಔದಾರ್ಯಪೂರ್ಣವಾದ ಘೋಷಣೆ ಬೇರೆ ಪ್ರತೀಕ್ಷಿಸಲು ಸಾಧ್ಯವೆ?

ಧರ್ಮದ ಹೆಸರಿನಲ್ಲಿ ಹಿಂಸೆಯನ್ನು ಮಾಡುವವರು ಧರ್ಮದ ಸತ್ವವೇನೆಂಬುದನ್ನು ತೀರಾ ತಿಳಿಯದವರಾಗಿದ್ದಾರೆ. ಧರ್ಮವೆಂದರೆ ಹೃದಯಗಳ ಸಂಪೂರ್ಣ ಪರಿವರ್ತನೆಯಾಗಿದೆ. ಧರ್ಮವೆಂದರೆ ರಾಜಕೀಯವಲ್ಲ. ಧರ್ಮದ ಅನುಯಾಯಿಗಳು ರಾಜಕೀಯ ಪಕ್ಷಗಳನ್ನು ಕಟ್ಟುವುದಿಲ್ಲ. ಅದು ಸೀಮಿತ ನಿಷ್ಠೆಯನ್ನು ಹೊಂದಿದ ರಾಷ್ಟ್ರೀಯತೆಯಲ್ಲ. ಅದು ಸೀಮಿತ ಗಡಿಗಳನ್ನು ಹೊಂದಿದ ಒಂದು ದೇಶವೂ ಅಲ್ಲ. ಅದು ಹೃದಯಗಳ ಪರಿವರ್ತನೆ ಆಗಿರುತ್ತದೆ. ಅದು ಆತ್ಮದ ಒಳಿತಿಗಾಗಿ ಮಾಡುವ ಪರಿವರ್ತನೆಯಾಗಿದೆ. ಹೃದಯದ ಅಂತರಾಳದಲ್ಲಿ ಧರ್ಮದ ಮನೆ ಇದೆ. ಅದು ಖಡ್ಗದ ಅಧಿಕಾರದ ಪರಿಧಿಯ ಹೊರಗಿದೆ. ಪರ್ವತಗಳನ್ನು ಖಡ್ಗದಿಂದ ಚಲಿಸುವಂತೆ ಮಾಡಲು ಸಾಧ್ಯವಿಲ್ಲ. ಅದೇ ರೀತಿ ಬಲಾತ್ಕಾರದಿಂದ ಹೃದಯ ಪರಿವರ್ತನೆ ಸಾಧ್ಯವಾಗಲಾರದು. ಧರ್ಮದ ಹೆಸರಿನಲ್ಲಿ ಹಿಂಸಾಚಾರವು ಮಾನವನ ಅತಿಕ್ರಮಗಳ ಚರಿತ್ರೆಯಲ್ಲಿ ಪದೇ ಪದೇ ಪುನರಾವರ್ತಿಸಲ್ಪಡುವ ವಿಷಯವಾಗಿದೆ. ಆತ್ಮಸಾಕ್ಷಿಯ ಸ್ವಾತಂತ್ರ್ಯವು ಪವಿತ್ರ ಖುರ್‌ಆನ್ ಪದೇ ಪದೇ ಪ್ರಸ್ತಾಪಿಸುವ ವಾಸ್ತವಿಕತೆಯಾಗಿದೆ.

ಪ್ರವಾದಿ ಮುಹಮ್ಮದ್[ಸ] ಪದೇ ಪದೇ ಹೀಗೆ ಘೋಷಿಸಲು ಆಜ್ಞಾಪಿಸಲ್ಪಟ್ಟರು:

> **"ಇದು ನಿನ್ನ ಪ್ರಭುವಿನಿಂದ ಬಂದ ಸತ್ಯವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ನಂಬಲಿ. ಯಾರು ಇಚ್ಛಿಸುತ್ತಾನೋ ಅವನು ನಿರಾಕರಿಸಲಿ." ( ಪವಿತ್ರ ಖುರ್‌ಆನ್ 18:30)**

ಸತ್ಯವು ಸ್ವತಸ್ಸಿದ್ಧವಾಗಿ ಹೃದಯಕ್ಕೆ ಸಂಬಂಧಿಸಿದುದಾಗಿದೆ. ಬಲಾತ್ಕಾರದೊಂದಿಗೆ ಅದಕ್ಕೆ ಯಾವುದೇ ಸಂಬಂಧವಿಲ್ಲ. ಸತ್ಯವನ್ನು ಮನವರಿಕೆ ಮಾಡಿದ ನಂತರ ಅದನ್ನು ಬಲಾತ್ಕಾರದಿಂದ ಹೃದಯದಿಂದ ತೊಡೆದು ಹಾಕಲು ಯಾವುದೇ ಶಕ್ತಿಗೆ ಸಾಧ್ಯವಾಗಲಾರದು. ಇದೇ ಕಾರಣದಿಂದ ಸತ್ಯವನ್ನು ತಿಳಿದ ನಂತರ ಅದನ್ನು ಸ್ವೀಕರಿಸುವುದು ಮತ್ತು ತಿರಸ್ಕರಿಸುವುದು ನಮ್ಮ ಆಯ್ಕೆಗೆ ಬಿಡಲಾಗಿದೆ ಎಂದು ಖುರ್‌ಆನ್ ಹೇಳುತ್ತದೆ. ಪವಿತ್ರ ಖುರ್‌ಆನ್ ಇನ್ನೊಂದೆಡೆ ಹೀಗೆ ಹೇಳುತ್ತದೆ:

> **"ನಿಶ್ಚಯವಾಗಿಯೂ ಇದೊಂದು ಉಪದೇಶವಾಗಿದೆ. ಆದ್ದರಿಂದ ಯಾರು ಇಚ್ಛಿಸುತ್ತಾನೋ ಅವನು ತನ್ನ ಪ್ರಭುವಿನ ಕಡೆಗೆ ಒಯ್ಯುವ ಮಾರ್ಗವನ್ನು ಅವಲಂಬಿಸಲಿ." ( ಪವಿತ್ರ ಖುರ್‌ಆನ್ 76:30)**

ಮಾನವರ ಮೂಲಭೂತ ಹಕ್ಕುಗಳ ಯಾವುದೇ ಸನದು ಪವಿತ್ರ ಖುರ್‌ಆನ್ ಪ್ರಸ್ತಾಪಿಸಿದ "ಫಮನ್‌ಶಾಅ" (ಯಾರು ಇಚ್ಛಿಸುತ್ತಾನೋ) ಎಂಬ ನುಡಿಗಟ್ಟಿಗಿಂತ ಹೆಚ್ಚು ಸ್ಪಷ್ಟವಾಗಿರಲಾರದು. ಫಮನ್ (ಯಾರು) ಎಂಬ ಪದವು ಎಲ್ಲರನ್ನೂ ಒಳಗೊಂಡಿರುವಂತಹದು ಆಗಿದೆ. ಇಷ್ಟು ಸ್ಪಷ್ಟವಾದ ಘೋಷಣೆಯು ಇರುವಾಗ ಇಸ್ಲಾಮ್ ಧರ್ಮ ಬಲಾತ್ಕಾರವನ್ನು ಪ್ರೋತ್ಸಾಹಿಸುತ್ತದೆ ಎಂದು ಯಾರಾದರೂ ಚಿಂತಿಸಬಹುದಾದುದು ಆಶ್ಚರ್ಯಕರವಾಗಿದೆ.

ಪವಿತ್ರಖುರ್‌ಆನಿನ 39ನೇ ಅಧ್ಯಾಯದಲ್ಲಿ ಪ್ರವಾದಿ ಮುಹಮ್ಮದ್[ಸ.] ಅವಿಶ್ವಾಸಿಗಳೊಂದಿಗೆ ಹೀಗೆ ಹೇಳಲು ಆಜ್ಞಾಪಿಸಲ್ಪಟ್ಟಿರುವರು:

> **"ಅಲ್ಲಾಹನನ್ನು ನಾನು ಪ್ರಾಮಾಣಿಕವಾದ ನಿಷ್ಠೆಯಿಂದ ಆರಾಧಿಸುತ್ತೇನೆ."**
>
> **(ಪವಿತ್ರಖುರ್‌ಆನ್39:15)**

ನಿಮ್ಮ ಬಗ್ಗೆ ಹೇಳುವುದಾದರೆ:

> **"ಅಲ್ಲಾಹನನ್ನು ಬಿಟ್ಟು ನೀವಿಚ್ಛಿಸುವವರನ್ನು ನೀವು ಆರಾಧಿಸಬಹುದು." (ಪವಿತ್ರ ಖುರ್‌ಆನ್ 39:16)**

ಆತ್ಮಸಾಕ್ಷಿಯ ಸ್ವಾತಂತ್ರ್ಯ- ನಂಬಲು ಮತ್ತು ಪ್ರಚಾರ ಮಾಡಲು ಇರುವ ಸ್ವಾತಂತ್ರ್ಯ- ಧರ್ಮದ ಮೂಲೆಗಲ್ಲಾಗಿದೆ. ಸಾಂಪ್ರದಾಯಿಕವಲ್ಲದ ವಿಶ್ವಾಸದ ದಮನ ಧರ್ಮವಿರೋಧಿ ಶಕ್ತಿಗಳ ಗುರಿಯಾಗಿದೆ. ಪವಿತ್ರ

ಖುರ್‌ಆನ್ ಮತಪರಿವರ್ತನೆಯ ಸ್ವಾತಂತ್ರ್ಯದ ಕುರಿತು ಬಹಳ ಒತ್ತಿ ಹೇಳಿದೆ. ಪವಿತ್ರ ಖುರ್‌ಆನಿನ 109ನೇ ಅಧ್ಯಾಯದ ಕೊನೆಯ ವಚನ ಸತ್ಯಧರ್ಮದ ಮೂಲ ಸಿದ್ಧಾಂತದ ಸಾರಾಂಶವನ್ನು ಹೀಗೆ ಪ್ರಸ್ತಾಪಿಸಿದೆ: **"ನಿಮಗೆ ನಿಮ್ಮ ಧರ್ಮ; ನನಗೆ ನನ್ನ ಧರ್ಮ."**

ದೇವನು ಇದೇ ತತ್ವವನ್ನು ಆಲಂಕಾರಿಕ ಪ್ರಶ್ನೆಯ ಮೂಲಕ ಪವಿತ್ರ ಖುರ್‌ಆನಿನ ಬೇರೆ ಒಂದು ಅಧ್ಯಾಯದಲ್ಲಿ ಪ್ರತಿಪಾದಿಸಿದ್ದಾನೆ. ಅವನು ಪ್ರವಾದಿ ಮುಹಮ್ಮದ್‌ರೊಡನೆ(ಸ.) ಹೀಗೆ ಹೇಳುತ್ತಾನೆ:

> **"ನಿನ್ನ ಪ್ರಭು ತನ್ನ ಇಚ್ಛೆಯನ್ನು ಜಾರಿಗೊಳಿಸುತ್ತಿದ್ದರೆ ಭೂಮಿಯ ಮೇಲಿರುವ ಎಲ್ಲರೂ ವಿಶ್ವಾಸಿಗಳಾಗುತ್ತಿದ್ದರು. ಹೀಗಿರುವಾಗ ನೀನು ಜನರನ್ನು ಸತ್ಯವಿಶ್ವಾಸಿಗಳನ್ನಾಗಿ ಮಾಡಲು ಬಲಪ್ರಯೋಗ ಮಾಡುವಿಯೋ?"**
>
> **(ಪವಿತ್ರ ಖುರ್‌ಆನ್ 10:100)**

ಮನುಷ್ಯನ ಸೃಷ್ಟಿಯ ಯೋಜನೆಯಲ್ಲಿ ಮನುಷ್ಯನಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಅವನು ನಂಬಬಹುದು ಅಥವಾ ತಿರಸ್ಕರಿಸಬಹುದು. ಯಾವುದೇ ಬಲಾತ್ಕಾರವಿಲ್ಲ. ಮನುಷ್ಯನು ತನ್ನ ವಿವೇಕ ಮತ್ತು ಗ್ರಹಣಶಕ್ತಿಯನ್ನು ಉಪಯೋಗಿಸಬೇಕು. ಒಟ್ಟಾರೆ ಹೇಳುವುದಾದರೆ, ವಿಶ್ವಾಸ ಎನ್ನುವುದು ದೇವನ ಒಂದು ಪಾರಿತೋಷಕವಾಗಿದೆ. ಅದಕ್ಕೆ ಅರ್ಹರು ಎಂದು ಅವನು ಯೋಚಿಸುವವರಿಗೆ ಅದು ದೊರಕುತ್ತದೆ.

ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳು ದೇವನಿಂದ ಕಳಹಿಸಲ್ಪಟ್ಟರು. ಆ ಪ್ರವಾದಿಗಳು ತಮ್ಮ ಉಪದೇಶ ಮತ್ತು ನಡವಳಿಕೆಯಿಂದ ತೋರಿಸಿಕೊಟ್ಟದ್ದೇನೆಂದರೆ, ದೇವ ಸಂದೇಶವನ್ನು ಅಂಗೀಕರಿಸುವವರು ಹಿಂಸಾಚಾರಗಳಿಗೆ ಗುರಿಮಾಡಲ್ಪಟ್ಟರೇ ಹೊರತು ಅವರು ಸ್ವತಃ ಹಿಂಸೆ ಮಾಡುವವರಾಗಿರಲಿಲ್ಲ. ಪ್ರವಾದಿಗಳು ಜನರ ಹೃದಯಗಳನ್ನು ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಯಿಂದ ಗೆದ್ದರೇ ಹೊರತು ದೈಹಿಕ ಶಕ್ತಿಯ ಪ್ರಯೋಗದ ಮೂಲಕವಲ್ಲ. ಮಹಾ ದುರಂತವೇನೆಂದರೆ, ಅಧಿಕೃತ ಪುರೋಹಿತರು ಮತ್ತು ಮುಂಡಾಸು ಧರಿಸಿದ 'ದೇವಭಕ್ತಿ'ಯ ನೀಳವಾದ ನಿಲುವಂಗಿಧಾರಿಗಳಾದ ಮುಲ್ಲಾಗಳು ದೌರ್ಜನ್ಯ ಪೀಡಿತರಾದ ಪ್ರವಾದಿಗಳ ಹೆಸರಿನಲ್ಲಿ ನಿರಪರಾಧಿಗಳಾದ ಜನರನ್ನು ಪೀಡಿಸುವವರಾದರು. ಅವರು ಧರ್ಮವನ್ನು ತಮ್ಮ ಏಕಸ್ವಾಮಿತ್ವಕ್ಕೆ ಒಳಪಡಿಸಿದರು. ಹೀಗಿದ್ದರೂ ಅವರಿಗೆ ಧರ್ಮದ ಮೂಲತತ್ವಗಳ ಕುರಿತು ಏನೂ ತಿಳಿದಿಲ್ಲ. ಅವರು ತಮ್ಮ ಪ್ರವಾದಿಗಳ ಗೌರವವನ್ನು ಇತರರನ್ನು ನಿಂದಿಸುವ ಮೂಲಕ, ದ್ವೇಷಾಸೂಯೆ ಭರಿತ ಸುಳ್ಳುಗಳನ್ನು ಪ್ರಚಾರ ಮಾಡುವ ಮೂಲಕ ಮತ್ತು ಎಲ್ಲದಕ್ಕಿಂತ ಮಿಗಿಲಾಗಿ ಮಾನವೀಯತೆಗೆ ನಾಚಿಕೆ ಉಂಟುಮಾಡುವಂತಹ ಅಪರಾಧಗಳನ್ನು ಮಾಡುವ ಮೂಲಕ ಸಂರಕ್ಷಿಸಬಹುದೆಂದು ವಾದಿಸುತ್ತಾರೆ. ಇಸ್ಲಾಮಿನ ಪುಣ್ಯ ಪ್ರವಾದಿಯವರ(ಸ.) ಆಗಮನಕ್ಕೆ ಮೊದಲು ಅವರು ಹೀಗೆಯೇ ಮಾಡುತ್ತಿದ್ದರು. ಅವರು ಈಗಲೂ ಹೀಗೆಯೇ ಮಾಡುತ್ತಾರೆ.

ಮಧ್ಯಕಾಲೀನ ಯುಗದಲ್ಲಿ ಯುರೋಪಿನಲ್ಲಿ ಯೇಸು ಕ್ರಿಸ್ತರ ಅನುಯಾಯಿಗಳು ತಾವೆಂದು ಹೇಳಿಕೊಳ್ಳುತ್ತಿದ್ದ ಜನರು - ಪೋಪರು, ಪುರೋಹಿತ ಶಾಹಿಯ ಎಲ್ಲಾ ಶ್ರೇಣಿಯ ಜನರು ಮತ್ತು ಚರ್ಚಿನ ಹಿರಿಯರು - ಚರಿತ್ರೆಯ ಪುಸ್ತಕಗಳಿಗೆ ಭೀಕರ ಹಿಂಸೆಯ ಒಂದು ಅಧ್ಯಾಯವನ್ನು ಸೇರಿಸಿದರು. ಸಂತ ಅಗಸ್ಟಿನ್ ಅದನ್ನು "ಕ್ರಿಸ್ತನ ಚರ್ಚ್ ಭಕ್ತಿಹೀನರಿಗೆ ವಿಧಿಸಿದ ಧಾರ್ಮಿಕ ದಂಡನೆ" ಎಂದು ಕರೆದರೂ ಆ ಧಾರ್ಮಿಕ ದಂಡನೆಯನ್ನು ಯೇಸು ಕ್ರಿಸ್ತರ ಹೆಸರಲ್ಲಿ ಚರ್ಚ್ ಮೂಲಕ ವಿಧಿಸಲಾಗಿದ್ದರೂ ಇಂದಿನ ಕ್ರೈಸ್ತ ಚರಿತ್ರೆಗಾರರು ಅದನ್ನು ಚರ್ಚ್‌ಗೆ ಕೆಟ್ಟ ಹೆಸರನ್ನು ತಂದ ವರ್ತನೆಯೆಂದು ಒಪ್ಪುತ್ತಾರೆ.

ಲಂಡನ್‌ನಲ್ಲಿರುವ ಮ್ಯಾಡಮ್ ಟುಸ್ಸೌಡರ ಮೇಣದ ಬೊಂಬೆಗಳ ಮ್ಯೂಸಿಯಮ್‌ನಲ್ಲಿ ಆ ಚಿತ್ರಹಿಂಸೆಗಳ ವಿಚಿತ್ರ, ಭಯಾನಕ, ಹೃದಯಸ್ಪರ್ಶಿ ಚಿತ್ರಣವು ದೊರಕುತ್ತದೆ. ಈ ಮ್ಯೂಸಿಯಮ್ 1770ರಲ್ಲಿ ಪ್ಯಾರಿಸ್‌ನಲ್ಲಿ ಸ್ಥಾಪನೆಗೊಂಡಿತಾದರೂ ಅದನ್ನು ಇಂಗ್ಲೆಂಡಿಗೆ 1802ರಲ್ಲಿ ಸ್ಥಳಾಂತರಗೊಳಿಸಲಾಯಿತು. ಅದರ ವಿಶಾಲವಾದ ಅಂಗಣಗಳಲ್ಲಿ ಸುಪ್ರಸಿದ್ಧ ಮತ್ತು ಕುಪ್ರಸಿದ್ಧ ವ್ಯಕ್ತಿಗಳ ಮೇಣದ ಬೊಂಬೆಗಳನ್ನು ಇರಿಸಲಾಗಿದೆ. ಅದರಲ್ಲಿರುವ ಚೇಂಬರ್ ಆಫ್ ಹೊರರ್ಸ್ (ಭೀಕರತೆಗಳ ಕೋಣೆ) ಒಂದು ರೀತಿಯ ಭೂಗತ ಸೆರೆಮನೆಯಾಗಿದೆ. ಅಲ್ಲಿರುವ ಬೊಂಬೆಗಳು ಎಷ್ಟು ಅಚ್ಚುಕಟ್ಟಾದ ಹೋಲಿಕೆಯನ್ನು ಜೀವಂತ ವ್ಯಕ್ತಿಗಳಿಗೆ ಹೊಂದಿದೆಯೆಂದರೆ ಆ ಬೊಂಬೆಗಳು ಶ್ವಾಸೋಚ್ಛ್ವಾಸ ಮಾಡುತ್ತಿವೆಯೋ ಎಂದು ತೋಚುತ್ತದೆ. ಕೆಲವು ಸಂದರ್ಶಕರು ನಿಜವಾದ ಮ್ಯೂಸಿಯಮ್ ಮೇಲ್ವಿಚಾರಕ ಎಂದು ತಪ್ಪಾಗಿ ಭಾವಿಸಿ ಬೊಂಬೆಯೊಡನೆ ದಾರಿ ಕೇಳಿದುದೂ ಇದೆ. ಹದಿನಾಲ್ಕನೆಯ ಲೂಯಿ ಮತ್ತು ಮೇರೀ ಅಂಟೊಯಿನೆಟ್ಟ್‌ರವರ ತಲೆಗಳನ್ನು ಗಿಲಟಿನ್ ಯಂತ್ರದ ಮೂಲಕ ತುಂಡರಿಸಲಾಗಿತ್ತು. ಆ ತಲೆಗಳ ಮೇಣದ ಎರಕವನ್ನು ಮ್ಯಾಡಮ್ ಟುಸ್ಸೌಡ್‌ರವರೇ ತಯಾರಿಸಿದ್ದರು. ಆ ತಲೆಗಳು ಅಲ್ಲಿ ಪ್ರದರ್ಶಿತವಾಗಿವೆ. ಅಲ್ಲಿ ಮರಣದಂಡನೆಗೆ ಮಧ್ಯಯುಗದಲ್ಲಿ ಉಪಯೋಗಿಸಲ್ಪಡುತ್ತಿದ್ದ ನಾನಾ ರೀತಿಯ ಉಪಕರಣಗಳಿವೆ. ತಪಿತಸ್ಥನ ತಲೆಯನ್ನೂ ಕೈಗಳನ್ನೂ ತೂರಿಸುವ ಮರದ ಚೌಕಟ್ಟು, ಕೊರಡು, ಚಾಟಿ, ಮುಳುಗಿಸಿ ಕೊಲ್ಲುವ ಪೀಠ, ನೇಣುಗಂಬ, ಮುಳ್ಳು ಮಂಚ, ಶಿಲುಬೆ, ಗಲ್ಲುಹಗ್ಗ ಇತ್ಯಾದಿ. ಕೆಲವು ಪ್ರದರ್ಶಿತ ಬೊಂಬೆಗಳು ಎಷ್ಟು ಭೀಭತ್ಸವಾಗಿವೆಯೆಂದರೆ ಮಕ್ಕಳು ಮತ್ತು ನಿರ್ಬಲ ಹೃದಯರು ಅವುಗಳನ್ನು ನೋಡಿ ಹೆದರಿ ಹೋಗದಂತಾಗಲು ಅವುಗಳ ಮೇಲೆ ಪರದೆ ಹಾಕಲಾಗಿದೆ.

ಈ ಲೋಕವು ವಿಚಿತ್ರವಾಗಿದೆ. ಇಲ್ಲಿ ಒಬ್ಬ ಮನುಷ್ಯ ಆಧ್ಯಾತ್ಮಿಕ ಪ್ರಗತಿ ಪಡೆದು ಪ್ರವಾದಿತ್ವದ ಉನ್ನತಿಗೆ ತಲಪಿ ತನ್ನ ಸೃಷ್ಟಿಕರ್ತನ ಜೊತೆಯಲ್ಲಿ ಮಾತನಾಡಬಲ್ಲವನಾಗಿದ್ದಾನೆ. ಅವನು ಅಧಃಪತನ ಹೊಂದಿ ಒಬ್ಬ ಪುರೋಹಿತನಾಗಿ ಜೋನ್ ಆಫ್ ಆರ್ಕ್ ಎಂಬ ಮಹಿಳೆಯನ್ನು, ಆಕೆಯು ದೇವದೂತರನ್ನು ದರ್ಶನದಲ್ಲಿ ಕಂಡುದರ ಕುರಿತು ಪ್ರಶ್ನಿಸುವವನೂ ಆಗಬಹುದಾಗಿದೆ. ಅವನು ಇನ್ನಷ್ಟು ಅಧಃಪತನ ಹೊಂದಿ ಧಾರ್ಮಿಕ ದಂಡನೆ ವಿಧಿಸುವವನೂ ಆಗಬಹುದು. ಮ್ಯಾಡಮ್ ಟುಸ್ಸೌಡ್‌ರವರ ಮೇಣದ ಬೊಂಬೆಯ ಪ್ರದರ್ಶನಾಲಯದಲ್ಲಿ ಚಿತ್ರಹಿಂಸೆಯನ್ನು ವಿಧಿಸಲು ಹಿಂದೆ ಉಪಯೋಗದಲ್ಲಿದ್ದ ವಿವಿಧ ರೀತಿಯ ಉಪಕರಣಗಳನ್ನು ಪ್ರದರ್ಶಿಸಲಾಗಿದೆ. ಈ ಉಪಕರಣಗಳು ಸ್ಪೈನ್ ಮತ್ತು ಫ್ರಾನ್ಸ್‌ನಲ್ಲಿ ಕ್ರೈಸ್ತ ಚರ್ಚ್ ನಡೆಸಿದ ಹಿಂಸಾಚಾರಗಳ ಭೀಕರ ಘಟನೆಗಳನ್ನು ನೆನಪಿಸುವಂತೆ ಮಾಡುತ್ತವೆ. ನಿರಪರಾಧಿಗಳಾದ ಜನರನ್ನು ಧರ್ಮಭ್ರಷ್ಟತೆಯ ಆರೋಪ ಹೊರಿಸಿ ಚಿತ್ರಹಿಂಸೆಗೆ ಗುರಿಮಾಡಿ ಅವರು ಸತ್ಯ ಧರ್ಮದಿಂದ ಹೊರಗಾಗಿರುವುದಾಗಿ ತಪ್ಪೊಪ್ಪಿಗೆ ನಡೆಸುವಂತೆ ಹಿಂಸಿಸಲಾಗುತ್ತಿತ್ತು. ಅವರು ನಿರಾಕರಿಸಿದರೆ ಅವರಿಗೆ ಹೊಡೆಯಲಾಯಿತು, ಚಾಟಿಯೇಟು ನೀಡಲಾಯಿತು, ಗಲ್ಲಿಗೇರಿಸಲಾಯಿತು. ನಾನಾ ವಿಧಗಳ ಉಪಕರಣಗಳ ಮೂಲಕ ಹಿಂಸೆ ನೀಡಲಾಯಿತು. ಅವರ ಮೇಲೆ ಕಬ್ಬಿಣವನ್ನು ಕಾಯಿಸಿ ಬರೆ ಹಾಕಲಾಯಿತು, ಅವರನ್ನು ಸುಡಲಾಯಿತು. ದೋಷಾರೋಪಕ್ಕೆ ತುತ್ತಾದವರು ಹಿಂಸೆಗೆ ಗುರಿಯಾಗಿ ತಪ್ಪೊಪ್ಪಿಗೆ ನಡೆಸುತ್ತಿದ್ದರು ಅಥವಾ ಅತ್ಯಂತ ಕಷ್ಟಕರವಾದ ರೀತಿಯಲ್ಲಿ ಮೃತರಾಗುತ್ತಿದ್ದರು. ಆಡಂಬರದ ಪೋಷಾಕುಗಳಲ್ಲಿ ವಿಜೃಂಭಿಸುತ್ತಿದ್ದ ಚರ್ಚ್ ಗಣ್ಯರು ನಿರಪರಾಧಿಗಳಾಗಿದ್ದ ಕ್ರೈಸ್ತರನ್ನು ಚಿತ್ರ ಹಿಂಸೆಗೆ ಗುರಿಮಾಡುತ್ತಿದ್ದರು. ಇವರೊಂದಿಗೆ ಮುಳ್ಳಿನ ಕಿರೀಟ ಧರಿಸಿದ ಯೇಸು ಕ್ರಿಸ್ತರನ್ನು ನೆನಪಿಸಿರಿ. ಶಿಲುಬೆಯಲ್ಲಿ ರಕ್ತ ಸುರಿಸುತ್ತಿದ್ದ ಅವರು ಆರ್ತನಾದ

ಮಾಡುತ್ತಿದ್ದರು: "ಏಲೀ, ಏಲೀ, ಲಮಾ ಸಬಕ್ತಾನಿ?"- ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ? (ಮತ್ತಾಯ 27:46)

ಈ ಪುರೋಹಿತ ವರ್ಗದ ಜನರು ಬಲಿಪೂಜೆಗಳ ಸಂದರ್ಭದಲ್ಲಿ ಯೇಸು ಕ್ರಿಸ್ತರ ಮಾಂಸವನ್ನೂ ರಕ್ತವನ್ನೂ ಪ್ರತೀಕಾತ್ಮಕವಾಗಿ ಪರಿಗ್ರಹಣ ಮಾಡುವವರಾಗಿದ್ದಾರೆ. ಹೀಗಿದ್ದರೂ ಅವರು ಹಿಂದೆ ಯೇಸು ಕ್ರಿಸ್ತರಿಗೆ ಸಂಬಂಧಿಸಿ ನಡೆದ ಸಂಭವವನ್ನು ನೆನಪಿಸದವರಾಗಿದ್ದಾರೆ. ಯೇಸು ಕ್ರಿಸ್ತರನ್ನು ಶಿಲುಬೆಗೇರಿಸಬೇಕೆಂದು ಫರಿಸಾಯರು ಪಿಲಾತನೊಡನೆ ಹೇಳಿದುದು ಯೇಸು ಕ್ರಿಸ್ತರು ತನ್ನ ತಂದೆ ತಾತಂದಿರ ಧರ್ಮವನ್ನು ತ್ಯಜಿಸಿ 'ಧರ್ಮ ಭ್ರಷ್ಟ'ರಾದುದಕ್ಕೆ ಎಂಬ ಸಂಗತಿಯನ್ನು ಅವರು ನೆನಪಿಸಲಿಲ್ಲ. ಮಧ್ಯಕಾಲೀನ ಯುಗದಲ್ಲಿ ಕ್ರೈಸ್ತ ಧರ್ಮೀಯರು ಕೈಗೊಂಡ ದಂಡನೆಯ ಕ್ರೂರ ವಿಧಾನಗಳೆದುರು ಶಿಲುಬೆಗೇರಿಸುವಿಕೆ ಎಂಬ ಶಿಕ್ಷೆ ನಗಣ್ಯವಾಗುತ್ತದೆ. "ಧರ್ಮದಲ್ಲಿ ಬಲಾತ್ಕಾರವಿಲ್ಲ" ಎಂಬ ಘೋಷಣೆಯನ್ನು ಹೊರಡಿಸಿ ಇಸ್ಲಾಮ್ ಧರ್ಮವು ಧರ್ಮದ ಹೆಸರಿನಲ್ಲಿ ಮಾಡಲಾಗುವ ಹಿಂಸಾಚಾರದ ಬಾಗಿಲನ್ನು ಕೊನೆಯದಾಗಿ ಮುಚ್ಚಿಬಿಟ್ಟಿರುವುದು ಸಮಾಧಾನಕರವೂ ಅಭಿಮಾನಾರ್ಹವೂ ಆದ ಸಂಗತಿಯಾಗಿದೆ. ಆದರೆ ಈ ಅಭಿಮಾನ ಮತ್ತು ಸಮಾಧಾನ ಅಲ್ಪ ಕಾಲದವರೆಗೆ ಮಾತ್ರ ಇತ್ತು. ಯುರೋಪಿನಲ್ಲಿ ಮಧ್ಯಯುಗದಲ್ಲಿ ಕ್ರೈಸ್ತ ಪುರೋಹಿತರು ಆತ್ಮಸಾಕ್ಷಿಯ ಸ್ವಾತಂತ್ರ್ಯವನ್ನು ಹನನ ಮಾಡಲು ಕೈಗೊಂಡ ವಿವಿಧ ಕಾರ್ಯಕ್ರಮಗಳನ್ನು ಇಂದಿನ ಮುಸ್ಲಿಮ್ ಮತಪಂಡಿತರು ಕೃತಿರೂಪಕ್ಕೆ ತರಲು ಸ್ಪರ್ಧಿಸುತ್ತಿರುವುದರಿಂದ ಯಾವುದೇ ಮುಸ್ಲಿಮನು ನಾಚಿಕೆಯಿಂದ ತಲೆ ತಗ್ಗಿಸುವ ಪರಿಸ್ಥಿತಿ ತಲೆದೋರಿದೆ. ಆದರೆ ಇಂತಹ ಮತ ಪಂಡಿತರು, ಪವಿತ್ರ ಖುರ್‌ಆನ್ ವಿಶ್ವಕ್ಕೆ ಒಂದು ಅನುಗ್ರಹವೆಂದು ವರ್ಣಿಸಿದ ಪ್ರವಾದಿ ಮುಹಮ್ಮದ್‌ರವರ(ಸ) ಗೌರವವನ್ನು ಸಂರಕ್ಷಿಸುವವರು ತಾವೆಂದು ವಾದಿಸುತ್ತಾರೆ.

ಈ ಮತಪಂಡಿತರು (ಉಲಮಾ)ತಾವು ದಯೆಯೇ ಮನುಷ್ಯ ರೂಪ ಪಡೆದವರೆಂದು ವಾದಿಸುತ್ತಾರೆ. ಆದರೆ ಅವರ ಹೃದಯಗಳು ಸಹಾನುಭೂತಿ ರಹಿತವಾಗಿದೆ. ಅವು ಕೋಪದಿಂದ ತುಂಬಿರುತ್ತವೆ. ಧರ್ಮದ ಹೆಸರಿನಲ್ಲಿ ಹಿಂಸಾಚಾರ ಮಾಡುವುದು ಈಗ ಅವರ ವಿಶ್ವಾಸದ ಒಂದು ಅಂಶವಾಗಿದೆ. ಹೃದಯಗಳ ಬೆಂಕಿಯನ್ನು ನಂದಿಸಲು ಅವತೀರ್ಣವಾದ ದೈವಿಕ ಪರಿಶುದ್ಧ ನೀರಿನ ಹೆಸರಿನಲ್ಲಿ ಅವರು ಅಜ್ಞಾನಿಗಳಾದ ಜನರ ಹೃದಯಗಳಲ್ಲಿ ದ್ವೇಷ ಮತ್ತು ಅಸೂಯೆಯ ಅಗ್ನಿ ಜ್ವಲಿಸುವಂತೆ ಮಾಡುತ್ತಾರೆ. ಯಾವ ಶಾಂತಿಯ ರಾಜಕುಮಾರ ತನ್ನ ರಕ್ತವನ್ನು ಬಲಿದಾನ ಮಾಡಿ ಅರಬ್ ದೇಶದ ರಕ್ತರಂಜಿತ ಭೂಮಿಯಿಂದ ನಿರಪರಾಧಿಗಳ ಕೊಲೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಟ್ಟರೋ ಅಂತಹ ಮಹಾನುಭಾವರ ಅನುಯಾಯಿಗಳಿಗೆ, ಈ ಮತ ಪಂಡಿತರು ನಿಸ್ಸಹಾಯಕರಾದ ಜನರನ್ನು ಕೊಲೆ ಮಾಡಲು ಪ್ರೋತ್ಸಾಹ ನೀಡುತ್ತಿದ್ದಾರೆ. ಬಡಜನರ ಅಸುರಕ್ಷಿತ ಮನೆಗಳನ್ನು ರಕ್ಷಿಸಿದಂತಹ ಮಹಾನುಭಾವರ ಹೆಸರಿನಲ್ಲಿ ಅವರ ಅನುಯಾಯಿಗಳಿಗೆ, ತಮ್ಮನ್ನು ರಕ್ಷಿಸಿಕೊಳ್ಳಲು ಅಸಮರ್ಥರಾದವರ ಮನೆಗಳನ್ನು ಕೊಳ್ಳೆಹೊಡೆಯಲು ಉತ್ತೇಜನವನ್ನು ಈ ಮತ ಪಂಡಿತರು ನೀಡುತ್ತಿದ್ದಾರೆ. ದುಷ್ಕರ್ಮಿಗಳ ಪತ್ನಿಯರ ಚಾರಿತ್ರ್ಯವನ್ನು ಸಹ ಕಾಪಾಡಿದ ಪ್ರವಾದಿಯವರ(ಸ) ಹೆಸರಿನಲ್ಲಿ, ಪ್ರೀತಿ ವಿಶ್ವಾಸದಿಂದ ದಾಂಪತ್ಯ ಜೀವನ ಮಾಡುತ್ತಿದ್ದ ಜೋಡಿಗಳ ವಿವಾಹ ಸಂಬಂಧವನ್ನು ರದ್ದುಗೊಳಿಸಲಾಗುತ್ತಿದೆ ಮತ್ತು ಪತಿ ಪತ್ನಿಯರ ಮುಂದಿನ ಸಂಬಂಧ ನಿಷಿದ್ಧವೆಂದು ಘೋಷಿಸಲಾಗುತ್ತಿದೆ.

ಮದೀನದಲ್ಲಿ ಪ್ರಥಮ ಮಸ್‌ಜಿದನ್ನು ನಿರ್ಮಿಸಿ ಅದರಲ್ಲಿ ನಜ್ರಾನಿನ ಕ್ರೈಸ್ತ ಮತಾವಲಂಬಿಗಳಿಗೆ ಪ್ರಾರ್ಥನೆ ನಡೆಸಲು ಅನುಮತಿ ನೀಡಿದ, ಮತ್ತು ತನ್ನ ಅನುಯಾಯಿಗಳು ಅನ್ಯ ಧರ್ಮೀಯರ ಆರಾಧಾನಾಲಯಗಳಿಗೆ ಗೌರವ ನೀಡಬೇಕೆಂದು ಉಪದೇಶಿಸಿದ ಮಹಾ ಪ್ರವಾದಿಯವರ(ಸ) ಅನುಯಾಯಿಗಳಿಗೆ, ಇಸ್ಲಾಮಿನ ಸಂದೇಶವನ್ನು ಲೋಕದಾದ್ಯಂತ ತಲಪಿಸುವುದೇ ತಮ್ಮ ಜೀವಿತದ ಗುರಿಯೆಂದು ಕೃತಿಶೀಲರಾಗಿರುವ ಚಿಕ್ಕ ಗುಂಪಿನ ಮಸ್‌ಜಿದ್‌ಗಳನ್ನು ಧ್ವಂಸಗೊಳಿಸಬೇಕೆಂದು ಇಂದಿನ ಕಾಲದ ಮತಪಂಡಿತರು(ಉಲಮಾ) ಉಪದೇಶ ನೀಡುತ್ತಿದ್ದಾರೆ. ಪ್ರವಾದಿಯವರು(ಸ) ನಿಷಿದ್ಧಗೊಳಿಸಿದ ಅನ್ಯಾಯದ ಕೃತ್ಯಗಳನ್ನು ಅವರ ಹೆಸರಿನಲ್ಲಿಯೇ ಈ ಮತಪಂಡಿತರು ಮಾಡುತ್ತಿದ್ದಾರೆ. ತನ್ನ ಸಮುದಾಯದ ಮತಪಂಡಿತರು ಇತರ ಮುಸ್ಲಿಮ್ ಪಂಗಡಗಳ ನೇತಾರರನ್ನು ನಿಂದಿಸಿ ದೋಷಾರೋಪಗಳನ್ನು ಸುಳ್ಳು ಸುಳ್ಳಾಗಿ ಹೊರಿಸುತ್ತಾ ಇರುವುದನ್ನು ಮತ್ತು ಚಾರಿತ್ರ್ಯವತಿಯರಾದ ಗೃಹಿಣಿಯರ ಕುರಿತು ಸುಳ್ಳು ಅಪವಾದಗಳನ್ನು ಮಾಡುತ್ತಾ ಸಾರ್ವಜನಿಕ ಸಭೆಗಳಲ್ಲಿ ಬೊಬ್ಬೆ ಹೊಡೆಯುವುದನ್ನು ಪ್ರವಾದಿಯವರು(ಸ) ಕಾಣಬಹುದಾದರೆ ಅವರು ಸಂತೋಷಪಡುವರೇ? ಮತ ಪಂಡಿತರ ಈ 'ಧಾರ್ಮಿಕ ಅಮಿತೋತ್ಸಾಹ'ದ ಕುರಿತು ಒಬ್ಬ ಅಜ್ಞೇಯವಾದಿ ಹೇಗೆ ಯೋಚಿಸುವನು? ತನ್ನ ಸಮುದಾಯದ ಮತ ಪಂಡಿತರು ಉದ್ರೇಕಕರವೂ ಸಂಘರ್ಷಭರಿತವೂ ಆಗಿರುವ ಭಾಷಣ ಮಾಡಿ ಬಡ ನಿಸ್ಸಹಾಯಕರಾದ ಜನರ ಮನೆಗಳಿಗೆ ಬೆಂಕಿ ಹಚ್ಚಿ ಸಂಪೂರ್ಣ ಗ್ರಾಮವನ್ನು ನಾಶಮಾಡಲು ನಮ್ಮ ಪ್ರವಾದಿ(ಸ) ಆಜ್ಞಾಪಿಸುವರೆಂದು ಒಬ್ಬ ಮುಸ್ಲಿಮನು ಒಂದು ಕ್ಷಣದಷ್ಟು ಕಾಲವಾದರೂ ಯೋಚಿಸಲು ಸಾಧ್ಯವೇ? ಶಾಂತಿಯ ರಾಜ ಕುಮಾರರಾದ ನಮ್ಮ ಪ್ರವಾದಿ(ಸ) ತನ್ನ ಸಮುದಾಯದ ಮತ ಪಂಡಿತರಿಗೆ, ಅವರ ಅಭಿಪ್ರಾಯಗಳಿಗೆ ಸರಿಹೋಲದ ಅಭಿಪ್ರಾಯ ಹೊಂದಿದವರನ್ನು ಅವಿಶ್ವಾಸಿಗಳೆಂದು ಕರೆಯಬೇಕೆಂದು ಹೇಳಿರುವರೇ? ಅಂತಹ ಜನರನ್ನು ಮತ್ತು ಅವರ ಸ್ತ್ರೀಯರನ್ನು ಕೊಲ್ಲುವುದನ್ನೂ ಅವರ ಮಸ್‌ಜಿದ್‌ಗಳನ್ನು ಧ್ವಂಸಗೊಳಿಸುವುದನ್ನೂ ನಮ್ಮ ಪ್ರವಾದಿ(ಸ) ಅನುಮತಿಸುವರೇ? ಮತಭ್ರಷ್ಟತೆಯನ್ನು ತಡೆಯಲು ಇರುವ ದೈವಿಕ ವಿಧಾನ ಅದೆಂದು ನಮ್ಮ ಪ್ರವಾದಿ(ಸ) ಎಂದಾದರೂ ಹೇಳಿರುವರೇ?

ಇವು ನಾವು ಗಾಢವಾಗಿ ಚಿಂತಿಸಬೇಕಾದ ಪ್ರಶ್ನೆಗಳಾಗಿವೆ. ಮುಸ್ಲಿಮರು ಮತ ಪಂಡಿತರ (ಉಲಮಾ) ನಿಲುವನ್ನು ಗಮನಿಸಬೇಕು. ದಮನಕಾರಿ ಕೃತ್ಯಗಳು, ಚಿತ್ರಹಿಂಸೆ, ಕೊಲೆ, ಬೆಂಕಿ ಹಚ್ಚುವುದು ಮತ್ತು ಮಸ್‌ಜಿದ್‌ಗಳನ್ನು ಧ್ವಂಸ ಮಾಡುವುದು ನಮ್ಮ ಪ್ರವಾದಿಯವರ(ಸ) ನಡವಳಿಕೆಗೆ ಸೇರಿದ ಸಂಗತಿಗಳಲ್ಲ. ತಥಾಕಥಿತ 'ಧರ್ಮಭ್ರಷ್ಟರನ್ನು' ಮಕ್ಕದ ಯಾವ ಬೀದಿಗಳಲ್ಲಿ ಎಳೆದುಕೊಂಡು ಹೋಗಲಾಯಿತೋ ಆ ಬೀದಿಗಳ ಪ್ರತಿಯೊಂದು ಕಲ್ಲು ಇದಕ್ಕೆ ಸಾಕ್ಷಿ ಹೇಳುತ್ತದೆ. ಇಸ್ಲಾಮ್ ಧರ್ಮಾವಲಂಬಿಗಳಾದ ಕಾರಣ ಯಾವ ಸುಡು ಮರಳಿನಲ್ಲಿ ನಿಸ್ಸಹಾಯಕರಾದ ಜನರನ್ನು ಚಿತ್ರ ಹಿಂಸೆಗೆ ಗುರಿ ಮಾಡಲಾಯಿತೋ ಆ ಮರಳಿನ ಕಣಕಣಗಳು ಇದಕ್ಕೆ ಸಾಕ್ಷಿ ನುಡಿಯುತ್ತವೆ. ತಾಯಿಫ್ ನಗರದ ಮಾರ್ಗಗಳಿಗೆ ಹಾಸಲಾದ ಕಲ್ಲುಗಳು ತಮ್ಮ ಮೇಲೆ ಪ್ರವಾದಿಯವರ(ಸ) ರಕ್ತವು ಸುರಿಸಲ್ಪಟ್ಟಿದ್ದನ್ನು ಜ್ಞಾಪಿಸುತ್ತಾ ಸಾಕ್ಷಿ ಹೇಳುತ್ತವೆ: ನಮ್ಮ ಮಹಾನ್ ಪ್ರವಾದಿ(ಸ) ಧಾರ್ಮಿಕ ವಿಶ್ವಾಸವು ಕಡ್ಡಾಯವಾದುದು ಎಂದು ಉಪದೇಶಿಸಿರಲಿಲ್ಲ. ದೇವಾರಾಧನೆಯ ಮಂದಿರಗಳನ್ನು ಆರಾಧನೆಯ ಹೆಸರಿನಲ್ಲಿ ಧ್ವಂಸ ಮಾಡಲು ಸಹ ಉಪದೇಶಿಸಲಿಲ್ಲ. ಮಹಿಳೆಯರನ್ನು ಗೌರವದ ಹೆಸರಿನಲ್ಲಿ ಅಪಮಾನಿಸಲು ಸಹ ಉಪದೇಶಿಸಿರಲಿಲ್ಲ. ಇಂದಿನ ಮತ ಪಂಡಿತರು ಪ್ರವಾದಿಯವರ(ಸ) ಹೆಸರಿನಲ್ಲಿ ಹಿಂಸೆಯನ್ನು ಪ್ರಚೋದಿಸುವ ಉಪದೇಶ ನೀಡುವಾಗ ಮುಸ್ಲಿಮರು ತಮ್ಮ ತಲೆಗಳನ್ನು ನಾಚಿಕೆಯಿಂದ ತಗ್ಗಿಸುತ್ತಾರೆ ಮತ್ತು ಅವರ ಆತ್ಮಗಳು ರೋದಿಸುತ್ತವೆ.

## ಅಧ್ಯಾಯ - 2

# ಇಸ್ಲಾಂ ಧರ್ಮದ ಪ್ರಚಾರ: ಪರಸ್ಪರ ವಿರುದ್ಧವಾದ ಎರಡು ಅಭಿಪ್ರಾಯಗಳು

ಒಂದು : "ಉಪದೇಶ ಮತ್ತು ಪ್ರವಚನಗಳು (ಸುಮಾರು 13 ವರ್ಷಗಳ ಕಾಲ) ನಿಷ್ಪ್ರಯೋಜಕವಾದಾಗ ಇಸ್ಲಾಮಿನ ಪ್ರವಾದಿ(ಸ.) ಕೈಯಲ್ಲಿ ಖಡ್ಗ ಎತ್ತಿಕೊಂಡರು. ... ಆಗ ಹೃದಯಗಳಿಂದ ಕ್ರಮೇಣ ಕೆಡುಕು ಮತ್ತು ಉದ್ದಟತನದ ತುಕ್ಕು ನೀಗಲು ತೊಡಗಿತು. ಅವರ ಪ್ರಕೃತಿಯಿಂದ ಹಾನಿಕಾರಕ ಅಂಶಗಳು ತನ್ನಿಂತಾನೇ ಹೊರಟು ಹೋದವು. ಆತ್ಮಗಳ ಕಶ್ಮಲಗಳು ದೂರ ಸರಿದವು. ಇಷ್ಟು ಮಾತ್ರವಲ್ಲ, ಕಣ್ಣುಗಳಿಂದ ಪರದೆಗಳು ಸರಿದು ಸತ್ಯದ ಪ್ರಕಾಶವು ಸ್ಪಷ್ಟವಾಗಿ ಕಾಣಿಸಿತು. ಸತ್ಯವು ಪ್ರಕಟಗೊಂಡ ನಂತರವೂ ಅದರ ಮುಂದೆ ತಲೆಬಾಗುವುದನ್ನು ತಡೆಯುವಂತಹ ಅವರ ಕುತ್ತಿಗೆಗಳ ಗಡಸುತನ ಮತ್ತು ಅವರ ತಲೆಗಳಲ್ಲಿದ್ದ ಅಹಂಕಾರ ಬಾಕಿಯುಳಿಯಲಿಲ್ಲ."

- ಮೌಲಾನ ಅಬುಲ್ ಆಲಾ ಮೌದೂದಿ

"ಮುಹಮ್ಮದ್ ಒಂದು ಕೈಯಲ್ಲಿ ಖಡ್ಗವನ್ನೂ ಇನ್ನೊಂದು ಕೈಯಲ್ಲಿ ಖುರ್‌ಆನನ್ನೂ ಹಿಡಿದು ಇಸ್ಲಾಮ್ ಧರ್ಮವನ್ನು ಪ್ರಚಾರ ಮಾಡಿದರು."

- ಪ್ರೊಫೆಸರ್ ವಿಲ್‌ಫ್ರೆಡ್ ಕಾಂಟ್‌ವೆಲ್ ಸ್ಮಿತ್

ಎರಡು : "ಇಸ್ಲಾಮಿನ ವಿರೋಧಿಗಳು ಕುರುಡರಾಗಿದ್ದಾರೆ. ಅವರಿಗೆ ಕಾಣಿಸುವುದಿಲ್ಲ. ಮುಹಮ್ಮದ್ ಬಳಸಿದ ಖಡ್ಗ ದಯೆ, ಸಹಾನುಭೂತಿ, ಪ್ರೀತಿ ಮತ್ತು ಕ್ಷಮೆಯದಾಗಿತ್ತು. ಅದು ಅವರ ಶತ್ರುಗಳ ಮೇಲೆ ಪ್ರಭಾವ ಬೀರಿ ಅವರ ಹೃದಯಗಳನ್ನು ಪರಿಶುದ್ಧಗೊಳಿಸಿ ಕನ್ನಡಿಯಂತೆ ಮಾಡುತ್ತಿತ್ತು. ಉಕ್ಕಿನ ಖಡ್ಗಕ್ಕಿಂತಲೂ ಅವರು ಬಳಸಿದ ಖಡ್ಗವು ಹೆಚ್ಚು ಹರಿತವಾಗಿತ್ತು."

-ಪಂಡಿತ್ ಜ್ಞಾನೇಂದ್ರ ದೇವ ಶರ್ಮ ಶಾಸ್ತ್ರಿ

ಇಸ್ಲಾಮಿನ ಸಂದೇಶವನ್ನು ಲೋಕಕ್ಕೆ ಹೇಗೆ ತಲಪಿಸಲಾಯಿತು ಎಂಬುದರ ಕುರಿತು ಎರಡು ವಿಭಿನ್ನ ಅಭಿಪ್ರಾಯಗಳನ್ನು ಮೇಲೆ ಉಲ್ಲೇಖಿಸಲಾಗಿದೆ. ಪೌರಸ್ತ್ಯ ಭಾಷಾ ಸಾಹಿತ್ಯ ಪಂಡಿತರಾದ (Orientalist) ವಿಮರ್ಶಕರು ಇಸ್ಲಾಮಿನ ಪ್ರವಾದಿಯವರು(ಸ) ಮಾಡಿದ ಯುದ್ಧಗಳನ್ನು ಆಕ್ರಮಣಕಾರಿ ಯುದ್ಧಗಳೆಂದು ವಾದಿಸುತ್ತಾರೆ. ಜನರನ್ನು ಬಲಾತ್ಕಾರದಿಂದ ಇಸ್ಲಾಮಿಗೆ ಮತಾಂತರಿಸಲಾಯಿತೆಂದು ಅವರು ಹೇಳುತ್ತಾರೆ. ಪೂರ್ವಗ್ರಹ ಪೀಡಿತರಾಗದ ಚರಿತ್ರೆಗಾರರು ಈ ವಾದವನ್ನು ಅಂಗೀಕರಿಸುವುದಿಲ್ಲ. ವಾಸ್ತವಿಕ ಸಂಗತಿಗಳು ಈ ವಾದವನ್ನು ನಿರಾಕರಿಸುತ್ತವೆ ಎಂದು ಅವರು ಹೇಳುತ್ತಾರೆ. ಪ್ರವಾದಿ(ಸ) ಧರ್ಮಪ್ರಚಾರಕ್ಕಾಗಿ ಬಲಪ್ರಯೋಗಿಸಲಿಲ್ಲ. ಅವರು ಮಾಡಿದ ಎಲ್ಲಾ ಯುದ್ಧಗಳು ಆತ್ಮ ರಕ್ಷಣೆಗೆ ಮಾಡಿದವುಗಳಾಗಿದ್ದವು. ಇಸ್ಲಾಮ್ ಧರ್ಮವು ವಿಸ್ತಾರವಾಗಿ ಹರಡಿದುದು ಪ್ರವಾದಿಯವರ(ಸ) ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಯ ಕಾರಣದಿಂದಾಗಿತ್ತು.

ಹೀಗಿದ್ದರೂ ನಿರ್ಭಾಗ್ಯವಶಾತ್ ಕೆಲವು ಮುಸ್ಲಿಮ್ ಧರ್ಮ ಪಂಡಿತರು ಇಸ್ಲಾಮ್ ಧರ್ಮವು ಬಲಪ್ರಯೋಗದ ಮೂಲಕ ಹಬ್ಬಿತು ಎಂದು ನಂಬುತ್ತಾರೆ. ಪೌರಸ್ತ್ಯ ಭಾಷಾ ಸಾಹಿತ್ಯ ಶಾಸ್ತ್ರಜ್ಞರ ಹಾಗೆ ಅವರು ಪ್ರವಾದಿಯವರ(ಸ) ಜೀವಿತವನ್ನು ಮಕ್ಕದ ಕಾಲ ಮತ್ತು ಮದೀನದ ಕಾಲ ಎಂದು ವಿಭಜಿಸುತ್ತಾರೆ. ಮಕ್ಕದ ಜೀವಿತದ ಕಾಲದಲ್ಲಿ ಪ್ರವಾದಿ(ಸ) ಬಲಹೀನರೂ ಅಧಿಕಾರವಿಲ್ಲದವರೂ ಆಗಿದ್ದರಿಂದ ಅವರು ಸಂಧಾನ ಮಾರ್ಗವನ್ನೂ ವಿರೋಧಿಗಳೊಂದಿಗೆ ಸಹ ಜೀವನದ ಮಾರ್ಗವನ್ನೂ ನಮ್ರಭಾವವನ್ನೂ ಅವಲಂಬಿಸಿದ್ದರೆಂದೂ ಮದೀನದಲ್ಲಿ ಸ್ವಲ್ಪ ಶಕ್ತಿಯನ್ನು ಗಳಿಸಿದಾಗ ಅವರು ಖಡ್ಗವನ್ನು ಎತ್ತಿಕೊಂಡರೆಂದೂ ಈ ವಿಭಾಗದವರು ಹೇಳುತ್ತಾರೆ. ಪ್ರವಾದಿ(ಸ) ಈ ರೀತಿ ವರ್ತಿಸದಿರುತ್ತಿದ್ದರೆ ಅರಬ್ ದೇಶದಲ್ಲಿ ಆಧ್ಯಾತ್ಮಿಕ ಕ್ರಾಂತಿ ಉಂಟಾಗುತ್ತಿರಲಿಲ್ಲ ಮತ್ತು ಇಸ್ಲಾಮ್ ಹರಡುತ್ತಲೂ ಇರಲಿಲ್ಲ ಎಂದು ಅವರು ಹೇಳುತ್ತಾರೆ. ದಿವಂಗತ ಮೌಲಾನ ಅಬುಲ್ ಆಲಾ ಮೌದೂದಿ ಈ ವಾದದ ಪ್ರತಿಪಾದಕರಲ್ಲಿ ಅಗ್ರಗಣ್ಯರಾಗಿದ್ದರು. "ಅಲ್ ಜಿಹಾದ್ ಫಿಲ್ ಇಸ್ಲಾಮ್" ಎಂಬ ತನ್ನ ಕೃತಿಯಲ್ಲಿ ಅವರು ಹೀಗೆ ಹೇಳಿದ್ದಾರೆ:

> "ಪ್ರವಾದಿ(ಸ) 13 ವರ್ಷಗಳ ಕಾಲ ಅರಬರನ್ನು ಇಸ್ಲಾಮ್ ಧರ್ಮದ ಕಡೆಗೆ ಆಹ್ವಾನಿಸುತ್ತಾ ಇದ್ದರು. ಉಪದೇಶ ಮತ್ತು ಪ್ರವಚನದ ಅತ್ಯುತ್ತಮ ಪ್ರಭಾವಶಾಲಿ ಮಾರ್ಗಗಳನ್ನು ಕೈಗೊಂಡರು. ಬಲಿಷ್ಠ ಸಾಕ್ಷ್ಯಾಧಾರಗಳನ್ನು ನೀಡಿದರು. ಸ್ಪಷ್ಟವಾದ ಪುರಾವೆಗಳನ್ನು ಅವರ ಮುಂದಿಟ್ಟರು. ವಾಗ್ವೈಖರಿಯಿಂದ ಮತ್ತು ಪ್ರವಚನಗಳ ತೀವ್ರತೆಗಳಿಂದ ಹೃದಯಗಳಿಗೆ ಬಿಸಿ ಮುಟ್ಟಿಸಿದರು. ಬುದ್ಧಿಯನ್ನು ಬೆರಗುಗೊಳಿಸುವ ಅದ್ಭುತ ಕೃತ್ಯಗಳನ್ನು ಅಲ್ಲಾಹನ ಕಡೆಯಿಂದ ತೋರಿಸಿದರು. ತನ್ನ ಸುಸ್ವಭಾವ ಮತ್ತು ಪರಿಶುದ್ಧ ಜೀವಿತದ ಮೂಲಕ ಸಾತ್ವಿಕತೆಯ ಅತ್ಯುತ್ತಮ ಮಾದರಿಯನ್ನು ತೋರಿಸಿದರು. ಸತ್ಯವನ್ನು ಪ್ರಕಟಿಸಲು ಸಾಧ್ಯವಿರುವ ಎಲ್ಲಾ ಮಾರ್ಗಗಳನ್ನು ಅವಲಂಬಿಸಿದರು. ಅವರ ಸತ್ಯವು ಸೂರ್ಯ ಪ್ರಕಾಶದಂತೆ ಬೆಳಗುತ್ತಿದ್ದರೂ ಅವರ ಸಮುದಾಯದ ಜನರು ಅವರ ಆಹ್ವಾನವನ್ನು ನಿರಾಕರಿಸಿದರು...."

ಮೌಲಾನಾ ಮೌದೂದಿಯವರ ಈ ಲೇಖನದ ಮುಂದಿನ ಭಾಗವನ್ನು ಉಲ್ಲೇಖಿಸುವುದು ನನ್ನ ಹೃದಯಕ್ಕೆ ನೋವನ್ನುಂಟು ಮಾಡುತ್ತದೆ. ಅವರು ಹೀಗೆ ಮುಂದುವರಿಸುತ್ತಾರೆ:

> "ಉಪದೇಶ ಮತ್ತು ಪ್ರವಚನಗಳು ನಿಷ್ಪ್ರಯೋಜಕವಾದಾಗ ಇಸ್ಲಾಮಿನ ಪ್ರವಾದಿ(ಸ) ಕೈಯಲ್ಲಿ ಖಡ್ಗ ಎತ್ತಿಕೊಂಡರು. ... ಆಗ ಹೃದಯಗಳಿಂದ ಕ್ರಮೇಣ ಕೆಡುಕು ಮತ್ತು ಉದ್ದಟತನದ ತುಕ್ಕು ನೀಗಲು ತೊಡಗಿತು. ಅವರ ಪ್ರಕೃತಿಯಿಂದ ಹಾನಿಕಾರಕ ಅಂಶಗಳು ತನ್ನಿಂತಾನೇ ಹೊರಟು ಹೋದುವು. ಆತ್ಮಗಳ ಕಶ್ಮಲಗಳು ದೂರ ಸರಿದವು. ಇಷ್ಟು ಮಾತ್ರವಲ್ಲ, ಕಣ್ಣುಗಳಿಂದ ಪರದೆಗಳು ಸರಿದು ಸತ್ಯದ ಪ್ರಕಾಶವು ಸ್ಪಷ್ಟವಾಗಿ ಕಾಣಿಸಿತು. ಸತ್ಯವು ಪ್ರಕಟಗೊಂಡ ನಂತರವೂ ಅದರ ಮುಂದೆ ತಲೆಬಾಗುವುದನ್ನು ತಡೆಯುವಂತಹ ಅವರ ಕುತ್ತಿಗೆಗಳ ಗಡಸುತನ ಮತ್ತು ಅವರ ತಲೆಗಳಲ್ಲಿದ್ದ ಅಹಂಕಾರವೂ ಬಾಕಿಯುಳಿಯಲಿಲ್ಲ.

> "ಅರಬ್ ದೇಶದ ಹಾಗೆ ಬೇರೆ ದೇಶಗಳು ಸಹ ಇಸ್ಲಾಮ್ ಧರ್ಮವನ್ನು ಎಷ್ಟು ಬೇಗನೆ ಸ್ವೀಕರಿಸಿದವು ಎಂದರೆ ಒಂದು

ನೂರು ವರ್ಷಗಳೊಳಗೆ ಲೋಕದ ನಾಲ್ಕನೆಯ ಒಂದು ಭಾಗ ಮುಸಲ್ಮಾನರದಾಯಿತು. ಅದಕ್ಕೆ ಕಾರಣವೇನೆಂದರೆ, ಹೃದಯುಗಳ ಮೇಲೆ ಆವರಿಸಿದ್ದ ಪರದೆಗಳನ್ನು ಇಸ್ಲಾಮಿನ ಖಡ್ಗ ಹರಿದು ಹಾಕಿತು." (ಅಲ್ ಜಿಹಾದ್ ಫಿಲ್ ಇಸ್ಲಾಮ್ - ಪುಟ 137-138)

ಮೇಲಿನ ಹೇಳಿಕೆ ಇಮ್ಮಡಿ ದುರದೃಷ್ಟಕರವಾಗಿದೆ. ಏಕೆಂದರೆ ಈ ಹೇಳಿಕೆ ನೀಡಿದ ಮುಸ್ಲಿಮ್ ವಿದ್ವಾಂಸ ತನ್ನನ್ನು "ಮಿರ್ಝಾಜ್ ಶನಾಸೆ ರಸೂಲ್"-(ಪ್ರವಾದಿಯವರ(ಸ) ಮನೋಭಾವನೆಯನ್ನು ಅರಿತವನು)ಎಂದು ಹೇಳಿಕೊಳ್ಳುತ್ತಿದ್ದರು. ಈ ರೀತಿ ಅವರು ಪ್ರವಾದಿಯವರ(ಸ) ಮಾತು ಮತ್ತು ಕೃತಿಗೆ ಅಧಿಕೃತವಾದೊಂದು ವ್ಯಾಖ್ಯಾನ ನೀಡಬಲ್ಲ ಯೋಗ್ಯತೆ ತನಗಿದೆಯೆಂದು ಭಾವಿಸಿಕೊಂಡಿದ್ದರು. ಅವರ ಈ ವಾದವನ್ನು ಅಂಗೀಕರಿಸಿದರೆ ದೇವವಚನಗಳನ್ನು ಪ್ರವಾದಿ(ಸ) ಮನವರಿಕೆ ಮಾಡಿದುದಕ್ಕಿಂತ ಹೆಚ್ಚು ಮೌಲಾನ ಮೌದೂದಿ ಮನವರಿಕೆ ಮಾಡಿದ್ದಾರೆಂದು ಒಪ್ಪಬೇಕಾದೀತು.

ಇಸ್ಲಾಮಿನ ಕಠಿಣ ಶತ್ರುಗಳು ಪ್ರವಾದಿಯವರ(ಸ) ಮೇಲೆ ಹೊರಿಸುತ್ತಿದ್ದ ಆಧಾರರಹಿತ ಆರೋಪಗಳನ್ನು ಈ ವಿದ್ವಾಂಸ ಮಧುರ ಮಾತುಗಳಲ್ಲಿ ಪುನರಾವರ್ತಿಸುತ್ತಿದ್ದಾರೆ. ಪೂರ್ವಗ್ರಹ ಪೀಡಿತರಾದ ಪೌರಸ್ತ್ಯ ವಿದ್ವಾಂಸರು ಪ್ರವಾದಿಯವರು(ಸ) ಜನರನ್ನು ಬಲಾತ್ಕಾರದಿಂದ ಇಸ್ಲಾಮಿಗೆ ಸೇರಿಸುತ್ತಿದ್ದರೆಂದು ಆಕ್ಷೇಪಿಸುತ್ತಿದ್ದರು. ಮೌಲಾನ ಬಳಸಿದ ಪದಗಳು ಇಸ್ಲಾಮನ್ನು ವೈಭವೀಕರಿಸುವಂತೆ ತೋರುತ್ತದೆಯಾದರೂ ಯಥಾರ್ಥವಾಗಿ ಅವು ಇಸ್ಲಾಮಿನ ವಿರುದ್ಧವಾದ ಯುರೋಪಿಯನ್ ವಿಮರ್ಶಕರ ಆಕ್ಷೇಪಗಳನ್ನು ದೃಢಪಡಿಸುತ್ತವೆ. ಆರ್. ಢೋರಿಝಿ ಹೀಗೆ ಹೇಳಿದರು:

"ಮುಹಮ್ಮದರ ಸೇನಾಧಿಪತಿಗಳು ಒಂದು ಕೈಯಲ್ಲಿ ಖಡ್ಗ ಮತ್ತು ಮತ್ತೊಂದು ಕೈಯಲ್ಲಿ ಖುರ್‌ಆನ್ ಹಿಡಿದು ಧರ್ಮ ಪ್ರಚಾರ ಮಾಡಿದರು." ಸ್ಮಿತ್ ಹೇಳಿದ್ದು: "ಪ್ರವಾದಿ ಒಂದು ಕೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ಖುರ್‌ಆನ್ ಹಿಡಿದು ಧರ್ಮ ಪ್ರಚಾರ ಮಾಡಿದರು" ಎಂದಾಗಿದೆ. ಜೋರ್ಜ್ ಸೇಲ್ ಹೀಗೆ ಬರೆದರು: "ಪ್ರವಾದಿಯ ಹಿಂಬಾಲಕರ ಸಂಖ್ಯೆ ಹೆಚ್ಚಾದಾಗ ತನ್ನನ್ನು ನಂಬದವರ ಮೇಲೆ ಆಕ್ರಮಣ ಮಾಡಿ ಮೂರ್ತಿ ಪೂಜೆ ನಾಶಗೊಳಿಸಲು ಮತ್ತು ಸತ್ಯ ಧರ್ಮ ಸ್ಥಾಪಿಸಲು ತನ್ನನ್ನು ದೇವನು ಅನುಮತಿಸಿರುವನೆಂದು ಪ್ರವಾದಿ ವಾದಿಸಿದರು."

ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುಸ್ಲಿಮರ ಮಧ್ಯೆ ಕ್ರೈಸ್ತಧರ್ಮ ಪ್ರಚಾರ ನಡೆಸುತ್ತಾ ಇದ್ದ ರೆವರೆಂಡ್ ಡಾಕ್ಟರ್ ಸಿ.ಜಿ. ಫೆಂಡರ್ "ಇಸ್ಲಾಮಿನ ಸುಳ್ಳು ಪ್ರವಾದಿಯ" ಖಂಡನೆಯ ರೂಪದಲ್ಲಿ ವಿವಾದಾತ್ಮಕವಾದ ಅನೇಕ ಕಿರು ಪುಸ್ತಕಗಳನ್ನು ಪ್ರಕಟಿಸಿ ಮುಸ್ಲಿಮರ ಮಧ್ಯೆ ಕ್ಷೋಭೆಗೆ ಹೇತುವಾಗಿದ್ದರು. ಆ ಪಾದ್ರಿ ಬರೆದ ಒಂದು ಕಿರು ಪುಸ್ತಕದಲ್ಲಿ ಹೀಗೆ ಬರೆಯಲಾಗಿದೆ:

"1. ಮುಹಮ್ಮದ್ 13 ವರ್ಷಗಳ ಕಾಲ ತನ್ನ ಹೊಸಧರ್ಮವನ್ನು ಬಹಳ ಸಹನೆಯಿಂದಲೂ ಸೌಹಾರ್ದ ಭಾವನೆಯಿಂದಲೂ ಪ್ರಚಾರ ಮಾಡುತ್ತಾ ಇದ್ದರು.

2. ಮದೀನದಲ್ಲಿ ಅವರು ಖಡ್ಗ ಹಿರಿಯುವ ಪ್ರವಾದಿ ಆದರು. ಅನಂತರ ಇಸ್ಲಾಮ್ ಧರ್ಮದ ಬಲಿಷ್ಠವಾದ ತರ್ಕವು ಖಡ್ಗವಾಗಿತ್ತು.

3. ನಾವು ಮುಹಮ್ಮದರ ಅನುಯಾಯಿಗಳ ನಡವಳಿಕೆಯನ್ನು ಅಧ್ಯಯನ ಮಾಡುವುದಾದರೆ ನಮಗೆ ತಿಳಿದು ಬರುವುದೇನೆಂದರೆ ಯಾವುದಾದರೂ ಧಾರ್ಮಿಕ ಅಥವಾ ನೈತಿಕ ಸಂಹಿತೆಯನ್ನು ಅನುಸರಿಸುವುದು ಅವರಿಗೆ ಆವಶ್ಯಕವಿರಲಿಲ್ಲ. ದೇವನು ಅವರಿಂದ ಆವಶ್ಯಪಟ್ಟದ್ದು ಒಂದೇ ಒಂದು ಸಂಗತಿಯನ್ನಾಗಿದೆ: ಅವರು ದೇವನಿಗಾಗಿ ಖಡ್ಗ, ಬಾಣ, ಭರ್ಚಿ, ಈಟಿಗಳ ಮೂಲಕ ಹೋರಾಡಿ ಕೊಲ್ಲುತ್ತಾ ಇರಬೇಕು."

ಈ ಮುನ್ನುಡಿಯನ್ನು ಬರೆದ ನಂತರ ಡಾ|| ಫೆಂಡರ್ ಹೀಗೆ ಹೇಳಿದ್ದಾರೆ :

"ನೀವು ದೇವ ವಚನವಾದ ಯೇಸು ಮತ್ತು ಅಬ್ದುಲ್ಲಾರ ಮಗ ಮುಹಮ್ಮದ್ ಇವರಿಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಬೇಕು. ಅವರಲೊಬ್ಬರು ತನ್ನ ಜೀವಿತವನ್ನು ದೇವ ಭಕ್ತಿಯ ಕೆಲಸಗಳಿಗಾಗಿ ಮೀಸಲಿಟ್ಟರು. ಇನ್ನೊಬ್ಬರು ತನ್ನ ಜೀವಿತವನ್ನು ಖಡ್ಗಕ್ಕೆ ಅರ್ಪಿಸಿದರು."

(ತತಿಮ್ಮ ಮೀರ್ಝಾನುಲ್ ಹಖ್)

ಅಲೋಯ್ ಸ್ಪ್ರಾಂಗರ್, ಹೆನ್ರೀ ಕೋಪೇ ಮತ್ತು ಇತರ ಅನೇಕ ವಿಮರ್ಶಕರು ಮೇಲಿನ ರೀತಿಯ ಆಕ್ಷೇಪಗಳನ್ನು ಇಸ್ಲಾಮಿನ ವಿರುದ್ಧ ಮತ್ತು ಪ್ರವಾದಿಯವರ(ಸ) ವಿರುದ್ಧ ಮಾಡಿದ್ದರು. ವಾಶಿಂಗ್ಟನ್ ಇರ್ವಿಂಗ್ ಇವರೆಲ್ಲರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಪುಸ್ತಕವೊಂದರ ಮುಖಪುಟದಲ್ಲಿ ಪ್ರವಾದಿಯವರ(ಸ) ಒಂದು ರೇಖಾಚಿತ್ರವನ್ನು ಪ್ರಕಟಿಸಿದರು. ಆ ಊಹಾತ್ಮಕ ರೇಖಾಚಿತ್ರದಲ್ಲಿ ಪ್ರವಾದಿ(ಸ) ಒಂದು ಕೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ಪವಿತ್ರ ಖುರ್‌ಆನ್ ಹಿಡಿದುದಾಗಿ ಚಿತ್ರಿಸಲಾಗಿತ್ತು.

ಮೌಲಾನ ಮೌದೂದಿಯ ಉಲ್ಲೇಖದೊಂದಿಗೆ ಮೇಲೆ ಬರೆದ ವಿಮರ್ಶೆಗಳನ್ನು ಇಟ್ಟು ನೋಡಿದಾಗ ಅವರೆಲ್ಲರೂ ಒಮ್ಮತ ಹೊಂದಿರುವುದಾಗಿ ಕಾಣಬಹುದು. ಇಸ್ಲಾಮನ್ನು ಆಕ್ಷೇಪಿಸಿದ ಪೌರಸ್ತ್ಯ ವಿದ್ವಾಂಸರು ಮತ್ತು ಮೌಲಾನ ಮೌದೂದಿ, ಇಸ್ಲಾಮ್ ಹಿಂಸಾಚಾರದ ಪ್ರಕೃತಿಯನ್ನು ಹೊಂದಿದೆ ಎಂಬ ಒಂದೇ ಅಭಿಪ್ರಾಯ ಹೊಂದಿದ್ದಾರೆ. ಡಾಕ್ಟರ್ ಫೆಂಡರ್‌ರವರ ಉಲ್ಲೇಖಕ್ಕೂ ಮೌಲಾನ ಮೌದೂದಿಯ ಉಲ್ಲೇಖಕ್ಕೂ ಮಧ್ಯೆ ಯಾವ ವ್ಯತ್ಯಾಸವೂ ಇಲ್ಲ.

ಇಸ್ಲಾಮಿನ ಪ್ರವಾದಿಯವರ(ಸ) ಕುರಿತು ವಿಮರ್ಶಕರ ಆಕ್ಷೇಪಗಳು ನೋವನ್ನುಂಟು ಮಾಡುತ್ತಿವೆಯಾದರೂ ಅವುಗಳು ಆಶ್ಚರ್ಯಕರವಲ್ಲ. ಇಸ್ಲಾಮಿನ ವಿರುದ್ಧ ಅವರಿಗಿರುವ ಹಗೆತನವು ಅವರ ಪೈಕಿ ಸಮತೋಲನ ಮನೋಭಾವದ ಚರಿತ್ರೆಗಾರನನ್ನೂ ತನ್ನ ಪ್ರಭಾವಕ್ಕೆ ಗುರಿ ಮಾಡುತ್ತದೆ. ಆದರೆ ಪ್ರವಾದಿವರ್ಯರನ್ನು(ಸ) ಅನುಸರಿಸುವವರು ತಾವೆಂದು ಘೋಷಿಸುವ ಮುಸ್ಲಿಮರು ಅಜ್ಞಾನದಿಂದ ಅಥವಾ ಅಹಂಭಾವದಿಂದ ಪ್ರವಾದಿಯವರನ್ನು(ಸ) ಮತಪರಿವರ್ತನೆ ಮಾಡಲು ಅಥವಾ ಗೆಲ್ಲಲು ಖಡ್ಗ ಹಿರಿದ ಒಬ್ಬ ಅನಾಗರಿಕ ಮನುಷ್ಯನೆಂಬಂತೆ ಚಿತ್ರಿಸುವುದು ಅತ್ಯಂತ ನೋವುಂಟು ಮಾಡುವ ಸಂಗತಿಯಾಗಿದೆ.

ಇಸ್ಲಾಮ್ ಧರ್ಮದಲ್ಲಿ ಅಂತರ್ಗತವಾಗಿರುವ ಅದರ ಸೌಂದರ್ಯ ಮತ್ತು ಆಧ್ಯಾತ್ಮಿಕ ಶಕ್ತಿಯಿಂದ ಮಾತ್ರ ಹೃದಯಗಳನ್ನು ಗೆಲ್ಲಲು ಹಿಂದಿನ ಕಾಲದಲ್ಲಿ ಮತ್ತು ಇಂದಿನ ಕಾಲದಲ್ಲಿ ಅದಕ್ಕಿರುವ ಸಾಮರ್ಥ್ಯದ ಕುರಿತು ಮೌಲಾನ ಮೌದೂದಿಗೆ ಮನವರಿಕೆಯಾಗಿರಲಿಲ್ಲ. ಅವರು ಹೀಗೆ ಹೇಳುತ್ತಾರೆ:

"ಒಂದು ದೇಶವು ತಾನು ಬದ್ಧವಾಗಿರುವ ಸಿದ್ಧಾಂತಗಳನ್ನು ಪೂರ್ಣವಾಗಿ ಕೃತಿರೂಪಕ್ಕೆ ಇಳಿಸುವುದು ತನ್ನ ನೆರೆಹೊರೆಯ ದೇಶಗಳು ಸಿದ್ಧಾಂತಗಳನ್ನು ಕೃತಿರೂಪಕ್ಕೆ ಇಳಿಸುವ ತನಕ ಸಾಧ್ಯವಾಗಲಾರದು. ಆದುದರಿಂದ ಸಾರ್ವಜನಿಕ ಸುಧಾರಣೆ ಮತ್ತು ಆತ್ಮರಕ್ಷಣೆ ಇವೆರಡರ ಗಳಿಕೆಗಾಗಿ ಒಂದು ಪ್ರದೇಶದಲ್ಲಿ ಮಾತ್ರ ಇಸ್ಲಾಮಿ ವ್ಯವಸ್ಥೆ ಸ್ಥಾಪಿತವಾದರೆ ಮುಸ್ಲಿಮ್ ಪಾರ್ಟಿಗೆ

ಸಾಕಾಗಲಾರದು. ತನ್ನ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಈ ವ್ಯವಸ್ಥೆಯನ್ನು ಎಲ್ಲಾ ದಿಕ್ಕುಗಳಲ್ಲಿ ವಿಸ್ತಾರಗೊಳಿಸಲು ಅದು ಪ್ರಯತ್ನಿಸಬೇಕು. ಅದು ತನ್ನ ವಿಚಾರಗಳನ್ನೂ ಸಿದ್ಧಾಂತಗಳನ್ನೂ ಲೋಕದಲ್ಲಿ ಪ್ರಚಾರಗೊಳಿಸುವುದು ಮತ್ತು ಎಲ್ಲಾ ದೇಶಗಳ ನಿವಾಸಿಗಳಿಗೆ ಹೀಗೆ ಆಹ್ವಾನ ನೀಡುವುದು: 'ಈ ವಿಚಾರಗಳನ್ನು ಅಂಗೀಕರಿಸಿರಿ. ಇದರಲ್ಲಿ ನಿಮ್ಮ ನಿಜವಾದ ಜಯವು ಅಡಕವಾಗಿದೆ.' ಇನ್ನೊಂದು ಕಡೆ ಅದಕ್ಕೆ ಶಕ್ತಿ ಇದ್ದರೆ ಅದು ಯುದ್ಧ ಮಾಡಿ ಮುಸ್ಲಿಮೇತರ ಸರಕಾರಗಳನ್ನು ಅಳಿಸಿ ಬಿಡುವುದು ಮತ್ತು ಅವುಗಳ ಸ್ಥಾನದಲ್ಲಿ ಇಸ್ಲಾಮೀ ಸರಕಾರವನ್ನು ಸ್ಥಾಪಿಸುವುದು." (ಹಖೀಖತೆ ಜಿಹಾದ್-ಪುಟ 64)

ಪ್ರವಾದಿ(ಸ) ಮತ್ತು ಇಸ್ಲಾಮ್ ಬಗ್ಗೆ ಸರ್ ವಿಲಿಯಮ್ ಮ್ಯೂರ್‌ರ ವಿಕೃತ ವಿಚಾರಗಳನ್ನು ಮೌಲಾನ ಮೌದೂದಿ ಅನುಮೋದಿಸುತ್ತಾರೆ. ಇಸ್ಲಾಮಿನ ಪ್ರವಾದಿಯನ್ನು ಸುಳ್ಳುಗಾರ ಎಂದು ಸಾಬೀತುಗೊಳಿಸಲು ಫಾದರ್ ಫೆಂಡರ್‌ರವರ ಕೋರಿಕೆ ಪ್ರಕಾರ ಬರೆದ ಪ್ರವಾದಿಯವರ ಜೀವನ ಚರಿತ್ರೆಯಲ್ಲಿ ಅವರು ಹೀಗೆ ಬರೆಯುತ್ತಾರೆ: "ಮುಹಮ್ಮದ್‌ರ ಖಡ್ಗ ಮತ್ತು ಖುರ್‌ಆನ್ ನಾಗರಿಕತೆ, ಸ್ವಾತಂತ್ರ್ಯ ಮತ್ತು ಸತ್ಯಗಳ ವಿರುದ್ಧ ಲೋಕ ಇಂದಿನ ತನಕ ಕಂಡವರಲ್ಲಿ ಅತ್ಯಂತ ಕೆಟ್ಟ ಶತ್ರುಗಳು."

ಗಾಂಧೀಜಿಯವರು ತನ್ನ ಜೀವಿತದ ಪ್ರಥಮ ಕಾಲಘಟ್ಟದಲ್ಲಿ ಇಸ್ಲಾಮಿನ ಕುರಿತು ಮೇಲೆ ವಿವರಿಸಿದಂತಹ ವಿಕೃತ ಚಿತ್ರಣಗಳಿಂದ ಪ್ರಭಾವಿತರಾಗಿ ಹೀಗೆ ಹೇಳಿದ್ದರು: "ಇಸ್ಲಾಮ್ ಹಿಂಸೆಯ ವಾತಾವರಣದಲ್ಲಿ ಜನ್ಮತಾಳಿತು. ಆ ಕಾಲದಲ್ಲಿ ಅದರ ಚಾಲಕ ಶಕ್ತಿ ಖಡ್ಗವಾಗಿತ್ತು. ಇಂದು ಸಹ ಖಡ್ಗವೇ ಆಗಿದೆ."

ಆದರೆ ಗಾಂಧೀಜಿಯವರು ಬಹಳ ಸೂಕ್ಷ್ಮ ನಿರೀಕ್ಷಕರಾಗಿದ್ದರು. ಅವರು ಅನಂತರ ತಮ್ಮ ತಪ್ಪು ಅಭಿಪ್ರಾಯವನ್ನು ತಿದ್ದಿ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಹೀಗೆ ಬರೆದರು : "ನಾನು ಹೆಚ್ಚು ಹೆಚ್ಚಾಗಿ ಅಧ್ಯಯನ ಮಾಡಿದಂತೆ ನಾನು ಕಂಡುಕೊಂಡೆನು : ಇಸ್ಲಾಮಿನ ಶಕ್ತಿಯು ಖಡ್ಗದಲ್ಲಿ ಅಡಕವಾಗಿರುವುದಲ್ಲ."

ಬೇರೆ ಹಿಂದುಗಳು ಮತ್ತು ಇಸ್ಲಾಮಿನ ಕುರಿತು ವಸ್ತುನಿಷ್ಠ ಅಧ್ಯಯನ ಮಾಡಿದ ಆರ್ಯ ಸಮಾಜಿಗಳು ಸಹ ಗಾಂಧೀಜಿಯವರ ಸಂಶೋಧನೆಯನ್ನು ಅಂಗೀಕರಿಸಿದರು. ಪಂಡಿತ್ ಜ್ಞಾನೇಂದ್ರ ದೇವ ಶರ್ಮ ಶಾಸ್ತ್ರಿ ಹೀಗೆ ಹೇಳುತ್ತಾರೆ:

"ಇಸ್ಲಾಮಿನ ದ್ವೇಷಭರಿತರಾದ ಶತ್ರುಗಳು ಮತ್ತು ಸುಳ್ಳು ಪ್ರಚಾರ ಮಾಡಿ ದೇಶದಲ್ಲಿ ದೊಂಬಿ ಗಲಭೆಗಳನ್ನು ಬಡಿದೆಬ್ಬಿಸುವವರು ಹೀಗೆ ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಮದೀನಕ್ಕೆ ಹೋದ ನಂತರ ಶಕ್ತಿಸಾಮರ್ಥ್ಯಗಳನ್ನು ಪಡೆದು ತಮ್ಮ ಕಪಟ ದಯೆ ಮತ್ತು ಸೌಹಾರ್ದದ ಉಪದೇಶಗಳನ್ನು ತ್ಯಜಿಸಿದರು. ತಮ್ಮ ಜೀವಿತದ ಮುಖ್ಯ ಗುರಿಯ (ಲೌಕಿಕ ಸುಖ, ಅಧಿಕಾರ, ಸಂಪತ್ತು ಮೊದಲಾದುವುಗಳ) ಗಳಿಕೆಗಾಗಿ ಬಹಳ ತೀವ್ರವಾಗಿ ಖಡ್ಗ ಮತ್ತು ಬಲವನ್ನು ಪ್ರಯೋಗಿಸಿದರು ಮತ್ತು ರಕ್ತಪಿಪಾಸು ಪೈಗಂಬರರಾಗಿ ಪರಿಣಮಿಸಿ ಲೋಕದಲ್ಲಿ ನಾಶ ವಿನಾಶಗಳನ್ನು ಉಂಟುಮಾಡಿದರು ಹಾಗೂ ತಮ್ಮ ಕಪಟ ಸಹನೆಯ ಮತ್ತು ಸೌಮ್ಯತೆಯ ಆದರ್ಶತೆಯಿಂದ ವ್ಯತಿಕ್ರಮಿಸಿದರು. ಹೀಗೆ ಹೇಳುವವರು ಪೂರ್ವಗ್ರಹ ಪೀಡಿತರೂ ಪಕ್ಷಾವಲಂಬಿಗಳೂ ಸಂಕುಚಿತ ಮನೋಭಾವದವರೂ ಅಜ್ಞಾನದ ಪರದೆಯನ್ನು ತಮ್ಮ ದೃಷ್ಟಿಗಳ ಮೇಲೆ ಹೊಂದಿದವರೂ ಆಗಿದ್ದಾರೆ. ಅವರು ಪ್ರಕಾಶಕ್ಕೆ ಬದಲಾಗಿ ಅಗ್ನಿಯನ್ನೂ ಸೌಂದರ್ಯಕ್ಕೆ ಬದಲಾಗಿ ಕುರೂಪವನ್ನೂ ಒಳಿತಿಗೆ ಬದಲಾಗಿ ಕೆಡುಕನ್ನೂ ಹುಡುಕುವವರಾಗಿರುತ್ತಾರೆ. ಅವರು ಪ್ರತಿಯೊಂದು ಒಳಿತಿನ ಉನ್ನತ ಸ್ಥಾನ ಮತ್ತು ಉಪದೇಶಗಳನ್ನು ಎಷ್ಟು ಕೆಟ್ಟ ರೂಪದಲ್ಲಿ ಜನರ ಮುಂದೆ ಇರಿಸುತ್ತಾರೆಂದರೆ ಅದರ ಮೂಲಕ ಅವರ ಕೆಟ್ಟ ಆಂತರಿಕ ಸ್ಥಿತಿ ಮತ್ತು ಕಪ್ಪು ಹೃದಯದ ಪರಿಚಯ ಚೆನ್ನಾಗಿ ಆಗುತ್ತದೆ.

"ಇಸ್ಲಾಮಿನ ವಿರೋಧಿಗಳು ಕುರುಡರಾಗಿದ್ದಾರೆ. ಅವರಿಗೆ ಕಾಣಿಸುವುದಿಲ್ಲ. ಮುಹಮ್ಮದ್‌ರವರು ಬಳಸಿದ ಖಡ್ಗ ದಯೆ, ಸಹಾನುಭೂತಿ, ಪ್ರೀತಿ ಮತ್ತು ಕ್ಷಮೆಯದಾಗಿತ್ತು. ಅದು ಅವರ ಶತ್ರುಗಳ ಮೇಲೆ ಪ್ರಭಾವ ಬೀರಿ ಅವರ ಹೃದಯಗಳನ್ನು ಪರಿಶುದ್ಧಗೊಳಿಸಿ ಕನ್ನಡಿಯಂತೆ ಮಾಡುತ್ತಿತ್ತು. ಉಕ್ಕಿನ ಖಡ್ಗಕ್ಕಿಂತಲೂ ಅವರು ಬಳಸಿದ ಖಡ್ಗವು ಹೆಚ್ಚು ಹರಿತವಾಗಿತ್ತು."

(ದುನ್‌ಯಾ ಕಾ ಹಾದಿಯೆ ಅಲ್‌ಝುಮ್ ಗೈರೋಂಕಿ ನಝುರ್ ಮೇಂ - ಪುಟ 57)

ಈ ಉಲ್ಲೇಖವನ್ನು ಓದಿದ ನಂತರ ಹೃದಯದೊಳಗಿಂದ ಒಂದು ಆಶಯವು ಸ್ಫುರಿಸುತ್ತದೆ. ಮಹಾತ್ಮ ಶ್ರೀ ಕೃಷ್ಣರವರ ಒಬ್ಬ ಅನುಯಾಯಿ ಪ್ರವಾದಿಯವರ(ಸ) ಕುರಿತು ಸೂಚಿಸಿದಂತಹ ಮೆಚ್ಚುಗೆಯ ನುಡಿಗಳನ್ನು ಮೌಲಾನ ಮೌದೂದಿ ಸಹ ಬಳಸಿದ್ದರೆ ಎಷ್ಟು ಚೆನ್ನಾಗಿತ್ತು!

ಪೂರ್ವಗ್ರಹ ಪೀಡಿತರಲ್ಲದ ಮುಸ್ಲಿಮೇತರ ಚರಿತ್ರೆಗಾರರು ಇಸ್ಲಾಮಿನ ಚರಿತ್ರೆಯನ್ನು ಅಧ್ಯಯನ ಮಾಡಿ ಪ್ರವಾದಿಯವರು(ಸ) ಔದಾರ್ಯವಂತರೂ ದಯಾಳುವೂ ಆಗಿದ್ದರೆಂದು ಮಾತ್ರವಲ್ಲ, ಅವರು ಮಾನವೀಯ ಸದ್ಗುಣಗಳನ್ನು ಪ್ರದರ್ಶಿಸಿದ ಪರಮೋತ್ಕೃಷ್ಟ ಮಾದರಿಯಾಗಿದ್ದರೆಂದು ವರ್ಣಿಸಿರುವರು. ಇನ್ನೊಬ್ಬ ಹಿಂದೂ ಸಹೋದರ, 'ಸತ್ ಉಪದೇಶ್' ಎಂಬ ಪತ್ರಿಕೆಯ ಸಂಪಾದಕರಾಗಿದ್ದ ಅವರು ಹೀಗೆ ಬರೆದರು:

"ಇಸ್ಲಾಮ್ ಖಡ್ಗದ ಮೂಲಕ ಪ್ರಚಾರಗೊಂಡಿತು ಎಂದು ಕೆಲವರು ಹೇಳುತ್ತಾರೆ. ಆದರೆ ನಾವು ಅವರ ಅಭಿಪ್ರಾಯದೊಂದಿಗೆ ಸಹಮತವನ್ನು ಪ್ರಕಟಿಸಲಾರೆವು. ಏಕೆಂದರೆ ಬಲಾತ್ಕಾರದಿಂದ ಹರಡಲಾದುದನ್ನು ಶೀಘ್ರವಾಗಿ ಬಲಾತ್ಕಾರ ಮಾಡಿದವನಿಂದ ವಾಪಾಸು ಪಡೆಯಲಾಗುತ್ತಿದೆ. ಇಸ್ಲಾಮ್ ಪ್ರಚಾರಗೊಂಡುದು ಬಲಾತ್ಕಾರದಿಂದಾಗಿದ್ದರೆ ಇಂದು ಇಸ್ಲಾಮಿನ ಹೆಸರು ಸಹ ಬಾಕಿಯಾಗಿ ಉಳಿಯುತ್ತಿರಲಿಲ್ಲ. ಇಲ್ಲ, ಹಾಗೆ ಆಗಿಲ್ಲ. ಇಸ್ಲಾಮ್ ದಿನಂಪ್ರತಿ ಅಭಿವೃದ್ಧಿಗೊಳ್ಳುತ್ತಾ ಇದೆ. ಏಕೆ? ಏಕೆಂದರೆ ಇಸ್ಲಾಮಿನ ಪ್ರವಾದಿಯವರಲ್ಲಿ ಆಧ್ಯಾತ್ಮಿಕ ಶಕ್ತಿ ಇತ್ತು. ಮಾನವರಿಗಾಗಿ ಪ್ರೇಮ ಇತ್ತು. ಅವರ ಅಂತರಂಗದಲ್ಲಿ ಪ್ರೀತಿ ಮತ್ತು ದಯೆಯ ಪರಿಶುದ್ಧ ಭಾವನೆಗಳು ಕಾರ್ಯಪ್ರವೃತ್ತವಾಗಿದ್ದುವು. ಒಳ್ಳೆಯ ಯೋಚನೆಗಳು ಅವರಿಗೆ ಮಾರ್ಗದರ್ಶನ ನೀಡುತ್ತಿದ್ದುವು."

(ಸತ್ ಉಪದೇಶ 7-7-1915)

ಆರ್ಯ ಸಮಾಜದವರ ಮುಸ್ಲಿಮ್ ವಿರುದ್ಧ ಮನೋಭಾವನೆ ಎಲ್ಲರಿಗೂ ಚೆನ್ನಾಗಿ ತಿಳಿದುದಾಗಿದೆ. ಅದರ ಸ್ಥಾಪಕರಾಗಿದ್ದ ಸ್ವಾಮೀ ದಯಾನಂದ ಸರಸ್ವತಿಯವರು ಇಸ್ಲಾಮ್ ಧರ್ಮವನ್ನೂ ಪ್ರವಾದಿಯವರನ್ನೂ(ಸ) ತೀವ್ರವಾಗಿ ವಿಮರ್ಶಿಸಿದ್ದರು. ಹೀಗಿದ್ದರೂ ಆರ್ಯಸಮಾಜದವರ ವತಿಯಿಂದ ಲಾಹೋರ್‌ನಲ್ಲಿ ನಡೆಸಲಾದ ಒಂದು ಸಭೆಯಲ್ಲಿ "ವೇದಿಕ್ ಮ್ಯಾಗಝಿನ್"ನ ಸಂಪಾದಕ ಮತ್ತು ಕಾಂಗ್ಡಿ ಗುರುಕುಲದ ಪ್ರಾಧ್ಯಾಪಕರಾಗಿದ್ದ ಪ್ರೊಫೆಸರ್ ರಾಮ್‌ದೇವ್ ಹೀಗೆ

ಹೇಳಿದರು:

"ಮದೀನದಲ್ಲಿ ಕುಳಿತ ಮುಹಮ್ಮದ್ ಶಿಷ್ಯರಲ್ಲಿ ಜಾದೂವಿನ ವಿದ್ಯುಚ್ಛಕ್ತಿ ತುಂಬಿಸಿದರು. ಆ ವಿದ್ಯುಚ್ಛಕ್ತಿ ಮನುಷ್ಯರನ್ನು ದೇವತೆಗಳನ್ನಾಗಿ ಮಾಡುವಂತಹದಾಗಿತ್ತು... ಇಸ್ಲಾಮ್ ಕೇವಲ ಖಡ್ಗದಿಂದ ಹಬ್ಬಿತೆಂದು ಹೇಳುವುದು ತಪ್ಪಾಗಿದೆ. ಸತ್ಯವಾದ ಸಂಗತಿಯೇನೆಂದರೆ, ಇಸ್ಲಾಮಿನ ಪ್ರಚಾರಕ್ಕಾಗಿ ಎಂದೂ ಖಡ್ಗವನ್ನು ಎತ್ತಲಾಗಿಲ್ಲ. ಧರ್ಮವನ್ನು ಖಡ್ಗದ ಮೂಲಕ ಹರಡಲು ಸಾಧ್ಯವಿದ್ದರೆ ಇಂದು ಯಾರಾದರೂ ಹಾಗೆ ಮಾಡಿ ತೋರಿಸಲಿ." (ಬರ್‌ಗರಿಖೀದ ರಸೂಲ್ ಗೈರೋಂ ವೇಂ ಮಖ್‌ಬೂಲ್- ಪುಟ 24)

ಈ ಉಲ್ಲೇಖದ ಕೊನೆಯ ವಾಕ್ಯ ಒಂದು ಪಂಥಾಹ್ವಾನವಾಗಿದೆ. ಈ ಆಹ್ವಾನವನ್ನು ಸ್ವೀಕರಿಸಲು ಯಾರೂ ಮುಂದೆ ಬರಲಾರರು. ಮೌಲಾನ ಮೌದೂದಿ ಸಹ ಮುಂದಾಗಲಾರರು. ಯಾವುದೇ ಖಡ್ಗ ಹೃದಯವನ್ನು ಬದಲಾಯಿಸಿ ವಿಶ್ವಾಸವನ್ನು ಅವಿಶ್ವಾಸವಾಗಿ ಪರಿವರ್ತಿಸಲಾರದು. ಪ್ರವಾದಿ ಮುಹಮ್ಮದ್‌ರವರ(ಸ) ಮೊದಲು ಪ್ರವಾದಿಗಳ ದೀರ್ಘ ಶೃಂಖಲೆ ಇತ್ತು. ಪ್ರತಿಯೊಬ್ಬ ಪ್ರವಾದಿಯನ್ನು ಬಲಪ್ರಯೋಗದ ಮೂಲಕ ವಿರೋಧಿಸಲಾಯಿತೆಂಬುದು ಚಾರಿತ್ರಿಕ ಸತ್ಯವಾಗಿದೆ. ಪ್ರವಾದಿ ಸತ್ಯ ಧರ್ಮವನ್ನು ಉಪದೇಶಿಸಿದಾಗಲೆಲ್ಲಾ ಆ ಪ್ರವಾದಿಯನ್ನು ಖಡ್ಗದಿಂದ ವಿರೋಧಿಸಲಾಯಿತು. ಹೀಗಿದ್ದರೂ ಸತ್ಯಧರ್ಮವು ಪ್ರಚಾರಗೊಂಡಿತು. ಖಡ್ಗಕ್ಕೆ ಅದನ್ನು ತಡೆಯಲು ಸಾಧ್ಯವಾಗಲಿಲ್ಲ. ಎಲ್ಲಾ ಪ್ರವಾದಿಗಳು ಮತ್ತು ಅವರ ಅನುಯಾಯಿಗಳು ಖಡ್ಗದ ಶಕ್ತಿಯ ಮುಂದೆ ಸೆಟೆದು ನಿಲ್ಲಬಹುದಾದರೆ ಪ್ರವಾದಿ ಮುಹಮ್ಮದ್(ಸ)ರವರು ಬೇರೆಯೇ ಒಂದು ಕಾರ್ಯ ವಿಧಾನವನ್ನು ಕೈಗೊಂಡು ದಬ್ಬಾಳಿಕೆಯ ಆಯುಧವಾದ ಖಡ್ಗವನ್ನು ಹೇಗೆ ತಾನೆ ಕೈಗೆತ್ತಿಕೊಳ್ಳಲು ಸಾಧ್ಯ? ಜನರ ವಿಶ್ವಾಸವನ್ನು ಬದಲಾಯಿಸಲು ಪ್ರವಾದಿ(ಸ) ಖಡ್ಗ ಪ್ರಯೋಗ ಮಾಡಿದರೆಂದು ಆರೋಪ ಹೊರಿಸುವುದಕ್ಕಿಂತ ದೊಡ್ಡ ಅನ್ಯಾಯದ ಸಂಗತಿ ಬೇರೊಂದಿಲ್ಲ.

ಇನ್ನೊಬ್ಬ ಮುಸ್ಲಿಮೇತರ ವಿದ್ವಾಂಸರಾದ ಡಾಕ್ಟರ್ ಡಿ.ಡಬ್ಲ್ಯೂ ಲೈಟ್‌ರ್ಫ್ ತಪ್ಪು ಆರೋಪವನ್ನು ತಿರಸ್ಕರಿಸಿ ಪವಿತ್ರ ಖುರ್‌ಆನ್ ವಚನಗಳ ಆಧಾರದಿಂದ ಹೀಗೆ ಹೇಳುತ್ತಾರೆ:

"ಜಿಹಾದ್ ಮೂಲಕ ಉದ್ದೇಶಿಸುವುದು ಬಲಾತ್ಕಾರದ ಮೂಲಕ ಇಸ್ಲಾಮಿನ ಹರಡುವಿಕೆ ಎಂಬ ವಾದವನ್ನು ಖುರ್‌ಆನ್ ಅಲ್ಲಗಳೆಯುತ್ತದೆ. ಜಿಹಾದಿನ ಉದ್ದೇಶ ಮಸ್‌ಜಿದ್‌ಗಳನ್ನು, ಚರ್ಚ್‌ಗಳನ್ನು, ಯಹೂದಿ ದೇವಾಲಯಗಳನ್ನು ಮತ್ತು ಸನ್ಯಾಸಿ ಮಠಗಳನ್ನು ಸಂರಕ್ಷಿಸುವುದಾಗಿದೆ ಎಂದು ಖುರ್‌ಆನ್ ಹೇಳುತ್ತದೆ." (ಏಶಿಯಾಟಿಕ್ ಕ್ವಾರ್ಟರ್ಲೀ ರಿವ್ಯೂ - ಅಕ್ಟೋಬರ್ 1886)

ಹಝ್ರತ್ ಪ್ರವಾದಿಯವರನ್ನು(ಸ) ಸ್ಪಷ್ಟವಾಗಿ ದೋಷಾರೋಪದಿಂದ ಮುಕ್ತರನ್ನಾಗಿ ಮಾಡಿದ ಈ ಉಲ್ಲೇಖಗಳನ್ನು ಓದಿ ಪ್ರವಾದಿ(ಸ) ಧರ್ಮ ಪ್ರಚಾರಕ್ಕಾಗಿ ಖಡ್ಗವನ್ನು ಎತ್ತಿಕೊಂಡರೆಂದು ಆರೋಪಿಸುವ ಮುಸ್ಲಿಮರು ಪವಿತ್ರ ಖುರ್‌ಆನಿನ ಈ ಕೆಳಗಿನ ಪ್ರಶ್ನೆಗೆ ಉತ್ತರ ಕೊಡಲಿ:

"ಏನು ಅವರು ಖುರ್‌ಆನ್ ಬಗ್ಗೆ ಚಿಂತಿಸುವುದಿಲ್ಲವೇ? ಅಥವಾ ಅವರ ಹೃದಯಗಳ ಮೇಲೆ ಬೀಗ ಹಾಕಲಾಗಿದೆಯೋ?"

(ಪವಿತ್ರ ಖುರ್‌ಆನ್ 47:25)

"ತಫ್‌ಹೀಮುಲ್ ಖುರ್‌ಆನ್" ಎಂಬ ಹೆಸರಿನಲ್ಲಿ ಪವಿತ್ರ ಖುರ್‌ಆನಿಗೆ ವ್ಯಾಖ್ಯಾನ ಬರೆದ ಮೌಲಾನ ಮೌದೂದಿ ಈ ವಚನವನ್ನು ಹಲವು ಸಾರಿ ಓದಿರಬಹುದು. ಪವಿತ್ರ ಖುರ್‌ಆನನ್ನು ರಾಜಕೀಯ ಉದ್ದೇಶಕ್ಕಾಗಿ ವ್ಯಾಖ್ಯಾನಿಸುವವನು ದಾರಿತಪ್ಪಿ ಹೋಗಬಹುದೆಂದು ಅವರಿಗೆ ಅನಿಸಿರಲಿಲ್ಲವೇ? ಮೌಲಾನ ಹೀಗೆ ಹೇಳುತ್ತಾರೆ:

"ಈ ಧೋರಣೆಯನ್ನು ಪ್ರವಾದಿಯವರು(ಸ) ಮತ್ತು ಅವರ ನಂತರ ಖಲೀಫರು ಅನುಷ್ಠಾನಕ್ಕೆ ತಂದರು. ಮುಸ್ಲಿಮ್ ಪಾರ್ಟಿ ಅಸ್ತಿತ್ವಕ್ಕೆ ಬಂದ ಅರಬ್ ದೇಶವನ್ನು ಇಸ್ಲಾಮಿ ಸರಕಾರದ ಅಧೀನಕ್ಕೆ ಮೊತ್ತ ಮೊದಲು ತರಲಾಯಿತು. ಅನಂತರ ಪ್ರವಾದಿ(ಸ) ಸುತ್ತುಮುತ್ತಲಿನ ದೇಶಗಳಿಗೆ ತನ್ನ ಸಿದ್ಧಾಂತಗಳ ಕಡೆಗೆ ಆಹ್ವಾನ ನೀಡಿದರು. ಅವರು ಈ ಆಹ್ವಾನ ಅಂಗೀಕರಿಸುತ್ತಾರೋ ಅಥವಾ ತಿರಸ್ಕರಿಸುತ್ತಾರೋ ಎಂಬುದನ್ನು ಪ್ರತೀಕ್ಷಿಸುತ್ತಾ ನಿಲ್ಲಲಿಲ್ಲ. ಶಕ್ತಿಯನ್ನು ಗಳಿಸಿದ ಕೂಡಲೇ ರೋಮ್ ಸರಕಾರದ ವಿರುದ್ಧ ಸಂಘರ್ಷವನ್ನು ಆರಂಭಿಸಿದರು. ಪ್ರವಾದಿಯವರ(ಸ) ನಿಧನದ ನಂತರ ಅಬೂಬಕರ್‌ರವರು (ರಝಿಯಲ್ಲಾಹು ಅನ್‌ಹು) ನಾಯಕರಾದರು. ಅವರು ರೋಮ್ ಮತ್ತು ಇರಾನ್ ಎಂಬ ಎರಡು ಮುಸ್ಲಿಮೇತರ ಸರಕಾರಗಳ ಮೇಲೆ ಆಕ್ರಮಣ ಮಾಡಿದರು. ಉಮರ್‌ರವರು(ರ) ಈ ಆಕ್ರಮಣವನ್ನು ವಿಜಯದ ಅಂತಿಮ ಘಟ್ಟದ ತನಕ ತಲಪಿಸಿದರು." (ಹಖೀಖತೆ ಜಿಹಾದ್ - ಪುಟ 65)

ನೆರೆಹೊರೆಯ ಮುಸ್ಲಿಮೇತರ ಸರಕಾರಗಳ ವಿರುದ್ಧ ಇದೊಂದು ಯುದ್ಧ ಘೋಷಣೆಯಾಗಿದೆ. ಮುಸ್ಲಿಮ್ ದೇಶವು ಬಲಹೀನವಾಗಿರುವ ತನಕ ಮಾತ್ರ ನೆರೆಹೊರೆಯ ಮುಸ್ಲಿಮೇತರ ರಾಜ್ಯಗಳು ಸುರಕ್ಷಿತವಾಗಿರುವುವು ಎಂದು ಇಲ್ಲಿ ಸೂಚಿಸಲಾಗಿದೆ. ಮೇಲಿನ ಉಲ್ಲೇಖವನ್ನು ಬರೆದ ವ್ಯಕ್ತಿ ಕಮ್ಯುನಿಸ್ಟ್ ಪಾರ್ಟಿಯ ಮಾರ್ಕ್ಸಿಸ್ಟ್ ಚರಿತ್ರೆಗಾರನಾಗಿದ್ದರೆ ಇದರ ಕಡೆಗೆ ಇನ್ನೊಮ್ಮೆ ದೃಷ್ಟಿಸುವ ಅಗತ್ಯವಿರುತ್ತಿರಲಿಲ್ಲ. ಆದರೆ ಇದು ಮೌಲಾನ ಮೌದೂದಿಯಂತಹ ಗಣ್ಯ ಮುಸ್ಲಿಮ್ ನೇತಾರ ಬರೆದುದಾಗಿದೆ. ಆದುದರಿಂದ ಇದು ಮ್ಯೂರ್, ಫೆಂಡರ್, ಸ್ಮಿತ್ ಮೊದಲಾಗವರು ಬರೆದುದಕ್ಕಿಂತ ಹೆಚ್ಚು ಅಪಮಾನಕರವಾಗಿದೆ. ಮೇಲಿನ ಉಲ್ಲೇಖವನ್ನು ಉರ್ದು ಮೂಲ ಕೃತಿಯಿಂದ ಭಾಷಾಂತರಿಸಲಾಗಿದೆ. ಮೌಲಾನರವರು "ಮುಸ್ಲಿಮ್ ಪಾರ್ಟಿ" ಎಂಬ ಪದಗಳನ್ನು ಉದ್ದೇಶಪೂರ್ವಕವಾಗಿ ಬಳಸಿದ್ದಾರೆ. ಅವರು ಮುಸ್ಲಿಮ್ ಉಮ್ಮವನ್ನು (ಸಮುದಾಯವನ್ನು) ಒಂದು ರಾಜಕೀಯ ಪಾರ್ಟಿಯ ಕೆಳದರ್ಜೆಗೆ ತಳ್ಳುತ್ತಿದ್ದಾರೆ. ಅವರಿಗೆ ಎರಡು ಪದಗಳ ಅರ್ಥ ವ್ಯತ್ಯಾಸದ ಕುರಿತು ಅರಿವು ಇದೆ. ಅವರು ಇನ್ನೊಂದು ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ: "ಪವಿತ್ರ ಖುರ್‌ಆನ್ 'ಪಾರ್ಟಿ' ಎಂಬ ಅರ್ಥದಲ್ಲಿ ಪ್ರಯೋಗಿಸಿದ ಇನ್ನೊಂದು ಪದ 'ಉಮ್ಮ' ಎಂದಾಗಿದೆ."

(ಮಸಾಲಾಯೆ ಖೌಮಿಯಾತ್ - ಪುಟ105)

ಮುಸ್ಲಿಮರನ್ನು ಒಂದು ರಾಜಕೀಯ ಪಾರ್ಟಿಯಾಗಿ ಪ್ರತಿಬಿಂಬಿಸಿದ ಮೌಲಾನ ಉಪಪ್ರಜ್ಞೆಯಿಂದ ಅಥವಾ ಉದ್ದೇಶಪೂರ್ವಕವಾಗಿ ಪ್ರವಾದಿಯವರನ್ನು(ಸ)ಒಬ್ಬ ರಾಜಕೀಯ ನಾಯಕನಿಗೆ ಸಮಾನನನ್ನಾಗಿ ಮಾಡಿ ಒಬ್ಬ ರಾಜಕಾರಣಿಗೆ ತಕ್ಕುದಾದ ನೈತಿಕ ಮೌಲ್ಯಗಳನ್ನು ಅವರ ಮೇಲೆ ಆರೋಪಿಸುತ್ತಾರೆ. ಹೀಗಲ್ಲವಾದರೆ ಮೌಲಾನ ಬರೆದ ಈ ಉಲ್ಲೇಖವನ್ನು ವಿವರಿಸುವುದು ಹೇಗೆ?:

"ಅನಂತರ ಪ್ರವಾದಿ(ಸ) ಸುತ್ತುಮುತ್ತಲಿನ ದೇಶಗಳಿಗೆ ತನ್ನ ಸಿದ್ಧಾಂತದ ಕಡೆಗೆ ಆಹ್ವಾನ ನೀಡಿದರು. ಅವರು ಈ ಆಹ್ವಾನ ಅಂಗೀಕರಿಸುತ್ತಾರೋ ಅಥವಾ ತಿರಸ್ಕರಿಸುತ್ತಾರೋ ಎಂಬುದನ್ನು ಪ್ರತೀಕ್ಷಿಸುತ್ತಾ ನಿಲ್ಲಲಿಲ್ಲ. ಶಕ್ತಿಯನ್ನು ಗಳಿಸಿದ ಕೂಡಲೇ ರೋಮ್ ಸರಕಾರದ ವಿರುದ್ಧ ಸಂಘರ್ಷವನ್ನು ಆರಂಭಿಸಿದರು."

ಪ್ರವಾದಿಯವರು(ಸ) ಹಿಟ್ಲರನ ಹಾಗೆ ಆಕ್ರಮಣ

ಮಾಡುವವರಾಗಿದ್ದರೆಂದು ಒಬ್ಬ ಮುಸ್ಲಿಮ್ ವಿದ್ವಾಂಸ ಪರೋಕ್ಷವಾಗಿಯಾದರೂ ಸೂಚಿಸಬಲ್ಲನೆಂಬುದು ಬಹಳ ಆಶ್ಚರ್ಯಕರವಾದ ಸಂಗತಿಯಾಗಿದೆ.

ಹಝ್ರತ್ ಪ್ರವಾದಿ[ಸ] ಶಾಂತಿಯ ರಾಜಕುವರರಾಗಿದ್ದರು. ಅವರು ಆಕ್ರಮಣಗಾರರಾಗಿರಲಿಲ್ಲ. ಮೌಲಾನ ಮೌದೂದಿಗೆ ರಾಜಕೀಯ ಅಧಿಕಾರದ ಆಸೆಯಿತ್ತು. ಆದುದರಿಂದ ಇಸ್ಲಾಮಿಕ ಚರಿತ್ರೆಯನ್ನು ವ್ಯಾಖ್ಯಾನಿಸುವಾಗ ಈ ಆಸೆ ಪ್ರಭಾವ ಬೀರುತ್ತಿತ್ತು. ಆದರೆ ಇಸ್ಲಾಮ್ ಧರ್ಮವನ್ನು ನೆಲೆನಿಲ್ಲಿಸಲು ರಾಜಕೀಯದ ಆವಶ್ಯಕತೆಯಿಲ್ಲ. ಇಂದು ಬಂಗ್ಲಾದೇಶವಾಗಿರುವ ಬಂಗಾಳದ ಪೂರ್ವಭಾಗದಲ್ಲಿ ಬ್ರಿಟಿಷರು ಮೊಗಲರಿಂದ ಆಡಳಿತೆಯನ್ನು ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿ ವಹಿಸಿಕೊಂಡಾಗ ಅಲ್ಲಿ ಮುಸ್ಲಿಮರ ಜನ ಸಂಖ್ಯೆ ಅತ್ಯಲ್ಪವಾಗಿತ್ತು. ಆದರೆ 1947ರಲ್ಲಿ, ಬಂಗಾಳ ಸ್ವತಂತ್ರವಾದಾಗ ಅಲ್ಲಿಯ ಬಹುಸಂಖ್ಯಾತರು ಮುಸ್ಲಿಮರಾಗಿದ್ದರು. ಆ ಪ್ರದೇಶದಲ್ಲಿ ಮುಂಚೆ ಮುಸ್ಲಿಮರಿಗೆ ಯಾವುದೇ ರಾಜಕೀಯ ಅಧಿಕಾರ ಇರಲಿಲ್ಲ. ಅಲ್ಲಿಗೆ ಉತ್ತರ ಹಿಂದೂಸ್ತಾನದಿಂದ ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮುಸ್ಲಿಮರು ವಲಸೆ ಹೋಗಿಯೂ ಇರಲಿಲ್ಲ. ಅಲ್ಲಿನ ಜನರು ಮುಸ್ಲಿಮರಾಗಿ ಮತಾಂತರಗೊಂಡುದು ಅಲ್ಲೆಲ್ಲಾ ತಿರುಗಾಡುತ್ತಿದ್ದ ಸೂಫೀ ಸಂತರು ಮತ ಪ್ರಚಾರ ಮಾಡುತ್ತಿದ್ದ ಕಾರಣದಿಂದಾಗಿತ್ತು. ಇತರ ಮುಸ್ಲಿಮ್ ಮತ ಪ್ರಚಾರಕರೂ ಹಳ್ಳಿಗಳ ಮಸ್‌ಜಿದ್‌ಗಳ ಇಮಾಮರೂ ಈ ಕೆಲಸವನ್ನು ಶಾಂತಿಯುತವಾಗಿ ನಡೆಸಿದರು.

ಈ ಬಗ್ಗೆ ತೋಮಸ್ ಅರ್‌ನಾಲ್ಡ್ ಬರೆದುದು ಗಮನಾರ್ಹವಾಗಿದೆ:

> "ಮುಸ್ಲಿಮರು ಮತ ಪ್ರಚಾರ ರಂಗದಲ್ಲಿ ಗಳಿಸಿದ ದೊಡ್ಡ ಮತ್ತು ದೀರ್ಘಕಾಲೀನ ವಿಜಯಗಳು ಅವರು ರಾಜಕೀಯವಾಗಿ ಬಲಹೀನರಾಗಿದ್ದ ಕಾಲ ಮತ್ತು ಪ್ರದೇಶಗಳಲ್ಲಾಗಿತ್ತು."
>
> (ದಿ ಪ್ರೀಚಿಂಗ್ ಆಫ್ ಇಸ್ಲಾಮ್)

ಮೌಲಾನ ಮೌದೂದಿ ಬಂಗ್ಲಾದೇಶ, ಮಲೇಶಿಯಾ ಮತ್ತು ಇಂಡೋನೇಶಿಯಾ ದೇಶಗಳ ಇಸ್ಲಾಮಿಕ ಚರಿತ್ರೆಯನ್ನು ಎಂದೂ ಓದಿರಲಿಲ್ಲವೆಂದು ತೋರುತ್ತದೆ. ಅವರು ತುರ್ಕಿಗಳ, ಅಫ್‌ಘಾನಿಗಳ ಮತ್ತು ಮೊಗಲರ ವಿಜಯಗಳ ಚರಿತ್ರೆಯಿಂದ ಎಷ್ಟು ಮೋಹ ಪರವಶರಾಗಿದ್ದರೆಂದರೆ ಇಂದು ಲೋಕದಲ್ಲಿರುವ ಅತ್ಯಂತ ಹೆಚ್ಚು ಮುಸ್ಲಿಮ್ ಜನ ಸಂಖ್ಯೆಯಿಂದ ಕೂಡಿದ ಇಂಡೋನೇಶಿಯಾ ಎಂದೂ ಯಾವ ಮುಸ್ಲಿಮ್ ಆಕ್ರಮಣಗಾರನಿಂದಲೂ ಜಯಿಸಲ್ಪಟ್ಟಿರಲಿಲ್ಲವೆಂಬ ಸಂಗತಿಯನ್ನು ಗಮನಿಸಲು ಅವರಿಗೆ ಸಮಯ ದೊರಕಿರಲಿಲ್ಲ. ಅಲ್ಲಿ ಯಾವುದೇ ಹೋರಾಟವಾಗಲಿ ಹಿಂಸಾಚಾರವಾಗಲಿ ಇಸ್ಲಾಮ್ ಧರ್ಮಪ್ರಚಾರಕ್ಕಾಗಿ ನಡೆಯಲಿಲ್ಲ. ಮಲೇಶಿಯಾದ ಕುರಿತು ಸಹ ಹೀಗೆಯೇ ಹೇಳಬಹುದು.

ಹಝ್ರತ್ ಪ್ರವಾದಿ[ಸ] ನಿಸ್ಸಂಶಯವಾಗಿಯೂ ನಿಷ್ಕಳಂಕರಾಗಿದ್ದರು. ಅವರು ಆತ್ಮರಕ್ಷಣೆಗಾಗಿ ಮಾತ್ರ ಖಡ್ಗವನ್ನು ಕೈಗೆತ್ತಿಕೊಂಡರು. ಶತ್ರುಗಳ ದೌರ್ಜನ್ಯ ಸಹಿಸಲು ಅಸಾಧ್ಯವಾದಾಗ ಮಾತ್ರ ಅವರು ಹಾಗೆ ಮಾಡಿದರು.

ನಿಷ್ಪಕ್ಷಪಾತಿಯಾದ ಒಬ್ಬ ಸಿಖ್ ಪತ್ರಕರ್ತರು ಹೀಗೆ ಹೇಳಿರುತ್ತಾರೆ:

> "ಪ್ರವಾದಿಯವರ ಶತ್ರುಗಳು ಪ್ರವಾದಿ ಮತ್ತು ಅನುಚರರ ಜೀವಿತವನ್ನು ಕಷ್ಟಕರವನ್ನಾಗಿ ಮಾಡಿದಾಗ ಅವರು ತನ್ನ ಅನುಯಾಯಿಗಳಿಗೆ ಮಕ್ಕದಿಂದ ಮದೀನಕ್ಕೆ ವಲಸೆ ಹೋಗಲು ಹೇಳಿದರು. ತಮ್ಮ ನಾಡಿನವರ ಮೇಲೆ ಕೈಯೆತ್ತುವುದಕ್ಕೆ ಬದಲಾಗಿ ತಮ್ಮ ಪ್ರಿಯ ನಾಡನ್ನು ಬಿಟ್ಟು ಹೋಗುವುದನ್ನು ಅವರು ಬಯಸಿದರು. ಆದರೆ ಅನಂತರ ಅವರ ಮೇಲೆ ದೌರ್ಜನ್ಯ ಮಿತಿಮೀರಿದಾಗ ಅವರು ತನ್ನ ಮತ್ತು ಇಸ್ಲಾಮಿನ ರಕ್ಷಣೆಗಾಗಿ ಖಡ್ಗ ಎತ್ತಿದರು.... ಧರ್ಮದ ಪ್ರಚಾರಕ್ಕಾಗಿ ಬಲಾತ್ಕಾರವು ಅನುಮತಿಸಲ್ಪಟ್ಟಿದೆ ಎನ್ನುವುದು ಧರ್ಮದ ಕುರಿತಾಗಲೀ ಲೋಕದ ಕುರಿತಾಗಲೀ ಅರಿವಿಲ್ಲದ ಮೂಢ ಜನರ ವಿಶ್ವಾಸವಾಗಿದೆ. ಅವರು ನಿಜವಾದ ಸತ್ಯದಿಂದ ದೂರ ಸರಿದಿರುವ ಕಾರಣ ಇಂತಹ ತಪ್ಪು ವಿಶ್ವಾಸಾದರ್ಶಗಳ ಕುರಿತು ಅಭಿಮಾನ ಹೊಂದಿದ್ದಾರೆ."
>
> **(ನವಾಂ ಹಿಂದೂಸ್ತಾನ್, ಡೆಲ್ಲಿ 17-11-1947)**

ಇಸ್ಲಾಮ್ ಧರ್ಮವನ್ನು ಚೆನ್ನಾಗಿ ಮನವರಿಕೆ ಮಾಡಿದುದು ಯಾರು? ಈ ಸಿಖ್ ಪತ್ರ ಕರ್ತರೋ ಅಥವಾ "ಮಿರ್ಝಾಜೆ ಸನಾಸೆ ರಸೂಲ್" (ಪ್ರವಾದಿಯ ಮನೋಭಾವನೆಯನ್ನು ಅರಿತವನು) ಎಂದು ಅಭಿಮಾನದಿಂದ ಬೀಗುವವರೋ?

(ಮುಂದುವರಿಯುವುದು)

ಇಂಗ್ಲಿಷ್‌ನಿಂದ ಭಾಷಾಂತರ : A. ಅಬ್ದುಸ್ಸಲಾಮ್

*Read*

**The Review of Religions**

**Annual Subscription :Rs 100/-**

Write to: The Manager

The Review of Religions,

Qadian- 143516 (Punjab)

*Read*

**BADR**

Urdu Weekly

**Annual Subscription :Rs 250/-**

Write to: The Manager

The BADR Weekly

QADIAN - 143516 (Punjab)

ದೇವಾಸ್ತಿತ್ವವನ್ನು ರುಜುಗೊಳಿಸುವ, ಧರ್ಮಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಧರ್ಮಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಧರ್ಮ ಮತ್ತು ಧರ್ಮಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

| ಬಿಡಿ ಪ್ರತಿ : ರೂ.5-00 | ವಾರ್ಷಿಕ ಚಂದಾ : ರೂ.20-00 | ಅಂಚೆ ಮೂಲಕ: ರೂ.30-00 |
|---|---|---|


ವ್ಯವಹರಿಸಿರಿ :

**The Editor**

## YUGARASHMI

**Kannada Quarterly**

10-23-1008/1, 1st Floor, Ansari Road,
Bunder, Mangalore - 575 001


"ಯುಗರಶ್ಮಿ"ಯ ನಾಲ್ಕು ಸಂಚಿಕೆಗಳ ಪ್ರತಿಗಳನ್ನು ಉಚಿತವಾಗಿ ವಿತರಣೆ ಮಾಡಲು ಸಹಾಯಧನ ನೀಡಿದ ಉದಾರಶೀಲರು

| | ಪ್ರತಿಗಳು |
|---|---|
| 1. ಕೆ.ಕೆ. ಬದ್ರುದ್ದೀನ್ ಸಾಹೇಬ್, ಕರಂಬಾರ್ | 300 |
| 2. ಯು. ಎಚ್. ಅಬ್ದುಲ್ಲತೀಫ್ ಸಾಹೇಬ್, ಉದ್ಯಾವರ | 40 |
| 3. ಬಿ.ಎಸ್. ಅಬ್ದುರ್ರಹೀಂ ಸಾಹೇಬ್, ಪುತ್ತೂರು | 30 |
| 4. ಅಲ್ಲಾಹ್ ಬಕ್ಷ್ ಸಾಹೇಬ್, ಪ್ರೆಸಿಡೆಂಟ್ ಜ.ಅ., ಶಿವಮೊಗ್ಗ | 10 |
| 5. ಎಂ. ಬಶೀರ್ ಅಹ್ಮದ್ ಸಾಹೇಬ್, ಪ್ರೆಸಿಡೆಂಟ್ ಜ.ಅ., ಸೊರಬ | 10 |

Registered with the Registrar of Newspapers for India No. R.N. 27354/75
YUGARASHMI Kannada Quarterly, October - 2005

ದಿನಂಪ್ರತಿ 24 ಗಂಟೆಗಳ ಕಾಲ ಪ್ರಸಾರಗೊಳ್ಳುತ್ತಿರುವ

ಏಕೈಕ ಇಸ್ಲಾಮೀ ಟಿ.ವಿ. ಚ್ಯಾನೆಲ್

# ಮುಸ್ಲಿಂ ಟೆಲಿವಿಶನ್ ಅಹ್ಮದಿಯಾ ಇಂಟರ್‌ನೇಶನಲ್

# THE FIRST ISLAMIC SATELLITE CHANNEL

**BROADCASTING ROUNDTHE CLOCK**

| | | | |
|---|---|---|---|
| SATELLITE | : ASIASAT 3S | POLARISATION | : HORIZONTAL |
| POSITION | : 105.5° EAST | SYMBOL RATE | : 2600 MBPS |
| FREQUENCY | : 3760 MHZ | FEC | : 7/8 |
| MIN. DISH SIZE | : 1.8 METRE | | |

E-Mail : info@alisam.org Website : http:www.alislam.org/mta

ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ

ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

## ಕನ್ನಡ ಭಾಷಾಂತರ

ಬೆಲೆ : ರೂ. 200/-

ದೊರೆಯುವ ವಿಳಾಸ :

AHMADIYA MUSLIM MISSION
No.1, 3rd Cross Road,
Wilson Garden,
Bangalore - 560 027
Phone : 080 - 22246133

NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at Karavali Printers, Azizuddin Road, Mangalore on behalf of Jubilee Printing Press, Mangalore.
Typeset at View Graphics, Car street, Mangalore - 575 001